UNIVERSAL
LIBRARY
OU_202104
UNIVERSAL
LIBRARY

MADRAS UNIVERSITY KANARESE SERIES No. 3.

Oriental Research Institute Publication

ABHIDHANA VASTHU KOSHA

BY

NAGAVARMA

ನಾಗವರ್ಮ ಕೃತಮಪ್ಪ

ಅಭಿಧಾನ ವಸ್ತು ಕೋಶಂ

EDITED BY

A. VENKATA RAU, B.A. L.T., *Senior Lecturer*

AND

PANDIT H. SESHA AYYANGAR, *Junior Lecturer*

Institute of Oriental Research
University of Madras



UNIVERSITY OF MADRAS

1933

Price Rs. 3-8-0

ಮುನ್ನುಡಿ.

ಕರ್ನಾಟಕ ಕವಿಚರಿತೆಯನ್ನು ಬರೆದಿರುವ, ಮಃ ರಾ॥ ರಾವ್‌ಬಹದೂರ್ ಆರ್. ನರಸಿಂಹಾಚಾರ್ಯರವರು "ನಾಗವರ್ಮ" ಎಂಬ ಹೆಸರಿನ ಕವಿಗಳ ವಿಷಯವನ್ನು ವಿಮರ್ಶಿಸುವ ಸಂದರ್ಭದಲ್ಲಿ ಈ ಹೆಸರಿನ ಕವಿಗಳು ಇಬ್ಬರೆಂದೂ, ಕ್ರಿ. ಶ. ೯೯೦ (ಶಕ-೯೧೨) ರಲ್ಲಿದ್ದ "ನಾಗವರ್ಮ" ನೆಂಬವನು "ಕನ್ನಡ ಕಾದಂಬರಿ," "ಛಂದೋಂಬುಧಿ" ಎಂಬೆರಡು ಗ್ರಂಥಗಳನ್ನು ಬರೆದವನೆಂದೂ, ಕ್ರಿ. ಶ. ೧೧೪೫ (ಶಕ ೧೦೬೭) ರಲ್ಲಿದ್ದ ಎರಡನೆಯ ನಾಗವರ್ಮ (ಪಂಡಿತ ನಾಗವರ್ಮ)ನು "ವಸ್ತುಕೋಶ," "ಕಾವ್ಯಾವಲೋಕನ" "ಛಂದೋವಿಚಿತಿ," ಎಂಬ ಗ್ರಂಥಗಳನ್ನು ಬರೆದವನೆಂದೂ ಚರ್ಚಿಸಿ ತಮಗೆ ಉಪಲಬ್ಧವಾದ ಕಾರಣಗಳನ್ನಿತ್ತು ಸಿದ್ಧಾಂತಪಡಿಸಿ ಈ ಎರಡನೆಯ ನಾಗವರ್ಮನ "ಛಂದೋವಿಚಿತಿ" ಯೆಂಬ ಗ್ರಂಥವು ಉಪಲಬ್ಧವಾಗಿಲ್ಲವೆಂದೂ ಬರೆದಿರುವರು.

ತಾತ್ಕಾಲಿಕವಾಗಿ ಉಪಲಬ್ಧವಾಗಿರುವ ಈತನ ಎರಡು ಗ್ರಂಥಗಳಲ್ಲಿ ಕಾವ್ಯಾವಲೋಕನವು, ಮೈಸೂರು ಶಾಸನದ ಇಲಾಖೆಯಿಂದ ಬಹುಕಾಲದ ಹಿಂದೆಯೇ ಮುದ್ರಿತವಾಗಿ ಪ್ರಕಟಗೊಂಡು ಕನ್ನಡಿಗರ ವಿಶೇಷಾದರಕ್ಕೆ ಪಾತ್ರವಾಗಿರುವುದು. ಇದರಂತೆಯೇ ವಸ್ತುಕೋಶವೂ ಕನ್ನಡಿಗರ ಉಪಯೋಗಕ್ಕೆ ಬರಬೇಕೆಂಬುದೇ ಈ ಗ್ರಂಥದ ಮುದ್ರಣೋದ್ಯೋಗದ ಮುಖ್ಯೋದ್ದೇಶವು.

ಪ್ರಕೃತದಲ್ಲಿ ಈ ಗ್ರಂಥವು ಎರಡು ಹಸ್ತಲಿಖಿತಪ್ರತಿಗಳ ಆಧಾರದಿಂದ ಮುದ್ರಿತವಾಗಿರುವುದು. ಇವುಗಳಲ್ಲಿ ಒಂದನೆಯದು ಮೈಸೂರು ಶಾಸನದ ಇಲಾಖೆಯಲ್ಲಿ ಪಂಡಿತ ಪದವಿಯನ್ನಲಂಕರಿಸಿದ್ದು ಈಗ ವಿಶ್ರಾಂತಿ ಸುಖವನ್ನನುಭವಿಸುತ್ತಿರುವ ಮಃ ರಾ॥ ಪದ್ಮರಾಜ ಪಂಡಿತರಲ್ಲಿದ್ದ ಕಾಗದದ ಪ್ರತಿಯ ಪ್ರತಿಬಿಂಬರೂಪವಾದ ಕಾಗದದ ಪ್ರತಿಯು. ಇದನ್ನು ಇಲ್ಲಿಯ ವ್ಯವಹಾರಕ್ಕಾಗಿ "ಕ" ಪ್ರತಿಯೆಂದು ಕರೆಯ ಬಹುದು. ಎರಡನೆಯದು ಉತ್ತರ ಹಿಂದುಸ್ಥಾನದ "ಆರಾ" ಎಂಬಲ್ಲಿರುವ ಜೈನಸೆಂಟ್ರಲ್ ಲೈಬ್ರರಿಯನ್ನರಾದ ಮಃ ರಾ॥ ಕೆ. ಭುಜಬಲಿಶಾಸ್ತ್ರಿಗಳವರು ಕಳುಹಿಸಿಕೊಟ್ಟ ತಾಳಪತ್ರಾತ್ಮಕವಾದ ಪ್ರತಿಯು. ಇದಕ್ಕೆ "ಖ" ಎಂಬ ಸಂಜ್ಞೆಯನ್ನು ಕೊಟ್ಟಿದೆ.

ಇವೆರಡು ಪ್ರತಿಗಳಲ್ಲಿಯೂ, ಗ್ರಂಥಲೋಪ ಗ್ರಂಥಪಾತಗಳೂ, ಲೇಖಕ ಭ್ರಮ ಪ್ರಮಾದಾದಿಗಳಿಂದ ಒದಗಬಹುದಾದ ಅಶುದ್ಧಗಳೂ ಹೇರಳವಾಗಿದ್ದು ಶುದ್ಧಪಾಠವುಳ್ಳ ಪದ್ಯಗಳು ಒಂದೆರಡಾದರೂ ಇಲ್ಲವೆನ್ನುವುದು ಅತಿಶಯೋಕ್ತಿಯಾಗಲಾರದು. ಅಲ್ಲದೆ "ಕ" ಪ್ರತಿಯ ಗ್ರಂಥಪಾತಸ್ಥಳಗಳನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿ ನೋಡುವುದಾದರೆ ಇದು "ಖ" ಪ್ರತಿಯ ಪುತ್ರಿಕೆಯೆಂದಾಗಲಿ, ಪುತ್ರಿಕೆಯ ಪುತ್ರಿಕೆಯೆಂದಾಗಲಿ ತೀರ್ಮಾನಿಸಲು ಯಾವಬಗೆಯ ಸಂಶಯವೂ ಇರಲಾರದು. ಅಂತಹ ಸ್ಥಳಗಳಲ್ಲಿ ಒಂದನ್ನು ಮಾತ್ರ ಇಲ್ಲಿ ವಿವರಿಸುವುದು ಅಪ್ರಕೃತವಾಗಲಾರದು. "ಕನ್ನೆ ಕುವಾರಿಕೆ ತಾನಗ್ನಿಕೆ ಗೌರಿಯೆಂಬಳಕ್ಕು ಮದಳ್ವಂ। ಕಾಖ್ಯವರಂಗುಪಯಂತೈ ವಲ್ಲಭಂ ಭರ್ತೃ ಪತಿಪ್ರಿಯನೆನಿಪುದಱಿಗೆ ಮನ್ನಭಿಧಾನಂ." ಇದು "ಕ" ಪ್ರತಿಯ ಪಾಠವು, "ಖ" ಪ್ರತಿಯಲ್ಲಿ ೧೩೭ ನೆಯ ತಾಳೆ ಪತ್ರದ ಐದನೆಯ ಪಜ್ತಿಯ ಕೊನೆಯಲ್ಲಿ ಮೇಲಣ ಪದ್ಯಭಾಗವು "ಮದಳ್ವಂ" (ಮವಳ್‌ಸಂ) ಎಂದು ಮುಗಿದು ಮುಂದಣ ಭಾಗವಾದ "ಪನ್ನೆರುತುಂ" ಎಂದು ಆರಂಭವಾಗುವ

ಪಜ್ಜೆಯ ಓಲೆಯ ಆದಿಯಲ್ಲಿ ಮೇಲಣ ಪಜ್ಜೆಯ "ಯ್ಯ" [1]ಎಂಬ ಅಕ್ಷರದ ಎತ್ವವು ಇರುವುದರಿಂದ ಪಜ್ಜೆಯು ಆ ಓಲೆಯ ಮಧ್ಯದಿಂದ ಆರಂಭವಾಗಿರುವಕಾರಣದ "ಪನ್ನಿರುತು" ಎಂಬ ಈ ಪಜ್ಜೆಯೇ ಥಟ್ಟನೆ ಸ್ಫೂರ್ತಿಗೆ ಬರದೆ ಅದರ ಮುಂದಣ ಪಜ್ಜೆಯಲ್ಲಿರುವ "ಕಾಖ್ಯವರಂ" ಎಂಬ ಭಾಗವೇ ಥಟ್ಟನೆ ಕಂಡು ಬರುವುದು. ಆದುದರಿಂದ ಈ ಪ್ರತಿಯನ್ನು ನೋಡಿ ಬರೆದವನು "ಮುವಳ್ವಂ ಕಾಖ್ಯನರಂ" ಎಂದು ನಿರಂತರವಾಗಿ ಬರೆಯಲು ಅವಕಾಶವುಂಟು. "ಕ" ಪ್ರತಿಯಲ್ಲಿ ಈ ಬಗೆಯ ಅನುಪೂರ್ವಿಯು ಕಂಡು ಬರುವುದರಿಂದ, ಇದು "ಖ" ಪ್ರತಿಯ ಪುತ್ರಿಕೆ, ಅಥವಾ ಪುತ್ರಿಕೆಯ ಪುತ್ರಿಕೆ ಎಂಬುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಈ ಕಾರಣದಿಂದಲೇ ಇವೆರಡು ಪ್ರತಿಗಳಿಗೂ ಲೇಖಕ ಪ್ರಮಾದದಿಂದ ಸಂಭವಿಸ ಬಹುದಾದ ಅಕ್ಷರ ಸಾಲ್ಲಿತ್ಯಾದಿ ಕೆಲವು ದೋಷಗಳನ್ನು ಬಿಟ್ಟರೆ ಮತ್ತಾವ ಬಗೆಯ ವ್ಯತ್ಯಾಸವೂ ಕಂಡುಬರುವುದಿಲ್ಲ. ಗ್ರಂಥವು ಇಷ್ಟು ಅಶುದ್ಧವಾಗಿದ್ದರೂ, ಮಾತೃಕಾಂತರಗಳ ಅಭಾವದಲ್ಲಿ ದೊರೆತ ಈ ೨ ಪ್ರತಿಗಳೂ ಕಾರಣಾಂತರಗಳಿಂದ ನಷ್ಟವಾಗುವುದಾದರೂ, ಹಾಗೆ ನಷ್ಟವಾಗವೆ ಲೈಬ್ರರಿಗಳಲ್ಲೇ ಸ್ವಸ್ವರೂಪದಿಂದ ಇರುವುದಾವರೂ, ಕನ್ನಡ ಭಾಷಾ ಪ್ರಪಂಚದಲ್ಲಿ ಮೊತ್ತ ಮೊದಲ ವಿಶಾಲವಾದ ನಿಘಂಟುವೆನಿಸಿದ ಇದರ ಪ್ರಯೋಜನವು ಸ್ವಲ್ಪವಷ್ಟಿಗೂ ಕನ್ನಡಿಗರಿಗೆ ದೊರಕದೇ ಹೋಗಬಹುದಾದ ಸಂಭವವನ್ನು ಆಶಂಕಿಸಿ ಸಾಧನಸಂಪತ್ತಿಗಳ ಕೊರತೆಯಿದ್ದರೂ ಇಧರ ಮುದ್ರಣೋದ್ಯೋಗವನ್ನು ಕೈಗೊಂಡು ದಾಯಿತು.

ಈ ಕವಿಯು ತನ್ನ ಈ ಗ್ರಂಥದ ಪೀಠಿಕೆಯಲ್ಲಿ ತಾನು ಸಂಗ್ರಹಿಸಿರುವುದಾಗಿ ಹೇಳುವ ಸಂಸ್ಕೃತ ಭಾಷಾತ್ಮಕವಾದ ಹಲಾಯುಧನ ಅಭಿಧಾನ ರತ್ನಮಾಲೆ, ಅಮರಸಿಂಹನ ನಾಮಲಿಂಗಾನುಶಾಸನ, ವರರುಚಿಯಕೋಶ, ಶಾಶ್ವತ, ಧನಂಜಯಕೋಶ, ವಾಗುರಿಕೋಶ,[2] ಇವುಗಳು ಗ್ರಂಥ ಶೋಧನೆಯಲ್ಲಿ ವಿಶೇಷ ಸಹಾಯವನ್ನೊದಗಿಸಿರುವುವು. ಅಲ್ಲದೆ ಈ ವಸ್ತುಕೋಶವನ್ನೇ ಆದರ್ಶವಾಗಿಟ್ಟುಕೊಂಡು ಭಾವಿನೀಪಟ್ಟಿಯಲ್ಲಿ ಬರೆದಿರುವ "ಕರ್ಣಾಟಕ ಮಂಗರಾಜ ನಿಘಂಟು" ವೂ ಹೇಮಚಂದ್ರನ ಸಂಸ್ಕೃತ ಭಾಷಾತ್ಮಕವಾದ ಹೈಮಕೋಶವೂ ಅಲ್ಲಲ್ಲಿ ತಕ್ಕಮಟ್ಟಿಗೆ ಸಹಾಯವನ್ನು ಮಾಡಿವೆ.

ಮೇಲೆ ಹೇಳಿರುವ ನಿಘಂಟುಗಳ ಪರ್ಯಾಲೋಚನೆಯಿಂದ ಗ್ರಂಥವನ್ನು ಪರಿಶೋಧಿಸಿ ಪ್ರಕೃತ ಸ್ಥಿಯಲ್ಲಿ ಮುದ್ರಿಸಲಾಯಿತು.

---

[1] ಹಳಗನ್ನಡಲಿಪಿಗಳಲ್ಲಿ ಎತ್ವವು ಯಕಾರದ ಒತ್ತಿನ ರೂಪದಲ್ಲಿರುವುದು. ಇದರ ಪರಿಮಾಣವು ಅಕ್ಷರಪರಿಮಾಣಕ್ಕೆ ಎರಡೆ ಮೂರರಷ್ಟಿರುವುದು. ಹೀಗೆಯೇ ಅಕ್ಷರಗಳ ಒತ್ತುಗಳೂ ಅಕ್ಷರಗಳ ಪ್ರಮಾಣವನ್ನು ವಿಾರಿರುವುವು. ಇದರಿಂದ ಹಲವು ಶಾಸನಗಳಲ್ಲಿ ಅಕ್ಷರ ಮತ್ತು ಪಜ್ಜೆಗಳ ಭ್ರಾಂತಿಗಳು ವಿಶೇಷವಾಗಿ ತೋರಿಬರುವುವು.

[2] ಈ ಕೋಶವು ಸಂಪೂರ್ಣವಾಗಿ ಗ್ರಂಥರೂಪದಲ್ಲಿ ದೊರಕಿಲ್ಲ. ಹಲವು ಮಂದಿ ವ್ಯಾಖ್ಯಾಕಾರರು ಅಲ್ಲಲ್ಲೇ ಕೆಲವು ವಾಕ್ಯಗಳನ್ನು ಉದಹರಿಸಿರುವರು. ನಮಗೆ ದೊರಕಿದ ಕೆಲವು ವಾಕ್ಯಗಳನ್ನು ಸಂಗ್ರಹಿಸಿ ಈ ಗ್ರಂಥವ ಶೋಧನೆಯಲ್ಲಿ ಉಪಯೋಗಿಸಿದೆ.

ಉದಾ—ಶಕ್ಲೋವದನ್ಯಃ ಪ್ರಿಯವಾ೯ ನದಾನ್ಯೋ ದಾನಶೀಲಕಃ॥ ವಾಗುರಿಃ.

ಗ್ರಂಥ ಶರೀರವೆಲ್ಲವೂ ಮುದ್ರಿತವಾದ ಬಳಿಕ ಮೈಸೂರು ಓರಿಯಂಟಲ್ ಲೈಬ್ರರಿಯಲ್ಲಿ ಎಡಿಟೋರಿಯಲ್ ಪಂಡಿತ ಪದವಿಯಲ್ಲಿರುವ ಡಿ. ಎಲ್. ನರಸಿಂಹಾಚಾರ್; ಎಂ. ಎ. ಯವರಲ್ಲಿದ್ದ ಟೀಕೆಯೊಡಗೂಡಿದ ತಾಳೆಪತ್ರದ ಪ್ರತಿಯೊಂದು ದೊರಕಿತು.[1] ಇದನ್ನು "ಗ" ಪ್ರತಿಯೆಂದು ಕರೆಯ ಬಹುದು. ಈ ಪ್ರತಿಯಲ್ಲಿಯೂ ಗ್ರಂಥಲೋಪ, ಗ್ರಂಥಪಾತ, ಅಕ್ಷರ ಸ್ಖಾಲಿತ್ಯಾದಿ ದೋಷಗಳು "ಕ" "ಖ" ಪ್ರತಿಗಳಿಗಿಂತ ಹೇರಳವಾಗಿದ್ದರೂ ಪ್ರಕೃತ ಮುದ್ರಿತವಾಗಿರುವ ಗ್ರಂಥದಲ್ಲಿರುವ ಲೋಪಗಳನ್ನು ಸರಿಪಡಿಸಿಕೊಳ್ಳಿತಕ್ಕ ಸುಯೋಗ (ದ ಲಾಭವು) ವು ಇದರಿಂದ ಲಭಿಸಿದುದು ತುಂಬಾ ಶ್ಲಾಘನೀಯವಾದುದೇ ಸರಿ. ಈ ಗ್ರಂಥದ ಸ್ವರೂಪವನ್ನು ವಾಚಕರ ಅವಗಾಹನೆಗೆ ತರ ಬೇಕೆಂಬ ಉದ್ದೇಶದಿಂದ ಇದರ ಸಂಪೂರ್ಣ ಪಾಠವನ್ನು ಎರಡನೆಯ ಪರಿಶಿಷ್ಟವಾಗಿ ಕೊಟ್ಟಿದೆ. ನಿಘಂಟುವಿನ ಅಂಗವಾದ ಶಬ್ದಗಳ ಅಕಾರಾದ್ಯನುಕ್ರಮಣಿಕೆಯ ಪಟ್ಟಿಯೇ ಇದರ ಒಂದನೆಯ ಪರಿಶಿಷ್ಟವು. ನಿಘಂಟುವಿನ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಟೀಕೆಯು ಅತ್ಯಾವಶ್ಯಕವಾಗಿರುವುದರಿಂದ ಇದರ ಟೀಕೆಯನ್ನು ಕಾರಣಾಂತರಗಳಿಂದ ಇದರೊಡನೆ ಸೇರಿಸಿ ಮುದ್ರಿಸಲು ಅವಕಾಶವಾಗಲಿಲ್ಲ. ಕಾಲಕ್ರಮದಲ್ಲಿ ಇದರ ಅನುಬಂಧ ಗ್ರಂಥವಾಗಿ (ಸಪ್ಲಿಮೆಂಟ್ ವಾಲ್ಯೂಂ) ಮುದ್ರಿತವಾಗುವ ಆಶಂಸೆಯುಂಟು.

ಪ್ರಕೃತ ಮುದ್ರಣದಲ್ಲಿ ಮಾತೃಕಾಂತರಗಳ ಅಭಾವದಿಂದ ಹಲವು ಸ್ಖಾಲಿತ್ಯಗಳಿರಬಹುದಾದರೂ ಗುಣಜ್ಞರಾದ ಪಂಡಿತರು "ನೀರಕ್ಷೀರನ್ಯಾಯ" ವನ್ನನುಸರಿಸಿ ಗುಣಲೇಶಸ್ವೀಕಾರದಿಂದ ಈ ನಿಘಂಟುವಿನ ಉಪಯೋಗವನ್ನು ಪಡೆಯುವುದಾದರೆ ನಮ್ಮ ಶ್ರಮವು ಸಾರ್ಥಕವಾಗುವುದೆಂಬುದೇ ಸಹೃದಯರಲ್ಲಿ ನಮ್ಮ ಸವಿನಯ ಪ್ರಾರ್ಥನೆಯು.

ಗ್ರಂಥ ಸ್ವರೂಪ ನಿರೂಪಣಂ

ನಿರತಿಶಯಾನಂದರೂಪವಾದ ಕಾವ್ಯರಸಾಸ್ವಾದವು ಪರಬ್ರಹ್ಮಸ್ವಾದಸೋದರವೆಂಬುದು ಸಕಲ ತಾಂತ್ರಿಕ ಸಿದ್ಧಾಂತವು. ಈ ಕಾವ್ಯ ಲಕ್ಷಣವನ್ನು ಆಲಂಕಾರಿಕರಲ್ಲಿ ಹಲವರು ಹಲವು ವಿಧವಾಗಿ ನಿರೂಪಣ ಮಾಡಿದ್ದರೂ ಪರ್ಯವಸಾನದಲ್ಲಿ ಕಾವ್ಯ ಶರೀರವು ಶಬ್ದಾರ್ಥನಿಚಿತವಾದುದೆಂಬುದನ್ನು ಯಾರೂ ಪ್ರತಿಭಟಿಸುವುದಿಲ್ಲ. ಕರ್ಣಾಟಕಲಾಕ್ಷಣಿಕರಲ್ಲಿ ಮೊತ್ತಮೊದಲಿಗನಾದ ಕವಿರಾಜ ಮಾರ್ಗಕರ್ತೃವು—ಕಾವ್ಯ ಲಕ್ಷಣವನ್ನು

ಕವಿಭಾವ ಕೃತಾನೇಕ ।
ಪ್ರವಿಭಾಗ ವಿವಿಕ್ತ ಸೂಕ್ತ ಮಾರ್ಗಂ ಕಾವ್ಯಂ ॥
ಸವಿಶೇಷ ಶಬ್ದರಚನಂ ।

ಎಂದೂ, ಕಾವ್ಯಾವಲೋಕನ ಕರ್ತೃವಾದ ನಾಗವರ್ಮನು—

ಇರೆ ಶಬ್ದಾರ್ಥಂಗಳ್ ತ ।
ತ್ಪರತೆಯಿನದು ಕಾವ್ಯಂ..... ॥

---

[1] ಇದರಲ್ಲಿ ನಾನಾರ್ಥವರ್ಗದಲ್ಲಿ ೫೦ ಪದ್ಯಗಳು ಮಾತ್ರವಿವೆ. ಗ್ರಂಥಾಂತ್ಯದ ಪ್ರಶಸ್ತಿ ಪದ್ಯಗಳೂ, ಗದ್ಯವೂ ಇಲ್ಲ. ಕೊನೆಯಲ್ಲಿ ನಾಗವರ್ಮ ನಿಘಂಟು ಸಮಾಪ್ತಂ- ಎಂದಿದೆ.

ಎಂದೂ ನಿರೂಪಿಸಿರುವರು. ಇಂತಹ ಶಬ್ದಾರ್ಥಗಳ ಪ್ರತ್ಯಯವನ್ನುಂಟುಮಾಡುವ ವ್ಯಾಕರಣಾದಿ [1]ಸಾಧನಗಳಲ್ಲಿ ನಿಘಂಟುವೂ ಒಂದೆಂದು ತಾಂತ್ರಿಕರಿಂದ ಪರಿಗಣಿತವಾಗಿದೆ. ನಿಘಂಟು ವೆಂಬುದು, ವ್ಯವಹಾರ ಯೋಗ್ಯವಾದ ಭಿನ್ನಾರ್ಥಕ, ಸಮಾನಾರ್ಥಕ, ನಾಮಪದಗಳೆ [2](ಪ್ರಾದಿಪದಿಕಗಳೆ) ವಾಚ್ಯವಾಚಕ ಭಾವವನ್ನು ಪರ್ಯಾಯಪದಗಳೊಡನೆ ತಿಳಿಸುವ ಗ್ರಂಥವೆಂದು ಲಕ್ಷಣಕಾರರು ನಿರೂಪಿಸಿರುವರು. ಪ್ರಕೃತ ಗ್ರಂಥವು ಕರ್ಣಾಟಕ ಭಾಷೆಯಲ್ಲಿ ಛಂದೋರೂಪವಾಗಿ ಕನ್ನಡಕಬ್ಬಗಳಲ್ಲಿ ಪ್ರಯೋಗಿಸಬಹುದಾದ ಸಮಸಂಸ್ಕೃತಶಬ್ದಗಳ ಸ್ವರೂಪವನ್ನು ತಿಳಿಸುವ ಕೋಶವಾಗಿದೆ.[3] ಇದರಲ್ಲಿ ಸಮಸಂಸ್ಕೃತಶಬ್ದಗಳು ಮಾತ್ರವಲ್ಲದೆ ಅಲ್ಲಲ್ಲೇ ಹಲವು ದೇಶ್ಯ ಶಬ್ದಗಳೂ ದೊರಕುವುವು. ಅಭಿಧಾನಕೋಶದ ಪ್ರಯೋಜನವನ್ನು,

ಪುದಿದ ಮನಸ್ತಮಮಂ ಬಿಡೆ ।
ಬೆದಱಿಸಿ ಸದರ್ಥ ಪ್ರಕಾಶಮಂ ಮಾಡುಗು ಮಾ ॥
ಪ್ಪುದಱಿಂ ಸಮಸ್ತ ವಿದ್ಯಾ ।
ಪ್ರದೀಪ ಮಭಿಧಾನಕೋಶ ಮಲ್ಲದೆ ಪೆಱಿದೇಂ ॥

ಎಂದು ಈ ಗ್ರಂಥಕರ್ತನೇ ತನ್ನ ಗ್ರಂಥದ ಪೀಠಿಕೆಯಲ್ಲಿ ಕೇಳಿರುವನು.

ಇದಕ್ಕೆ "ಅಭಿಧಾ[ನ] ವಸ್ತುಕೋಶ"ವೆಂದು ಹೆಸರು. ಗ್ರಂಥಕರ್ತೃವು ಪ್ರಕೃತ ಗ್ರಂಥಕ್ಕೆ ಹೆಸರನ್ನು ಕಲ್ಪಿಸುವಾಗ ತನಗೆ ವಿಶೇಷಾಭಿನಂದನೀಯವಾದ ಭಟ್ಟ ಹಲಾಯುಧನ "ಅಭಿಧಾನರತ್ನ

---

[1] ಶಕ್ತಿಗ್ರಹಂ ವ್ಯಾಕರಣೋಪಮಾನ ಕೋಶಾಪ್ತವಾಕ್ಯಾದ್ವ್ಯವಹಾರತಶ್ಚ ॥
ವಾಕ್ಯಸ್ಯ ಶೇಷಾದ್ವಿವೃತೇರ್ವದನ್ತಿ ಸಾನ್ನಿಧ್ಯತಸ್ಸಿದ್ಧಪದಸ್ಯ ವೃದ್ಧಾಃ ॥

[2] ಸಂಸ್ಕೃತದಲ್ಲಿ ಈ ಬಗೆಯ ನಿಘಂಟುಗಳು ನೂರಾರಿರುವುವು. ಧಾತುಗಳ ಅರ್ಥವನ್ನು ತಿಳಿಸುವ ಧಾತು ಪಾಠವು ವ್ಯಾಕರಣ ಶಾಸ್ತ್ರದ ಅಂಗವಾಗಿರುವುದರಿಂದ ಕ್ರಿಯಾ ನಿಘಂಟುವಿನ ಆವಶ್ಯಕತೆಯೇ ಸಂಸ್ಕೃತದಲ್ಲಿಲ್ಲ. ಆದರೂ ಸಂಸ್ಕೃತದಲ್ಲಿ ಒಂದೆರಡು ಕ್ರಿಯಾ ನಿಘಂಟುಗಳೂ ಇರುವುವು. ಮೇಲೆ ಹೇಳಿರುವ ಲಕ್ಷಣವಾದರೋ ಪ್ರಾಚುರ್ಯಪರವು. ಶಬ್ದಮಣಿ ದರ್ಪಣಕಾರನು-ಕ್ರಿಯಾಪದಗಳಿಗೆ ಸಮಾಸವಿಲ್ಲವೂ, ಸಮಾಸಲಕ್ಷಣವನ್ನು ಹೇಳುವಾಗ ಪ್ರಾಚುರ್ಯ ಪ್ರಯೋಗವನ್ನನುಸರಿಸಿ-"ನಾಮಪದಮುದರ್ಥಾನುಗಮಾಗೆಱಿಗೆ ಸಮಾಸಂ" ಎಂದು ಹೇಳಿರುವುದು ಪ್ರಕೃತ ವಿಷಯ ಸಾಧನೆಗೆ ಅನುಕೂಲವಾಗಿರುವುದು. ಸಂಸ್ಕೃತದಲ್ಲಿಯೂ ಈ ಬಗೆಯ ಸಮಾಸ ಲಕ್ಷಣಗಳಿರುವುವು. ಒಬ್ಬ ಸಂಸ್ಕೃತ ವೈಯಾಕರಣನು - "ನಾಮ್ನಾಂ ಸಮಾಸಸ್ಸಂಗತಾರ್ಥಃ" ಎಂದು ಸೂತ್ರಿಸಿರುವನು.

[3] ಕರವೆ ಜಡಮತಿಯು ಮಱಿವಂ ।
ತಿರೆ ಕನ್ನಡದಿಂ ಬಲಕ್ಕನಾಗಿರ್ಪಿನೆಗಂ ॥
ವಿರಚಿಸಿದಂ..... ।
.....॥ ೪ ॥

[4] (ಅ) ಇದುಸಮಸ್ತ.....ಮಪ್ಪ ಅಭಿಧಾನಕೋಶದೊಳ್ ಏಕಾರ್ಥ ಕಾಂಡಂ ಪ್ರಥಮಂ

(ಕಾಂಡಗಳ ಅಂತ್ಯಗದ್ಯ)

(ಇ) ಛಂದೋವಿಚಿತಿ ಯಲಂಕೃತಿ ।
ಸಂದಭಿಧಾ[ವಸ್ತು] ಕೋಶಮೆಂಬಿವು..... ॥

ಕಾವ್ಯಾವಲೋಕನಂ—

ಮಾಲಾ" ಎಂಬ ಕೋಶದ ಹೆಸರೇ ಬುದ್ಧಿಯಲ್ಲಿ ಸನ್ನಿಹಿತವಾಗಿದ್ದುದರಿಂದ, "ಅಭಿಧಾನ ವಸ್ತು ಕೋಶ ವೆಂಬ ಹೆಸರನ್ನೇ ತನ್ನ ಈ ಗ್ರಂಥಕ್ಕೂ ಕೊಟ್ಟಿರುವಂತೆ ಭಾಸವಾಗುವುದು. ವಸ್ತು ಕೋಶ ವೆಂದರೆ ಪದಾರ್ಥಗಳನ್ನು ಸಂಗ್ರಹಿಸಿಟ್ಟಿರುವ ಎತೆ. ಪ್ರಕೃತವಾದ ಅಭಿಧಾನವಸ್ತು ಕೋಶವೆಂಬ ಈ ಶಬ್ದಕ್ಕೆ (ಅಭಿಧಾನಗಳ) ಪದಾರ್ಥಗಳ ಸ್ವರೂಪವನ್ನು ತಿಳಿಸುವ ಶಬ್ದಗಳನ್ನು ಸಂಗ್ರಹಿಸಿರುವ ಗ್ರಂಥವೆಂದು ತಾತ್ಪರ್ಯವು.

ಈ ಕೋಶವು ಕಂದವೃತ್ತಗಳಲ್ಲಿ ಬರೆಯಲ್ಪಟ್ಟಿದೆ. ಕಂದಗಳೇ ವಿಶೇಷವಾಗಿರುವುವು. ಕರ್ಣಾಟಕಭಾಷೆಯಲ್ಲಿ ಪ್ರಸಿದ್ಧವಾಗಿರುವ, ಸಂಸ್ಕೃತ ವೃತ್ತಜಾತಿಗಳಲ್ಲಿ ಉತ್ಪಲಮಾಲೆ, ಶಾರ್ದೂಲ, ಸ್ರಗ್ಧರೆ, ಮಹಾಸ್ರಗ್ಧರೆ, ಮತ್ತೇಭ, ಚಂಪಕಮಾಲೆ, ಮಾಲಿನಿ, ಮಂದಾಕ್ರಾಂತ, ವಸಂತತಿಲಕ, ಶಾಲಿನಿ, ಕಿಖರಿಣಿ, ಹರಿಣಿ, ಪ್ರಹರ್ಷಣಿ, ವಂಶಸ್ಥ, ಉಪೇಂದ್ರವಜ್ರ, ಎಂಬ ಸಮವೃತ್ತಗಳೂ, ಉಪಜಾತಿ ವೃತ್ತಗಳೂ, ಅರ್ಧ ಸಮವೃತ್ತವೂ, ಕನ್ನಡಭಾಷೆಯಲ್ಲಿ ಅಸಾಧಾರಣಗಳಿವ ಅಕ್ಕರ, ತ್ರಿಪದಿ ಗಳೂ ಅಲ್ಲಲ್ಲಿ ಇರುವುವು. ಆದರೆ ದ್ರಾವಿಡ ಭಾಷಾ ಪ್ರಪಂಚದ ಛಂದಸ್ಸಿಗೆ ಪ್ರಾಣಭೂತವಾದ ಪ್ರಾಸನಿಯಮಕ್ಕೆ ವಿರುದ್ಧವಾಗಿರುವ ಉಪಜಾತಿ ವೃತ್ತವನ್ನೂ,[1] ಕನ್ನಡ ಕಾವ್ಯಗಳಲ್ಲಿ ಎಲ್ಲಿಯೂ ದೊರಕದಿರುವ ಅರ್ಧ ಸಮವೃತ್ತವನ್ನೂ[2] ಈ ಕವಿಯು ಪ್ರಯೋಗಿಸಿರುವ ವಿಶೇಷಸಂಗತಿಯನ್ನು ಗಮನಿಸಬೇಕಾದುದೊಂದು ಮುಖ್ಯಾಂಶವು.

ಕರ್ಣಾಟಕ ವ್ಯಾಕರಣಕಾರರು ಕನ್ನಡ ಭಾಷೆಯಲ್ಲಿ ಸಮಾನಪದಗಳಲ್ಲಲ್ಲದೆ ವ್ಯಸ್ತ ಪದ ವಾಗಿ ಪ್ರಯೋಗಿಸಕೂಡದೆಂದು ಸಿದ್ಧಾಂತಮಾಡಿರುವ[3] "ವಾ" "ಬತ" ಮೊದಲಾದ ಹಲವು ಸಂಸ್ಕೃತ ನಿಪಾತಾವ್ಯಯಗಳನ್ನು ಈ ಕವಿಯು ನಾನಾರ್ಥವರ್ಗದಲ್ಲಿ ಸೇರಿಸಿರುವುದರಿಂದ ಈತನು ಕರ್ಣಾ ಟಕ ಲಾಕ್ಷಣಿಕರ ಸಿದ್ಧಾಂತಕ್ಕೆ ವಿರುದ್ಧವಾಗಿ ಸಂಸ್ಕೃತ ನಿಪಾತಾವ್ಯಯಗಳನ್ನೂ ಸಮ ಸಂಸ್ಕೃತ ಪದಗಳಂತೆಯೇ ಕನ್ನಡ ಗ್ರಂಥಗಳಲ್ಲಿ ವ್ಯಸ್ತವಾಗಿ ಪ್ರಯೋಗಿಸಬಹುದೆಂಬ ಪಕ್ಷಯವನ್ನು ಜ್ಞಾಪಿ ಸಿರುವನೆಂದು ಕೆಲವರು ವಾದಿಸಬಹುದು. ಆದರೆ ಈ ಶಬ್ದಗಳನ್ನು ಇಲ್ಲಿ ಹೇಳಿರುವುದಕ್ಕೆಹಾಗೆ ತಾತ್ಪ ರ್ಯವನ್ನು ಕಲ್ಪಿಸುವುದು ಅಷ್ಟು ಉಚಿತವಾಗಲಾರದು. ಸಂಸ್ಕೃತಸಮಸ್ತ ಪದಗಳಲ್ಲಿ (ಸಮ ಸಂಸ್ಕೃತ ಪದಗಳಲ್ಲಿ) ಸೇರಿರುವ ಸಂಸ್ಕೃತ ನಿಪಾತಾವ್ಯಯಗಳ ಅರ್ಥವು ತನ್ನ ಕೋಶವನ್ನು ಓದತಕ್ಕ ಕನ್ನ ಡಿಗರಿಗೆ ಸುಲಭವಾಗಿ ತಿಳಿಯಬೇಕೆಂಬುದೇ ಅಂತಹ ಶಬ್ದಗಳನ್ನು ಇಲ್ಲಿ ಸೇರಿಸಿರುವುದಕ್ಕೆ ಈ ಕವಿಯ ಮುಖ್ಯ ತಾತ್ಪರ್ಯವೆಂದು ಕಲ್ಪಿಸುವುದಾದರೆ ಯಾವ ಬಗೆಯ ದೋಷಕ್ಕೂ ಅವಕಾಶವಿರುವುದಿಲ್ಲ.

ಈ ಕವಿಯು "ವಾಕ್" ಮೊದಲಾದ ಕೆಲವು ವ್ಯಂಜನಾಂತ ಶಬ್ದಗಳ "ವಾಕ್ಕು" ಮೊದ ಲಾದ ಸಮಸಂಸ್ಕೃತರೂಪಗಳನ್ನು ಕೊಡದೆ ಸಂಸ್ಕೃತ ಮೂಲರೂಪಗಳನ್ನೇ ಈ ಸಮಸಂಸ್ಕೃತ ಶಬ್ದಗಳ ನಿಘಂಟುವಿನಲ್ಲಿ ಕೊಟ್ಟಿರುವುದು ವಿಚಾರಾರ್ಹವಾದುದು. ಆದರೆ ಅಂತಹ ಪದಗಳನ್ನು ಇತರ ಪರ್ಯಾಯ ಪದಗಳೊಡನೆ ದ್ವಂದ್ವಸಮಾಸವಾಡಿ ಈ ದೋಷವನ್ನು ದೂರ ಮಾಡ ಬಹುದು. ಇದಲ್ಲದೆ, ಕನ್ನಡ ವ್ಯಾಕರಣ ನಿಯಮಕ್ಕೆ ವಿರುದ್ಧವಾಗಿರುವ, ಅಕಾರಾಂತ ಶಬ್ದಗಳ ಪ್ರಕೃತಿ ಪ್ರಯೋಗವೂ,[4] ಲಕ್ಷ್ಮಾಕ್ಷರಾಂತ ಪದಗಳ ಮುಂದ ಸಂಯುಕ್ತ ವ್ಯಂಜನಾದಿ ಪದಗಳ ಪ್ರಯೋ ಗವೂ[5] ಅಲ್ಲಲ್ಲಿಕಂಡು ಬರುವುವು.

---

[1] ಅವಿ. ಮೃಗ. ೧೩. [2] ಸಾ. ವಿ. ಣ. ೪೩ ಸಮುದಿತ ಸಂಖ್ಯಾ. ವ್ಯಯರಹಿತ...ಶಬ್ದಮಣಿ ದರ್ಪಣಂ, [3] ವಾನರ (ವಿಕಲ್ಪದಿಂದ ಮನುಷ್ಯ) [4] ಅವಿ. ಪಶು. ೧೩. [5] ಅವಿ. ಸಮು. ೭೬.

ಸಂಸ್ಕೃತ ಶಬ್ದಗಳ ಅಂತ, ಲಿಂಗ, ವಿಭಕ್ತ್ಯಾದಿಗಳ ಪರಿಚಯವು ಕಡಿಮೆಯಾಗಿರುವುದರಿಂದ ಸಂಸ್ಕೃತ ಕೋಶಗಳ ಉಪಯೋಗವನ್ನು ಪಡೆಯಲು ಶಕ್ತಿ ಸಾಲದಿರುವ ಕನ್ನಡಿಗರಿಗೆ ಈ ಕೋಶವು ಹೆಚ್ಚು ಪ್ರಯೋಜನಕಾರಿಯಾಗಿರುವುದು.

ಈ ಕೋಶಕಾರನು ಗ್ರಂಥದ ಪೀಠಿಕಾ ಪ್ರಕರಣದಲ್ಲಿ, ವರರುಚಿ, ಭಾಗುರಿ, ಹಲಾಯುಧ, ಶಾಶ್ವತ, ಧನಂಜಯ, ಅಮರಕೋಶ ಮೊದಲಾದ ಸಂಸ್ಕೃತ ಕೋಶಗಳಿಂದ ಶಬ್ದಗಳನ್ನು ಸಂಗ್ರಹಿಸಿ ಪ್ರಕೃತ ಗ್ರಂಥವನ್ನು ತಾನು ಬರೆದುದಾಗಿ ಹೇಳಿದ್ದರೂ, ವಿಶೇಷವಾಗಿ ಹಲಾಯುಧ ಕೋಶವನ್ನೇ ಅನುಸರಿಸಿರುವನು. ಅಮರಕೋಶದಲ್ಲಿರುವ ಹಲವು ಶಬ್ದಗಳೂ ಇದರಲ್ಲಿ ದೊರಕುವುವು. ಹೈಮ ಕೋಶದಲ್ಲಿಯ ಕೆಲವು ಅಪೂರ್ವ ಪದಗಳೂ ಇದರಲ್ಲಿ ದೊರಕುವುದರಿಂದ ಆ ಕೋಶವನ್ನೂ ಈತನು ಉಪಯೋಗಿಸಿಕೊಂಡಿರುವಂತೆ ಊಹಿಸ ಬೇಕಾಗಿರುವುದು. ಪರ್ಯಾಯ ಪದಗಳನ್ನು ಹೇಳುವಾಗ ಕೆಲವೆಡೆಗಳಲ್ಲಿ ಧನಂಜಯಕೋಶದಪಕ್ಕಿಯನ್ನು ಅನುಸರಿಸಿರುವನು ಭಾಗುರಿ, ವರರುಚಿ ಈ ಕೋಶಗಳ ಹಸ್ತಲಿಖಿತ ಪ್ರತಿಗಳಾವುವೂ ದೊರಕದಿರುವುದರಿಂದ ಅವುಗಳಿಗೆ ಈ ಗ್ರಂಥ ಕರ್ತೃವು ಎಷ್ಟು ಋಣಿಯಾಗಿರುವನೆಂದು ಹೇಳಲು ಪ್ರಕೃತಕ್ಕೆ ಸಾಧ್ಯವಿಲ್ಲವಾಗಿದೆ. ವರರುಚಿ ಕೋಶವೆಂಬ ಹಸ್ತಲಿಖಿತ ಪ್ರತಿಯೊಂದು ಮದರಾಸ್ ಪ್ರಾಚ್ಯಕೋಶಾಗಾರದಲ್ಲಿರುವುದು. ಸುಮಾರು ನೂರು ಕಾರಿಕೆಗಳುಳ್ಳ ಈ ಕೋಶವು, ಶಬ್ದಗಳೆ (ಸಮಾನಾರ್ಥಕ ಪರ್ಯಾಯ ಪದಗಳ) ಕೇವಲ ಲಿಂಗ ನಿರ್ಣಯವನ್ನು ಮಾತ್ರ ತಿಳಿಸುವುದರಿಂದ ಈ ಗ್ರಂಥ ಶೋಧನೆಯಲ್ಲಿ ಅದರ ಉಪಯೋಗವು ಅತ್ಯಲ್ಪವಾಗಿರುವುದು. ಭಾಗುರಿರಚಿತವಾದ ಕ್ರಮವಾದ ಕೋಶವೊಂದು ದೊರಕದಿದ್ದರೂ, ಸಂಸ್ಕೃತ ಗ್ರಂಥಗಳ ವ್ಯಾಖ್ಯಾಕಾರರು ಅಲ್ಲಲ್ಲಿ ಉದ್ಧರಿಸಿರುವ ಕೆಲವು ವಾಕ್ಯಗಳು ಮಾತ್ರ ದೊರಕುವುವು. ಅವುಗಳಲ್ಲಿ ನಮಗೆ ದೊರಕಿದಷ್ಟು ಭಾಗವನ್ನು ಈ ಗ್ರಂಥ ಶೋಧನೆಯಲ್ಲಿ ಉಪಯೋಗಮಾಡಿಕೊಂಡಿದೆ.

ಕಾಂಡ ವರ್ಗಾದಿ ವಿಭಾಗ ಕ್ರಮದಲ್ಲಿ ಬರೆಯಲ್ಪಟ್ಟಿರುವ ನಿಘಂಟುಗಳಲ್ಲಿ ಅಮರಕೋಶ (ನಾಮಲಿಂಗಾನುಶಾಸನ)ವೇ ಮೊತ್ತಮೊದಲ ಗ್ರಂಥವು. ಈ ವಿಭಾಗ ಸೌಕರ್ಯವನ್ನೊಳಗೊಂಡಿರುವುದರಿಂದಲೇ ಮೇಲಾದ ಮತ್ತಾವ ನಿಘಂಟುವಾದರೂ ಇದರಷ್ಟು ಸಾರ್ವಜನೀನವಾಗಲಿಲ್ಲ. ಹಲಾಯುಧ ಕೋಶದಲ್ಲಿ ಕಾಂಡಗಳ ವಿಭಾಗವುಂಟು. ವರ್ಗಗಳ ವಿಭಾಗವಿಲ್ಲ.

ಈ ಕೋಶಕಾರನ ಕಾಂಡ ವರ್ಗವಿಭಾಗಕ್ರಮವು ಇವರಿಬ್ಬರ ವಿಭಾಗ ಕ್ರಮಕ್ಕಿಂತಲೂ ವಿಲಕ್ಷಣವಾಗಿರುವುದು. ಅಮರಕೋಶದಲ್ಲಿ ಕಾಂಡಗಳು ಮೂರು, ಮೊದಲನೆಯ ಕಾಂಡದಲ್ಲಿ ಸ್ವರ್ಗಮರ್ತ್ಯಪಾತಾಳಗಳೆಂಬ ಮೂರು ಲೋಕಗಳಿಗೂ ಸಂಬಂಧಿಸಿರುವ ಪದಾರ್ಥಗಳನ್ನು ತಿಳಿಸುವ ಶಬ್ದಗಳು ಅಡಕವಾಗಿರುವುವು. ಈ ವಿಭಾಗಕ್ರಮವನ್ನನುಸರಿಸಿ, ಸ್ವರ್ಗ, ವ್ಯೋಮ, ದಿಕ್ಕು, ಕಾಲ, ಧೀ, ವಾಕ್ಕು, ಶಬ್ದಾದಿ, ನಾಟ್ಯ, ಪಾತಾಳ, ಭೋಗಿ, ನರಕ, ವಾರಿ ಹನ್ನೆರಡು ವರ್ಗಗಳಿರುವುವು. ಎರಡನೆಯ ಕಾಂಡದಲ್ಲಿ ಭೂಮಿಗೆ ಸಂಬಂಧಿಸಿರುವ ಪದಾರ್ಥಗಳನ್ನು ಮಾತ್ರ ತಿಳಿಸುವ ಶಬ್ದಗಳು ಸಂಗ್ರಹಿಸಲ್ಪಟ್ಟಿರುವುವು. ಇದರಲ್ಲಿ ವಿಷಯಾನುಗುಣವಾಗಿ ಭೂ, ಪುರ, ಶೈಲ, ವನೌಷಧಿ, ಮೃಗಾದಿ, ಮನುಷ್ಯ, ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ, ಎಂಬ ಹತ್ತುವರ್ಗಗಳಿರುವುವು. ಮೂರ

[1] ಸಮು. ೩೫-೩೭.

ನೆಯ ಕಾಂಡವಲ್ಲಿ, ವಿಶೇಷ್ಯನಿಘ್ನ, ಸಂಕೀರ್ಣ, ನಾನಾರ್ಥ, ಅವ್ಯಯ, ಲಿಂಗಾದಿಸಂಗ್ರಹ[1] ಎಂಬ ಐದು ವರ್ಗಗಳಲ್ಲಿ, ವಿಶೇಷ್ಯಪದಗಳೂ, ಸಂಕೀರ್ಣಪದಗಳೂ, ನಾನಾರ್ಥಪದಗಳೂ, ಅವ್ಯಯಗಳೂ, ಶಬ್ದಗಳ ಲಿಂಗ ನಿರ್ಣಯವೂ ಹೇಳಲ್ಪಟ್ಟಿರುವುವು.

ಹಲಾಯುಧಕೋಶದಲ್ಲಿ (ಅಭಿಧಾನರತ್ನಮಾಲೆ) ಸ್ವರ್ಗಕಾಂಡ, ಭೂಮಿಕಾಂಡ ಪಾತಾಳ ಕಾಂಡ, ಸಾಮಾನ್ಯಕಾಂಡ, ನಾನಾರ್ಥಕಾಂಡಗಳೆಂಬ ಐದು ಕಾಂಡಗಳುಂಟು, ಈ ಕೋಶಾನುಸಾರವಾಗಿಯೇ ಪ್ರಕೃತಕೋಶಕಾರನು, ಈ ಸ್ವರ್ಗ, ಭೂಮಿ, ಪಾತಾಳಕಾಂಡಗಳಲ್ಲಿಯ ಶಬ್ದಗಳನ್ನು ಒಟ್ಟುಗೂಡಿಸಿ ಒಂದು ಕಾಂಡದಲ್ಲಿ ಅಡಕವಾಡಿ "ಅವಿಭಿನ್ನಾರ್ಥಕಾಂಡ"ವೆಂದು ಅದಕ್ಕೆ ಹೆಸರನ್ನು ಕೊಟ್ಟಿರುವನು, ಉಳಿದ ಸಾಮಾನ್ಯ, ನಾನಾರ್ಥಕಾಂಡಗಳ ಹೆಸರನ್ನೂ ಶಬ್ದ ಸಮುದಾಯವನ್ನೂ ಮಾರ್ಪಡಿಸದೆ ಅದರಂತೆಯೇ ಹೇಳಿರುವನು. ಅಲ್ಲದೆ ಆಮರಸಿಂಹನು ತನ್ನ ಕೋಶದ ಮೊದಲೆರಡು ಕಾಂಡಗಳಲ್ಲಿ ಹೇಳಿರುವ ವಿಷಯವನ್ನು ಈತನು ತನ್ನಕೋಶದ ಮೊದಲನೆಯ ಕಾಂಡದಲ್ಲಿಯೂ, ಅನುರದ ಮೂರನೆಯ ಕಾಂಡದ ವಿಶೇಷ್ಯನಿಘ್ನ ಸಂಕೀರ್ಣವರ್ಗಗಳಲ್ಲಿ ಹೇಳಿರುವ ವಿಷಯವನ್ನು ತನ್ನ ಕೋಶದ ಎರಡನೆಯ ಕಾಂಡದಲ್ಲಿಯೂ, ನಾನಾರ್ಥ ಅವ್ಯಯವರ್ಗಗಳ್ಷಯ ವಿಷಯವನ್ನು ಮೂರನೆಯ ಕಾಂಡದಲ್ಲಿಯೂ ಸಂಗ್ರಹಿಸಿರುವನೆಂದೂ ವ್ಯಕ್ತವಾಗುವುದು. ಕಾಂಡ ಸಂಖ್ಯೆಯಲ್ಲಿಯೂ, ಕಾಂಡಗಳನ್ನು ವರ್ಗೀಕರಿಸುವುದರಲ್ಲಿಯೂ ಈತನು ಅಮರಸಿಂಹನನ್ನು ಹಿಂಬಾಲಿಸಿದ್ದರೂ, ಶಬ್ದಗಳನ್ನು ವರ್ಗೀಕರಿಸುವುದರಲ್ಲಿ ಮಾತ್ರ ಭಿನ್ನಮಾರ್ಗವನ್ನವಲಂಬಿಸಿರುವನು. ಈತನ ವರ್ಗವಿಭಾಗಕ್ರಮವು ಈ ರೀತಿಯಾಗಿರುವುದು.[2] ಒಂದನೆಯ ಅವಿಭಿನ್ನಾರ್ಥ ಕಾಂಡದಲ್ಲಿ :(೧) ಸ್ವರ್ಗವರ್ಗ, (೨) ಕಾಲವರ್ಗ, (೩) ಸಂಸರಣವರ್ಗ, (೪) ಸಲಿಲವರ್ಗ, (೫) ಭೂವರ್ಗ. (೬) ಕಾಲಾಯಸಾದಿ ಧಾತುವರ್ಗ, (೭) ವನವರ್ಗ, (೮) ವೃಕ್ಷಾದಿವರ್ಗ, (೯) ಮೃಗ ಪಕ್ಷಿವರ್ಗ,[3] (೧೦) ಪುರಗೃಹೋಪಕರಣವರ್ಗ, (೧೧) ಮನುಷ್ಯವರ್ಗ,[4] (೧೨) ದೇಹಾವಯವಾವಿವರ್ಗ, (೧೩) ಭೂಷಣಾದಿವರ್ಗ, (೧೪) ಸಮರಾದಿ ಸಂಪ್ರಕೀರ್ಣವರ್ಗ, (೧೫) ಪಶುವರ್ಗ, (೧೬) [5]ಧಾನ್ಯವರ್ಗ, ಎಂದು ಹದಿನಾರು ವರ್ಗಗಳಿರುವುವು.

ಎರಡನೆಯ ಸಾಮಾನ್ಯಕಾಂಡದಲ್ಲಿ, (೧) ವಿಶೇಷಣವರ್ಗ,[6] (೨) ವಿಶೇಷ್ಯವರ್ಗ ಎಂಬ ಎರಡು ವರ್ಗಗಳಿರುವುವು.

---

[1] ಸಂಸ್ಕೃತವಲ್ಲಿ ಶಬ್ದಗಳ ಲಿಂಗನಿರ್ಣಯದಲ್ಲಿ ತುಂಬಾ ತೊಡಕಿರುವುದರಿಂದ ಈ ವರ್ಗದ ಆವಶ್ಯಕತೆಯು ಹೆಚ್ಚಾಗಿರುವುದು. ಕನ್ನಡದಲ್ಲಿ ಲಿಂಗನಿರ್ಣಯವು ಸುಕರವಾಗಿರುವುದರಿಂದ ಈ ವರ್ಗದ ಆವಶ್ಯಕತೆಯಿಲ್ಲವು.

[2] "ಕ" ಪ್ರತಿಯಲ್ಲಿ ೮ ನೆಯ ವೃಕ್ಷಾದಿವರ್ಗದ ವರೆಗೂ, ವರ್ಗ ವಿಭಾಗವಿದೆ. ಮುಂದಣ ವರ್ಗದ ಕೊನೆಯಲ್ಲಿ ಪಕ್ಷಿವರ್ಗ ೭ ಎಂದೂ ಕಾಂಡದ ಕೊನೆಯಲ್ಲಿ ಪಂಚದಶ ಸರ್ಗ್ಃ ಎಂದೂ ಬರೆದಿರುವುದು ಲೇಖಕನ ಪ್ರಮಾದವಲ್ಲದೆ ಬೇರಲ್ಲ.

[3] "ಗ" ಪ್ರತಿಯಲ್ಲಿ ಮೃಗವರ್ಗ, ಪಕ್ಷಿವರ್ಗ ಎಂದು ವರ್ಗವು ಬೇರೆಬೇರೆಯಾಗಿರುವುದು.

[4] "ಗ" ಪ್ರತಿಯಲ್ಲಿ ಬ್ರಾಹ್ಮಣವರ್ಗ, ಕ್ಷತ್ರಿಯವರ್ಗ, ವೈಶ್ಯವರ್ಗ, ಶೂದ್ರವರ್ಗ, ಮನುಷ್ಯ ಎಂದು ವಿಭಕ್ತವಾಗಿರುವುದು.

[5] ರಸಾನ್ನವರ್ಗ (೧೭) ಧಾನ್ಯವರ್ಗ.

[6] "ಗ" ಪ್ರತಿಯಲ್ಲಿ ವಿಶೇಷ್ಯ ನಿಘ್ನವರ್ಗ ಎಂದಿರುವುದು.

ಮೂರನೆಯ ನಾನಾರ್ಥಕಾಂಡದಲ್ಲಿ ವರ್ಗ ವಿಭಾಗಾದಿ ಕ್ರಮಗಳಿಲ್ಲ. "ಕ" ಪ್ರತಿಯ ಅಂತ್ಯದಲ್ಲಿ.—"೪೦೦ ಪದ್ಯಗಳು" ಎಂದು ಗ್ರಂಥ ಸಂಖ್ಯೆಯನ್ನು ಬರೆದಿರುವುದು. ಈಗ ದೊರೆತಿರುವ ಪ್ರತಿಗಳಲ್ಲಿ ಗ್ರಂಥಸಂಖ್ಯೆಯು ೬೫೩ ಆಗುವುದರಿಂದ ಕೆಲವು ಪದ್ಯಗಳು ಲುಪ್ತವಾಗಿರಬಹುದೆಂದು ತಿಳಿಯಬೇಕಾಗಿರುವುದು.

ಧನಂಜಯ ನಿಘಂಟುವಿನಲ್ಲಿ ಕಾಂಡವರ್ಗಾದಿ ವಿಭಾಗಕ್ರಮವಿಲ್ಲದೆ ಶಬ್ದಗಳೆಲ್ಲವೂ ದಂಡಾಕಾರವಾಗಿ ಹೇಳಲ್ಪಟ್ಟಿರುವುವು. ಈ ಕೋಶದಲ್ಲಿ ಶಬ್ದಗಳ ಆನುಪೂರ್ವಿಯನ್ನು ಹೇಳುವುದರಲ್ಲಿ ವೈಲಕ್ಷಣ್ಯವೊಂದುಂಟು. ಗ್ರಂಥಾದಿಯ ನ್ಯೋಷ್ಟ ದೇವತಾಸ್ತುತಿರೂಪವಾದ ಪದ್ಯದಲ್ಲಿ—ಎರಡು ಎಂಬರ್ಥವನ್ನು ಕುಡಿಯುವ ದ್ವಂದ್ವ, ದ್ವಯ,[1] ಮೊದಲಾದ ಪದಗಳನ್ನು—ಜಿನ ಸಂಬಂಧಿಯಾದ ಪಾದಗಳ ದ್ವಂದ್ವವು ದ್ವಯವು ಯುಗಳವು.....ಕಾಪಾಡಲಿ ಎಂದೂ, ಕ್ಷೇಮಾದಿ ಶಬ್ದಗಳನ್ನು ಗ್ರಂಥೋಪಸಂಹಾರರೂಪ ಪ್ರಶಸ್ತಿಪದ್ಯದಲ್ಲಿ ಎಲ್ಲರಿಗೂ ಕ್ಷೇಮವಾಗಲಿ ಎಂದೂ, ಪ್ರಕೃತ ವಿಷಯಕ್ಕೆ ಸಂಬಂಧಿಸಿ ಹೇಳಿರುವನು. ಈ ಕೋಶಕಾರನ ಈ ಭಂಗಿಯನ್ನೇ ಅನುಸರಿಸಿ ಈ ಕೋಶಕಾರನು ಮೊದಲನೆಯ ಕಾಂಡದ ಕೊನೆಯಲ್ಲಿ, ಲೋಕಕ್ಕೆ ಮಂಗಳವು ಕುಶಲವು ...ಉಂಟಾಗಲಿ, ಎಂದು ಮಂಗಳಾರ್ಥಕ ಪರ್ಯಾಯ ಪದಗಳನ್ನೂ[2] ಲೋಕದಲ್ಲಿ ಉಪದ್ರವವು, ಅರಿಷ್ಟವು.....ನಾಶವಾಗಲಿ, ಎಂದು ಅರಿಷ್ಟಪರ್ಯಾಯ ಪದಗಳನ್ನೂ ಪ್ರಶಸ್ತಿಪದ್ಯದಲ್ಲಿ ಸೇರಿಸಿ ಹೇಳಿರುವನು. ಅಲ್ಲದೆ ಧನಂಜಯ ಕೋಶಕಾರನು ಗ್ರಂಥಾದಿಯಲ್ಲಿ ಮೊದಲು "ಭೂ ಭೂರ್ ಭೂಮಿ....."ಎಂದು ಭೂಪರ್ಯಾಯ ಪದಗಳನ್ನು ಹೇಳಿ ಒಡನೆಯೇ "ತತ್ಪರ್ಯಾಯಧರಶೈಲಃ ತತ್ಪರ್ಯಾಯಪತಿರ್ನೃಪಃ" ಆ ಭೂಪರ್ಯಾಯ ಪದಗಳೊಡನೆ ಧರಶಬ್ದವನ್ನು ಸೇರಿಸುವುದರಿಂದ ಆಗುವ ಪರ್ಯಾಯಪದಗಳು ಪರ್ವತವಾಚಕಗಳಾಗುವುವೆಂದೂ, ಆ ಭೂಪರ್ಯಾಯ ಪದಗಳೊಡನೆ ಪತಿಶಬ್ದವನ್ನು ಸೇರಿಸುವುದರಿಂದ ಆಗುವ ಪರ್ಯಾಯಪದಗಳು ನೃಪವಾಚಕಗಳಾಗುವುವೆಂದೂ ಹೇಳಿರುವ ಭಂಗ್ಯಂತರವನ್ನೂ ಈತನು ಅಲ್ಲಲ್ಲಿ ಅನುಸರಿಸಿರುವನು... ಮೂದರಿಗಾಗಿ ಅವಿಭಿನ್ನಾರ್ಥಕಾಂಡದ

ಮಹಿಕಾವಶ್ಯಾಯತುಷಾ ।
ರಹಿಮುಪ್ರಾಲೇಯತುಹಿನ ನೀಹಾರಕರಂ ॥
..... ।
..... ॥ ॥ ೬೮ ॥

ಅಂಕಂ ಲಕ್ಷಣಮದುವೆ ಕ ।
ಳಂಕಾಭಿಜ್ಞಾನ ಚಿಹ್ನ ಲಾಂಛನಲಕ್ಷ್ಮಾ ॥
ಖ್ಯಂ ಕುಜುಪದೆನಿಕುಂ ಹರಿ ।
ಣಾಂಕಾದಿಪ್ರಯೋಗದಿಂ ಶಕಿನಾಮಂ ॥ ॥ ೬೯ ॥

ಈ ಪದ್ಯಗಳನ್ನು ನೋಡತಕ್ಕುದು.

[1] ದ್ವಯಂ ದ್ವಿತಯ ಮುಭಯಂ ಯಮಲಂ ಯುಗಲಂ ಯುಗಂ ॥
ಯುಗ್ಮಂ ದ್ವಂದ್ವಂ ಯಮಂ ದ್ವೈತಂ ಪಾದಯೋಃ ಪಾತು ಜೈನಯೋಃ ॥ ೨ ॥
ಕ್ಷೇಮಂ ಕಲ್ಯಾಣ ಮುಭಯಂ ಶ್ರೇಯೋ ಭದ್ರಂ ಚ ಮಂಗಲಂ ।
ಭಾವುಕಂ ಭವಿಕಂ ಭವ್ಯಂ ಕುಶಲಂ ಕ್ಷೇಮಮಸ್ತ್ರಿಯಾಂ ॥ ೧೦೦ ॥

[2] ಕಾಂಡಪ್ರಶಸ್ತಿ ಪದ್ಯ-೧-೩.

ನಾನಾರ್ಥಕಾಂತದ ಕೊನೆಯ ಉಪಸಂಹಾರದಲ್ಲಿರುವ

ಪಾಚ್ಯಚೀನಬರ್ಹಿ ಕೇಳ್ವಂ।
ವಾಚಸ್ಪತಿಪೇಟ್ವಿನೆನೆಯುಂ ಮುಂತವರ್ಗೇಂ॥ ಗೋಚರಮೆನೆ ಕವಿತಾಣ್ಮನೆ।
ನೀಚಜನಪ್ರಕೃತಿ ಶಬ್ದಪಾರಾಂಗಣಮುಂ॥ ೧೩೫ ಎಂಬ ಕಂದವು.

ಧನಂಜಯನಿಘಂಟುವಿನ—

ವಕ್ತಾ ವಾಚಸ್ಪತಿರ್ಯತ್ರ ಶ್ರೋತಾ ಶಕ್ರಸ್ತಥಾಪಿ ತೌ॥
ಶಬ್ದಪಾರಾಯಣನ್ಯಾಂತಂ ನ ಗತೌ ತತ್ರ ಕೇ ವಯಂ॥

ಎಂಬ ಈ ಶ್ಲೋಕದ ಪರಿವರ್ತನವಾಗಿರುವುದು.

ಈ ಧನಂಜಯನಿಘಂಟುವು ಮುದ್ರಿತವಾಗಿಲ್ಲ. ಮದರಾಸ್ ಪಾಚ್ಯಕೋಶಾಲಯದಲ್ಲಿ ಸಂಗೃಹೀತವಾಗಿರುವ—ಶಿಲಾಯಂತ್ರಮುದ್ರಿತ ಪ್ರತಿಯಲ್ಲಿ—೨೦೦ ಅನುಷ್ಟುಪ್ ಶ್ಲೋಕಗಳಿರುವುವಲ್ಲದೆ ಗ್ರಂಥಾಂತ್ಯದಲ್ಲಿ-ಇತಿ ಧನಂಜಯಸ್ಯ ಕೃತೌ ನಿಘಂಟುಸ್ಸಮಾಪ್ತಃ "ಎಂದಿದೆ." ಆದರೆ ನನಗೆ ದೊರಕಿದ ಒಂದು ಓಲೆಯ ಪ್ರತಿಯಲ್ಲಿ ಅಂತ್ಯ ಗದ್ಯವು "ಇತಿ ಧನಂಜಯಸ್ಯ ಕೃತೌ ನಿಘಂಟು ಸಮಯೇ ಶಬ್ದಸಂಕೀರ್ಣ ಪ್ರರೂಪಣಂ ನಾಮ ಪ್ರಥಮಃ ಪರಿಚ್ಛೇದ ಸ್ಸಮಾಪ್ತಃ" ಎಂದೂ, ಇತಿ ಧನಂಜಯಸ್ಯ ಕೃತೌ ನಿಘಂಟುಸಮಯೇ ನಾನಾರ್ಥ ಶಬ್ದಸಂಕೀರ್ಣ ಪ್ರರೂಪಣಂ ನಾಮ ದ್ವಿತೀಯಃ ಪರಿಚ್ಛೇದಃ। ಎಂದೂ ದೊರಕುವುದರಿಂದ ಈ ನಿಘಂಟುವಿಗೆ "ನಿಘಂಟು ಸಮಯ"ವೆಂಬ ಹೆಸರಿರುವುದೆಂದೂ, ಇದರಲ್ಲಿ ಎರಡು ಪರಿಚ್ಛೇದಗಳಿರುವುವೆಂದೂ ತಿಳಿದು ಬರುವುದು.

ತುಂಬಿಯು ಬಗೆಬಗೆಯ ಹೂಗಳಲ್ಲಿರುವ ಸಾರವಾದ ಪುಷ್ಪರಸವನ್ನು ಸಂಗ್ರಹಿಸಿ ಪರಮಾಸ್ವಾದ್ಯವಾದ ಜೇನೆಯ್ಯನ್ನುಮಾಡಿ ಕೂಡಿಡುವಂತೆ ಈ ವಸ್ತುಕೋಶ ಕರ್ತೃವು ಹಲವು ನಿಘಂಟುಗಳಲ್ಲಿರುವ ಉತ್ತಮ ಮಾರ್ಗಗಳನ್ನು ಆರಿಸಿ ತೆಗದುಕೊಂಡು ಅತ್ಯುತ್ತಮವಾದ ರೀತಿಯಲ್ಲಿ ಈ ಕರ್ಣಾಟಕ ನಿಘಂಟುವನ್ನು ವಿರಚಿಸಿ ಕವಿಗಳಿಗೂ, ಪಂಡಿತರಿಗೂ, ಕಾವ್ಯಮಾರ್ಗ ಪ್ರವಿವಕ್ಷುಗಳಿಗೂ ಅತಿಶಯವಾದ ಸೌಕರ್ಯವನ್ನು ಕಲ್ಪಿಸಿಕೊಟ್ಟು ಸರ್ವಜನಾಭಿನಂದನೀಯನಾಗಿರುವನು.

ಗ್ರಂಥಕರ್ತೃ ವಿಚಾರಂ

"ಅಭಿಧಾನವಸ್ತುಕೋಶ" ವೆಂಬ ಈ ನಿಘಂಟುವನ್ನು ರಚಿಸಿದವನು ನಾಗವರ್ಮನೆಂಬ್ಬವನು.—ಇದನ್ನು ಈ ಕವಿಯೇ ತನ್ನ ಪ್ರಕೃತ ಗ್ರಂಥದ ಪೀಠಿಕೆಯಲ್ಲಿ.—

"ವಿರಚಿಸಿದಂ ಕವಿಕಂಠಾ।
ಭರಣನಿದಂ ನಾಗವರ್ಮನೆನಿ[1] ಮೆಚ್ಚ್ದರಾರ್ ॥ ೪ ॥
.....ಶ್ರೇಯಸ್ಕನಾ ನಾಗವರ್ಮಂ ॥ ೪ ॥

ಕಾಂಡಪ್ರಶಸ್ತಿ—

---

[1] ಸುಕವಿಜನ.....ಕವಿತಾಗುಣೋದಯಂ ನಾಗವರ್ಮ ವಿರಚಿತಮಪ್ಪ ಕಾವ್ಯಾವಲೋಕನ (ಪ್ರಕರಣಾಂತಗದ್ಯ)

.....ವಿಬುಧಮಂಡಳಿ ಪಂಡಿತ ನಾಗವರ್ಮನಂ ॥ ೩೬ ॥
ನಾಮಾನ್ಯ ಕಾಂಡ ವಿ. ಣ. ವರ್ಗ.

ಎಂಬ ಪದ್ಯಗಳಲ್ಲೂ—
ಇದು ಸಮಸ್ತ.....ಶ್ರೀನಾಗವರ್ಮ ವಿರಚಿತಮಪ್ಪಭಿಧಾನ ವಸ್ತುಕೋಶದೊಳ್.....
ಎಂಬ ಕಾಂಡಗಳ ಕೊನೆಯಲ್ಲಿಯ ಪ್ರಶಸ್ತಿ ಗದ್ಯಗಳಲ್ಲೂ ಹೇಳಿಕೊಂಡಿರುವನು.

ನಾಕಿಗ, [1]ನಾಕಿ, ಎಂಬ ಸಂಗ್ರಹವಾದ ಬೇರೆಯ ಹೆಸರುಗಳೂ ಉಂಟು, ಅಲ್ಲದೆ ಇವನಿಗೆ ಪಂಡಿತ ನಾಗವರ್ಮ, ಕವಿನಾಗವರ್ಮ ಎಂಬ ವಿಶೇಷಣಯುಕ್ತವಾದ ಹೆಸರುಗಳೂ ವಾಡಿಕೆಯಲ್ಲಿದ್ದುವೆಂದು ಇವನ ಗ್ರಂಥಗಳಿಂದಲೇ ತಿಳಿದು ಬರುವುದು. ಗ್ರಂಥದ ಆದಿಯಲ್ಲಿ ಗ್ರಂಥಕರ್ತನು ಗ್ರಂಥವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗುವುದಕ್ಕಾಗಿ ಸ್ವೇಷ್ಟ ದೇವತಾಸ್ತುತಿಯನ್ನು ಆಚರಿಸುತಕ್ಕ ಪೂರ್ವಿಕರ ಸಂಪ್ರದಾಯವನ್ನನುಸರಿಸಿ ಈತನು ತನ್ನ ಗ್ರಂಥಗಳಲ್ಲಿ, ವರ್ಧಮಾನ ಜಿನ ಬಲಿಕ್ಕೆ ಸರಸ್ವತಿ ಇವರನ್ನು ಸ್ತುತಿಸಿರುವುದರಿಂದಲೂ ಈ ವಸ್ತುಕೋಶದ ಸಾಮಾನ್ಯಕಾಂಡದ ಕೊನೆಯ ಪ್ರಶಸ್ತಿ ಗದ್ಯದಲ್ಲಿ "ಇದು.....ಜಿನಪದಾಂಭೋಜಭವರ ಪ್ರಸಾದೋತ್ಪನ್ನ ಪ್ರಸನ್ನ ಗಂಭೀರವಚನ ರಚನಾಚತುರ.....ಎಂದು ತನ್ನನ್ನು ಜಿನಭಕ್ತನೆಂದು ವಿಶೇಷಿಸಿ ಹೇಳಿಕೊಂಡಿರುವುದರಿಂದಲೂ ಕಾವ್ಯಾವಲೋಕನದ ಅಂತ್ಯಪ್ರಶಸ್ತಿಪದ್ಯಗಳಲ್ಲಿಯೂ "ದ್ವಿಜವಂಶಾರ್ಣವ.....ಜಿನೇಂದ್ರಕ್ರಮಾಂಬುಜಚಂಚನ್ನವಚಂಚರೀಕ...॥ ಎಂದು ತನ್ನನ್ನು ವಿಶೇಷಿಸಿ ಹೇಳಿಕೊಂಡಿರುವುದರಿಂದಲೂ ಜೈನ ಮತಕ್ಕೆ ಸೇರಿದವನೆಂದೂ ಬ್ರಾಹ್ಮಣಜಾತಿಯವನೆಂದೂ ತಿಳಿದುಬರುವುದು.[2] ಅಲ್ಲದೆ ಸರಸ್ವತಿಯನ್ನು ಶ್ರುತದೇವಿಯೆಂದು ವ್ಯವಹರಿಸುವುದು ಜೈನಸಂಪ್ರದಾಯವು. ಅಂತೆಯೇ ಈತನು...."ಶ್ರುತದೇವಿ ವಾಣಿ...." ಎಂದು ಸರಸ್ವತಿಗೆ ಶ್ರುತದೇವಿಯೆಂದು ಹೇಳಿರುವುದರಿಂದಲೂ, "ಶ್ರುತದೇವೀ ಮುಕರಂದಕಲ್ಪಲಪನಂ", ಎಂದು ಕಾವ್ಯಾವಲೋಕನ ವಸ್ತುಕೋಶಗಳಲ್ಲಿ ತನ್ನನ್ನು ಶ್ಲಾಘಿಸಿಕೊಂಡಿ

---

[1] .....ವಾಗ್ಬಂಧದೊಳ್ ನಾಕಿಗಂ (ಈ) ನಾನಾರ್ಥಕಾಂಡ
ಅಭಿಧಾನ ವಸ್ತುಕೋಶ.—

[2] ... .ಪಂಡಿತ ನಾಗವರ್ಮನಂ ॥ ೪೯ ॥
.....ಭೂತಳದೊಳ್ಸಲೆ...ನಾಗವರ್ಮಂ.... ॥ ೪೪ ॥
.....ಕವಿನಾಗವರ್ಮನಂ ॥ ೯೬ ॥
ಛಂದೋವಿಚಿತಿ....ನಾಗವರ್ಮನ ಕೃತಿಗಳ್ ॥ ೯೬ ॥
ಕಾವ್ಯಾವಲೋಕನಂ—
.....ಭೂಭಾಗದೊಳ್ ನಾಕಿಗಂ ॥ ೫ ॥
ಕಾಂಡಪ್ರಶಸ್ತಿ—
.....ತಿರ್ದವಿವೇಕಿ ನಾಕಿಗಂ ॥ ೯೫ ॥
ಕಾವ್ಯಾವಲೋಕನಂ.—

[3] (ಅ) ದೇವಾದಿದೇವ.....ವರ್ಧಮಾನ ಜಿನೇಂದ್ರಂ, ॥ ೧ ॥
ಶ್ರುತದೇವಿ...ಸರಸ್ವತಿ ವರದೆಯಾಗಿ... ॥ ೪ ॥
ವಸ್ತುಕೋಶ
ಶ್ರೀವರ್ಧಮಾನನಾನಕ..... ನಮಗಱಿವಂ ಪರಮಾಗಮಮೂರ್ತಿ.....ಸರಸ್ವತೀದೇವಿ ವರದೆಯಕ್ಕೆ... ॥ ೨ ॥
ಕಾವ್ಯಾವಲೋಕನ.—

ರುವುದರಿಂದಲೂ ಈತನು ಜೈನಮತದವನೆಂಬುದು ಚೆನ್ನಾಗಿ ದೃಢಪಡುವುದು. ಇವನ ಬಿರುದುಗಳೆಲ್ಲಿ ಒಂದಾದ "ಅಭಿನವಶರ್ವವರ್ಮ" ಎಂಬ ಬಿರುದೂ ಈತನನ್ನು ಜೈನನೆಂದು ಹೇಳಲು ಅವಕಾಶವನ್ನು ಕೊಡುತ್ತಿರುವುದು. ಈತನು ಶಬ್ದಸ್ಮೃತಿ—ಅಥವಾ ಭಾಷಾಭೂಷಣವೆಂಬ ಹೆಸರನ್ನಿಟ್ಟು ಕನ್ನಡ ಭಾಷೆಗೆ ವ್ಯಾಕರಣವೊಂದನ್ನು ಬರೆದು ಸಂಸ್ಕೃತದಲ್ಲಿ ಕಾತಂತ್ರಶಾಸ್ತ್ರವೆಂಬ ವ್ಯಾಕರಣವನ್ನು ಬರೆದ ಶರ್ವವರ್ಮನಷ್ಟು ಪ್ರಸಿದ್ಧಿಗೆ ಬಂದುದರಿಂದ ಪಂಡಿತರು ಈತನಿಗೆ ಅಭಿನವ ಶರ್ವವರ್ಮನೆಂಬ ಬಿರುದನ್ನಿತ್ತರೆಂದು ಹೇಳಿಕೊಂಡಿರುವನು. ಈ ಕಾತಂತ್ರ ವ್ಯಾಕರಣವನ್ನು ಬರೆದ ಶರ್ವವರ್ಮನು ಜೈನನು. ಈ ನಾಗವರ್ಮನೂ ಜೈನನಾಗಿದ್ದುದರಿಂದಲೇ ಜೈನಪಂಡಿತನ ಹೆಸರಾದ ಈ ಬಿರುದನ್ನು ಪಡೆದನು. ವೈದಿಕಮತದವನಾಗಿದ್ದರೆ, ವೈದಿಕ ಮತಕ್ಕೆ ಅನುಗುಣವಾಗಿ ವ್ಯಾಕರಣಶಾಸ್ತ್ರವನ್ನು ಪಡೆದಿರುವ ಪಾಣಿನಿಯ ಹೆಸರಿಗೆ ಸಂಬಂಧಿಸಿದ "ಅಭಿನವಪಾಣಿನಿ" ಎಂಬ ಬಿರುದನ್ನು ಪಡೆಯುತ್ತಿದ್ದನು.[1] ದಾಮೋದರನೆಂಬವನು ಈತನ ತಂದೆ.

ಕಾವ್ಯಾವಲೋಕನ ಗ್ರಂಥದಲ್ಲಿ ಬೊರಕುವ—

ಛಂದೋವಿಚಿತಿ ಯಲಂಕೃತಿ ।
ಸಂದಭಿದಾ[ವಸ್ತು]ಕೋಶ ಮೆಂಬಿವು ವಾಕ್ಪ್ರೀ ॥
ಸುಂದರಿಗೆ ರತ್ನಮಂಡನ ।
ದಂದದೊಳಿರ್ದುವು ನಾಗವರ್ಮನ ಕೃತಿಗಳ್[2] ॥

ಎಂಬ ಪದ್ಯದಿಂದ ಈ ಅಭಿಧಾನವಸ್ತುಕೋಶವಲ್ಲದೆ ಕಾವ್ಯಾವಲೋಕನವೆಂಬ ಅಲಂಕೃತಿ ಗ್ರಂಥ, "ಛಂದೋವಿಚಿತಿ" ಯೆಂಬ ಛಂದಶ್ಶಾಸ್ತ್ರ ಇವೆರಡನ್ನೂ ಈತನೇ ಬರೆದಿರುವಂತೆ ತಿಳಿಯಬರುವುದು. ಕಾವ್ಯಾವಲೋಕನದ ಮೊದಲನೆಯ ಅಧಿಕರಣವಾದ "ಶಬ್ದಸ್ಮೃತಿ" ಯಲ್ಲಿ ಹೇಳಿರುವ ವ್ಯಾಕರಣ ವಿಷಯಗಳನ್ನೇ ಅನ್ಯೂನಾತಿರಿಕ್ತವಾಗಿ ಒಳಗೊಂಡಿರುವ "ಕರ್ಣಾಟಕಭಾಷಾ ಭೂಷಣ"[3]ವೆಂಬ ವ್ಯಾಕರಣ ಗ್ರಂಥವನ್ನೂ ಈತನೇ ಬರೆದವನೆಂದು ಹೇಳಲು ಆ ಗ್ರಂಥದ ಅಂತ್ಯದಲ್ಲಿರುವ

ಕರ್ಣಾಟ ಶಬ್ದಸೂತ್ರಾಣಿ ಲೋಕವ್ಯುತ್ಪತ್ತಿ ಸಿದ್ಧಯೇ ॥
ರಚಿತಾನಿ ಸ್ಫುಟಾರ್ಥಾನಿ ಕೃತಿನಾ ನಾಗವರ್ಮಣಾ ॥
ಜೀಯಾದಸೌ ಮಹಾಪ್ರೌಢಾ ನಾಗವರ್ಮ ಬುಧೋತ್ತಮಃ ।
ಯತ್ಪ್ರಜ್ಞಾಯಾ ಜಗತ್ಪುಚ್ಛೈರ್ಯಃ ಯಾತಿ ಕರ್ಣಾಟಲಕ್ಷಣಂ ॥

ಕರ್ಣಾಟಕಭಾಷಾ ಭೂಷಣಂ ಸಮಾಪ್ತಂ—

ಈ ಪದ್ಯಗಳು ಅವಕಾಶವನ್ನು ಕೊಟ್ಟಿರುವುವು. ಈಗ ಮುದ್ರಿತವಾಗಿರುವ "ಛಂದೋಂಬುಧಿ" ಎಂಬ ಛಂದಶ್ಶಾಸ್ತ್ರವೂ, ಕರ್ಣಾಟಕ ಕಾದಂಬರಿಯೂ ಈ ಕವಿಯಿಂದಲೇ ರಚಿತವಾದುವೆಂದು ಕೆಲವರು ವಾದಿಸುತ್ತಿರುವರು. ಆದರೆ, ಕಾಲ, ದೇಶ, ಮತ, ಬಿರುದು, ತಾಯ್ತಂದೆಗಳು ಮೊದಲಾದ ಹಲವಿಷಯಗಳಲ್ಲಿ ಭೇದವಿರುವುದರಿಂದ ತದ್ಗ್ರಂಥ ಕರ್ತೃಗಳು ಏತದ್ಭಿನ್ನರೆಂದು ಹೇಳುವುದೇ ಸಮಂಜಸವೆಂದು ನಮಗೆ ತೋರುವುದು. ಈ ಪ್ರಚಾರದಲ್ಲಿರುವ ಛಂದೋಂಬುಧಿಯ ಕರ್ತೃವು

[1] .....ಪೇಟ್ದಂ ದಾಮೋದರತನಯನೀ ವಜ್ರೋಲಂಕೃತಿಯಿಂ ॥ ೯೯ ॥

[2] ಈ ಗ್ರಂಥವು ಕನ್ನಡಭಾಷೆಯ ವ್ಯಾಕರಣವಿಷಯವನ್ನು ಸಂಗ್ರಹವಾಗಿ ತಿಳಿಸುವುದು. ಸಂಸ್ಕೃತಭಾಷೆಯ ಸೂತ್ರವೃತ್ತಿಗಳಿಂದ ಬರೆಯಲ್ಪಟ್ಟಿರುವುದು.

ಈತನಲ್ಲದಮೇಲೆ ಈತನಿಂದ ಬರೆಯಲ್ಪಟ್ಟ ಛಂದೋವಿಚಿತಿಯಾವುದು? ಎಂದು ಹುಟ್ಟುವ ಪ್ರಶ್ನೆಗೆ ಇಂತು ಸಮಾಧಾನವನ್ನು ಹೇಳಬಹುದು.

ಮುದ್ರಿತವಾಗಿರುವ ಎರಡು ಬಗೆಯ "ಛಂದೋಂಬುಧಿ" ಗ್ರಂಥಗಳು ಈಗ ಪ್ರಚಾರದಲ್ಲಿರುವುವು. ಅವುಗಳಲ್ಲೊಂದು ಮುಂಗಳೂರಿನ ಬಾಸೆಲ್‌ಮಿಷನ್ ಮುದ್ರಾಲಯದಲ್ಲಿ ಕಿಟ್ಟಲ್ ಸಾಹೇಬರ ಮೇಲ್ವಿಚಾರಣೆಯಿಂದ ಮುದ್ರಿತವಾದುದು. ಎರಡನೆಯದು ಮೈಸೂರಿನ "ಕಾವ್ಯ ಕಲಾನಿಧಿ" ಮಾಸಪತ್ರಿಕೆಯ ಸಂಪಾದಕರ ಅಧ್ಯಕ್ಷತೆಯಿಂದ ಮುದ್ರಿತವಾಗಿರುವುದು. ಇವುಗಳಲ್ಲದೆ ಮದ್ರಾಸ್ - ಮೈಸೂರು ಪ್ರಾಚ್ಯಪುಸ್ತಕ ಭಾಂಡಾಗಾರಗಳಲ್ಲಿ ಸಂಗೃಹೀತಗಳಾಗಿರುವ ಹಲವು ಛಂದೋಂಬುಧಿಯ ಹಸ್ತಲಿಖಿತ ಪ್ರತಿಗಳೂ ದೊರಕುವುವು. ಇವುಗಳೆಲ್ಲವನ್ನೂ ವಿಮರ್ಶ ಮಾಡಿದರೆ ಈ ಅಂಶವು ವ್ಯಕ್ತಪಡುವುದು. ಕಿಟ್ಟಲ್ ಸಾಹೇಬರ ಮುದ್ರಣಪ್ರತಿಯಲ್ಲಿ ಗ್ರಂಥಾದಿಯ ಮುಂಗಳ ಪದ್ಯಗಳೂ, ಕವಿಯ ವಿಷಯವನ್ನು ತಿಳಿಸುವ "ಅರಸಂ ರಕ್ಕಸಗಂಗಂ...ಮೊದಲಾದ ಪದ್ಯಗಳೂ ದೊರಕುವುದಿಲ್ಲ. ಆಧುನಿಕವಾದ (ಸೀಸಪದ್ಯ, ಸಾಂಗತ್ಯಾದಿಗಳು) ಎಷ್ಟೋ ಪದ್ಯಗಳೂ ಹೆಚ್ಚಾಗಿ ಸೇರಿಹೋಗಿವೆ. ಕೆಲವು ಹಸ್ತಲಿಖಿತ ಪ್ರತಿಗಳಲ್ಲಿ ಪ್ರಕರಣಾಂತಿಮ ಗದ್ಯವು ಭಗವದರ್ಹತ್ಪರಮೇಶ್ವರ.....ಎಂದೂ, ಮತ್ತೆ ಕೆಲವರಲ್ಲಿ ಭಗವದ್ಭವಾನೀವಲ್ಲಭ.....ಎಂದೂ ಇರುವುದು, ಒಂದೇ ಲಕ್ಷಣವನ್ನು ತಿಳಿಸುವ ಎರಡು ಮೂರು ಪದ್ಯಗಳು ಹಲವು ಪ್ರತಿಗಳಲ್ಲಿ ಒಂದೇ ಸ್ಥಳದಲ್ಲಿ ದೊರಕುವುವು. ಈ ಕಾರಣಗಳಿಂದ ಏತತ್ಕವಿಕೃತವಾದ ಛಂದೋ ವಿಚಿತಿಯೂ, ಬೇರೊಬ್ಬ ನಾಗವರ್ಮನಿಂದ ರಚಿತವಾದ ಛಂದೋಂಬುಧಿಯೂ, ಇನ್ನೂ ಹಲವು ಸಣ್ಣಪುಟ್ಟ ಛಂದೋಗ್ರಂಥಗಳೂ ಕಾಲಾಂತರದಲ್ಲಿ ಸಂಗ್ರಹಕಾರರಪ್ರಮಾದದಿಂದಲೋ? ಲೇಖಕರ ಭ್ರಾಂತಿಜ್ಞಾನದಿಂದಲೋ? ಮಿಳಿತವಾಗಿ ಹೋಗಿ ಈಗಿರುವ ಛಂದೋಂಬುಧಿಯ ರೂಪವಾಗಿ ಪರಿಣಮಿಸಿರಬಹುದೆಂದು ಊಹಿಸಿವುದು ಅಯುಕ್ತಿಕವಾಗಲಾರದು.

[1]ಈ ಕವಿಗೆ ಸುಕವಿಜನಮನಸ್ಸರೋಜಿನೀ ರಾಜಹಂಸ, ಕವಿತಾಗುಣೋದಯಂ,[2] ಅಭಿನವ ಶರ್ವವರ್ಮ,[3] ಪಂಡಿತ[4] ಕವಿಕರ್ಣಪೂರ[5] ಕವಿ ಕಂಠಾಭರಣ[6] ಮೊದಲಾದ ಬಿರುದುಗಳಿದ್ದಂತೆ

---

[1].....ಖ್ಯಾತ ಯಶಂ ಕವಿತಾಗುಣೋದಯಂ ॥ (೩೨೪)
ಶಾಂತಮನಂ ಕವಿತಾಗುಣೋದಯಂ ॥ (೪೦೨)

[2] ಸಮುಚಿತ.....ಅಮಳಿನ ಕವಿತಾಗುಣೋದಯ ಶ್ರೀ.....॥ (೪೯೬)
ಇದು ಸಕಳ ಸುಕವಿಜನ ಮನಸ್ಸರೋಜಿನೀ ರಾಜಹಂಸಾಯಮಾನಾನೂನ ಕವಿತಾ ಗುಣೋದಯ ಶ್ರೀ॥ (ಕಾವ್ಯಾವಲೋಕನ)
ಇದು ವಿವಿಧವನವಿನೂತ ಜಿನಪದಾಂಬೋಜ ವರಪ್ರ.....ಕವಿತಾಗುಣೋದಯ...
ಶ್ರೀ ನಾಗವರ್ಮ.....ವಸ್ತುಕೋಶ॥

[3] ಅಭಿಮತ ಶಬ್ದಸಂಸ್ಮರಣದಿಂ.....ಭಾವದಿಂದಭಿನವ ಶರ್ವವರ್ಮನಿವನೆಂದ ವುದುರ್ವರಿ ನಾಗವರ್ಮನಂ.

[4].....ಬಣ್ಣಿಕುಂ ವಿಬುಧಮಂಡಳಿ ಪಂಡಿತನಾಗನರ್ಮನಂ.
ವಸ್ತುಕೋಶ-ಸಾಮಾ- (೩೬)
ಕಾವ್ಯಾವಲೋಕನ- (೪೯೩)

[5] ದಾಮೋದರ ಪ್ರಿಯಸುತಂ ಕವಿ ಕರ್ಣಪೂರಂ ॥ ೩೫ ॥ ಸಾಮಾನ್ಯ-

[6] ವಿರಚಿಸಿದಂ ಕವಿ ಕಂಠಾಭರಣನಿದಂ ನಾಗವರ್ಮನಿನೆ ಮೆಚ್ಚದರಾರ್ ॥ ೪ ॥
ವಸ್ತುಕೋಶ-

ಇವನ ಗ್ರಂಥಗಳಿಂದಲೇ ತಿಳಿದುಬರುವುದು ಇವುಗಳೆಲ್ಲೆಲ್ಲಾ "ಕವಿತಾಗುಣೋದಯ" ವೆಂಬುದೇ ಈತನ ಅತ್ಯಂತ ಪ್ರೀತಿಗೆ ಪಾತ್ರವಾದ ಬಿರುದು. ಪಂಡಿತ, ಕವಿ ಎಂಬಿವು ವ್ಯವಹಾರದಲ್ಲಿ ರೂಢಿಗೆ ಬಂದುವು; ಕವಿ ಕಂಠಾಭರಣನಿವಂ ಎಂಬುದನ್ನು ನಾಗವರ್ಮನಿಗೆ ವಿಶೇಷಣಮಾಡುವುದರಿಂದ ಬಿರುದೆಂಬ ಅರ್ಥವನ್ನು ಕೊಡುವುದು.

ಹಲಾಯುಧನು ತನ್ನ ನಿಘಂಟುವಿನ ಪೀಠಿಕೆಯಲ್ಲಿ—

ಇದ ಮಮರದತ್ತ.....ಶಾಸ್ತ್ರೇಭ್ಯಃ.

"ಅಭಿಧಾನ ರತ್ನಮಾಲಾ ಕವಿಕಂಠಾಭರಣಾರ್ಥ ಮುದ್ಧ್ರಿಯತೆ"—

ಈ "ಅಭಿಧಾನ ರತ್ನಮಾಲೆ"ಯೆಂಬ ಕೋಶವು ಅಮರಾದಿ ಬಹುಲ ನಿಘಂಟುಗಳಿಂದ ಕವಿಗಳ ಕಂಠಪಾಠಕ್ಕಾಗಿ (ಕಂಠಾಭರಣಕ್ಕಾಗಿ) ಉದ್ಧರಿಸಲ್ಪಟ್ಟಿದೆ ಎಂದು ಹೇಳಿರುವುದರಿಂದ ಹಲಾಯುಧ ಮೂಗರ್ವಾನುಯಾಯಿಯಾದ ಈ ಕವಿಯು ಕವಿಕಂಠಾಭರಣ ಶಬ್ದವನ್ನು ಕಾವ್ಯವಿಶೇಷಣವಾಗಿ ಹೇಳಿರಬಹುದೆಂದು ಅರ್ಥಮಾಡುವುದಕ್ಕೂ ಅವಕಾಶವುಂಟು.

ತಾನು ಅಸಾಧಾರಣ ಪಂಡಿತನೆಂದೂ, ತಾನು ಹೋದಹೋದ ರಾಜಾಸ್ಥಾನಗಳೆಲ್ಲೆಲ್ಲಾ ಅಗ್ರ ಪೂಜೆಯನ್ನು ಪಡೆಯುತ್ತಿದ್ದವನೆಂದೂ ತನ್ನ ಗ್ರಂಥಗಳಲ್ಲಿ ಹಲವೆಡೆಗಳಲ್ಲಿ ಹೇಳಿಕೊಂಡಿರುವನು. ಇಷ್ಟು ಮಾತ್ರವಲ್ಲ. [1]ಜಿತಬಾಣಂ—ಎಂಬ ಪ್ರಶಸ್ತಿಪದ್ಯದಲ್ಲಿ ಶ್ಲೇಷ ಭಂಗಿಯಿಂದ ಸಂಸ್ಕೃತದಲ್ಲಿ ಗದ್ಯ, ಪದ್ಯ, ಕವಿತಾ ಶಿರೋಮಣಿಗಳಾದ ಬಾಣ, ಮಯೂರ, ಮಾಘ, ಗುಣಾಢ್ಯ, ದಂಡಿ, ಧನಂಜಯ ಇವರನ್ನು ಕವಿತಾಧೋರಣಿಯಲ್ಲಿ ತಾನು ಕೀಲ್ಪಡಿಸಿರುವುದಾಗಿಯೂ ಹೇಳಿಕೊಂಡಿರುವನು. ಇದರಿಂದ ಇವನು ಉತ್ತಮವಾದ ಗದ್ಯ, ಪದ್ಯ ಕಾವ್ಯಗಳನ್ನೂ ಬರೆದಿರಬಹುದೆಂದು ಊಹಿಸಲು ಅವಕಾಶವುಂಟು.

ಈ ಕವಿಯು ತನ್ನ ದೇಶಕಾಲಗಳನ್ನು ಸ್ವವಿರಚಿತ ಗ್ರಂಥಗಳಲ್ಲಿ ಸಾಕ್ಷಾತ್ತಾಗಿ ಎಲ್ಲಿಯೂ ಹೇಳಿಕೊಂಡಿಲ್ಲ. ಈ ಕೋಶದಲ್ಲಿ, ಪೂರ್ವಿಕರಾದ ಸಂಸ್ಕೃತಕೋಶಕಾರರನ್ನು ಸ್ಮರಿಸುವಾಗ ಹೇಳಿರುವ ವರರುಚಿಯು—ಕ್ರಿ. ಪೂ. ೬ ನೆಯ ಶತಮಾನಕ್ಕೆ ಸೇರಿದವನು ಮತ್ತು ಪಾಣಿನಿಯ ಸಮಕಾಲದವನು. ಭಾಗುರಿ, ಶಾಶ್ವತ ಕೋಶಕರ್ತೃ ಇವರಿಬ್ಬರೂ ಅತ್ಯಂತ ಪ್ರಾಚೀನತಮರಾದುದರಿಂದ ಇವರ ಕಾಲಕ್ಕೂ ಪ್ರಕೃತ ಗ್ರಂಥಕರ್ತೃಗಳ ಕಾಲಕ್ಕೂ ಯಾವ ಸಂಬಂಧವೂ ಇಲ್ಲ. ಅಮರ ಸಿಂಹನು ಕ್ರಿ. ಶ. ೪ ನೆಯ ಶತಮಾನದವನು. ಹಲಾಯುಧನು, ಒಂಭತ್ತನೆಯ ಶತಮಾನದ ಅಂತ್ಯದವನು, ಅಲ್ಲದೆ ಇದೇಕೋಶದ ಅಂತ್ಯ ಪ್ರಶಸ್ತಿಪದ್ಯದಲ್ಲಿ ಈ ಕವಿಯು ತನಗಿಂತಲೂ ನಿಕೃಷ್ಟರೆಂದು ಹೇಳಿಕೊಂಡಿರುವ ಕವಿಗಳೆಲ್ಲಿ ಬಾಣನು ಕ್ರಿ ಶ. ೭ನೆಯ ಶತಮಾನದವನು. ಮಯೂರ ಕವಿಯು ಈ ಬಾಣನ ಭಾವಮೈದುನಾದುದರಿಂದ ಈತನ ಸಮಕಾಲಿಕನೇಆಗಿರುವನು. ಮಾಘಕವಿಯೂ, ದಂಡಿಯೂ ಎಂಟನೆಯ ಶತಮಾನದ ಆದಿಭಾಗದಲ್ಲಿದ್ದವರು, ನಿಘಂಟುವನ್ನು ಬರೆದ ಧನಂಜಯ[2](೦)

[1] ಜಿತಬಾಣಂ ಹರಿಯಂತೆ.....

[2] ಧನಂಜಯಎಂಬ ಹೆಸರಿನ ಸಂಸ್ಕೃತಕವಿಗಳು ಮೂವರಿರುವರು. ದಶರೂಪಕವನ್ನು ಬರೆದವನು ವೈದಿಕಮತದವನು. ಮತ್ತು ೧೦ ನೆಯ ಶತಮಾನದಲ್ಲಿನ ಮುಂಜನ ಆಸ್ಥಾನದಲ್ಲಿದ್ದವನು. ಮತ್ತೊಬ್ಬನು ೧೨ ನೆಯ ಶತಮಾನದವನು. ರಾಘವಪಾಂಡವೀಯವೆಂಬ ದ್ವಿಸಂಧಾನ ಕಾವ್ಯವನ್ನು ಬರೆದವನು.

ಕವಿಯು ಕ್ರಿ. ಶ. ೯ನೆಯ ಶತಮಾನಕ್ಕೆ ಹಿಂದಣವನು. ಏಕೆಂದರೆ ಇವನನ್ನು ೯ನೆಯ ಶತಮಾನದ ಆದಿಯಲ್ಲಿದ್ದ ರಾಜಶೇಖರಕವಿಯೂ ೯೫೯ ರಲ್ಲಿದ್ದ ಸೋಮದೇವನೂ (ಯಶಸ್ತಿಲಕ ಚಂಪುವನ್ನು ಬರೆದವನು) ಸ್ತುತಿಸಿರುವರು.

ಈ ಕವಿಯಿಂದ ಗ್ರಂಥದಲ್ಲಿ ಸ್ಮೃತರಾಗಿರುವ ಈ ಕವಿಗಳ ಕಾಲದಿಂದ ಈತನು ಕ್ರಿ. ಶ ಹತ್ತನೆಯ ಶತಮಾನಕ್ಕೆ ಹಿಂದಣನವನಲ್ಲವೆಂದು ವ್ಯಕ್ತವಾಗುವುದು. ಮತ್ತು ಕಾವ್ಯಾವಲೋಕನ ಗ್ರಂಥದಲ್ಲಿ ಲಕ್ಷ್ಯಭೂತೆಯಾಗಿರುವ ಪದ್ಯಗಳೆಲ್ಲವೂ ಹತ್ತನೆಯ ಶತಮಾನದಲ್ಲಿ ಹಿಂದೆ ಇದ್ದ ಗುಣವರ್ಮ, ಪಂಪ, ಪೊನ್ನ, ರನ್ನ, ಮೊದಲಾದ ಹಲವು ಕವಿಗಳ ಗ್ರಂಥಗಳಿಂದ ಉದ್ಧೃತವಾಗಿರುವುದರಿಂದಲೂ ಈತನು ಹತ್ತನೆಯ ಶತಮಾನಕ್ಕೆ ಹಿಂದಣನವನಲ್ಲವೆಂದು ದೃಢಪಡಿಸುವುದು. ಕರ್ನಾಟಕ ಭಾಷಾಭೂಷಣದಲ್ಲಿ "ದ್ವಿತೀಯಾರ್ಥೇ ಚತುರ್ಥೀ" ಎಂಬ ಸೂತ್ರಕ್ಕೆ ಲಕ್ಷ್ಯವಾಗಿ ಉದಾಹೃತವಾಗಿರುವ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ ಮತ್ಸ್ಯಾವತಾರಕ್ಕೆ" ಎಂಬ ಪದ್ಯವು ಕ್ರಿ. ಶ. ೧೧೦೦ ರಲ್ಲಿದ್ದ ನಾಗಚಂದ್ರನ (ಅಭಿನವಪಂಪ) ಪಂಪರಾಮಾಯಣದಿಂದ ಉದ್ಧೃತವಾಗಿರುವುದರಿಂದಲೂ, ಷಟ್ಪದೀರೂಪದಲ್ಲಿ "ಅಭಿನವಮಂಗರಾಜ ನಿಘಂಟು"ವೆಂಬ ಹೆಸರಿನಿಂದ ಬರೆಯಲ್ಪಟ್ಟಿರುವ ಕೋಶ ಕರ್ತೃವಾದ ಮಂಗರಾಜನು ಈ ವಸ್ತುಕೋಶವನ್ನು ಚೆನ್ನಾಗಿ ವಿಮರ್ಶಿಸಿ ನಿಘಂಟುವನ್ನು ಬರೆದುದಾಗಿ ಹೇಳಿರುವುದರಿಂದಲೂ ಈ ವಸ್ತುಕೋಶ, ಭಾಷಾ ಭೂಷಣಗಳ ಕರ್ತೃವಾದ ನಾಗವರ್ಮನು ಕ್ರಿ. ಶ. ೧೧೦೦ ರಿಂದ ಕ್ರಿ. ಶ. ೧೩೩೯ ರ ಮಧ್ಯಕಾಲದಲ್ಲಿ ಇದ್ದವನೆಂದು ನಿರ್ಧರವಾಗುವುದು.

ಹೊಯ್ಸಳಬಲ್ಲಾಳ (ಕ್ರಿ. ಶ. ೧೧೩೩–೧೨೨೦) ಇವನ ಮಗ ನರಸಿಂಹ II (ಕ್ರಿ. ಶ. ೧೨೨೦–೧೨೩೫) ಇವನ್ನಾಸ್ಥಾನದಲ್ಲಿದ್ದು ೧೨೦೯ ರಲ್ಲಿ ಯಶೋಧರ ಕಾವ್ಯವನ್ನೂ, ೧೨೩೦ ರಲ್ಲಿ ಅನಂತನಾಥಪುರಾಣವನ್ನೂ ಬರೆದ ಜನ್ನಕವಿಯು ತನ್ನ ಅನಂತನಾಥಪುರಾಣದ ಪೀಠಿಕೆಯಲ್ಲಿ ಕವಿ ಸಂಪ್ರದಾಯಾನುಸಾರವಾಗಿ "ರಾಮಚಂದ್ರಮುನಿ"ಗಳ ವರೆಗಣ ತನ್ನ ಗುರುಪರಂಪರೆಯನ್ನು ಹೇಳಿ, ತನ್ನ ಹೆಂಡತಿಯಾದ "ಲಕುಮಾದೇವಿಯ" ಗುರುವಾದ ಬಾಲಚಂದ್ರ ಯತಿಯವರೆಗಣ ಗುರುಪರಂಪರೆಯನ್ನು ಹೇಳಿದ ಬಳಿಕ

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯ ನಾನಾಗವ ।
ರ್ಮನಿದಾನೀಂತನಶರ್ವವರ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ॥
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯ ನಾರೆಂಬ[1] ಸೂ ।
ಕ್ತಿ ನವೀನೋಜ್ವಲಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್[2] ॥ ೭೪ ॥

ಎಂಬ ಪದ್ಯದಲ್ಲಿ ತನ್ನ ಉಪಾಧ್ಯಾಯರಾದ ನಾಗವರ್ಮ, ಸುಮನೋಬಾಣರನ್ನು ಕೀರ್ತಿಸಿರುವನು.* ಈ ಪದ್ಯಕ್ಕೆ ಜನನಾಥನಾದ ಜಗದೇಕನಲ್ಲಿ ಕಟಕೋಪಾಧ್ಯಾಯನಾಗಿದ್ದು ಇದಾನೀಂತನ ಶರ್ವವರ್ಮನೆಂಬ ಬಿರುದನ್ನು ಪಡೆದಿದ್ದ ಪ್ರಸಿದ್ಧನಾದ ನಾಗವರ್ಮನೇ ಜನ್ನನಿಗೆ ಉಪಾಧ್ಯಾಯನಲ್ಲವೆ? ಇಂದು ನೃಸಿಂಹನಲ್ಲಿ ಕಟಕೋಪಾಧ್ಯಾಯನಾರೆಂದು ಕೇಳುವುದಾದರೆ ಕವಿಶ್ರೇಷ್ಠರಲ್ಲಿ ಸೂಕ್ತಿನವೀನೋಜ್ಜ್ವಲಬಾಣನೆಂಬ ಬಿರುದನ್ನು ಪಡೆದಿರುವ ಸುಮನೋಬಾಣನಿರುವನು. ಇವನೂ ಇಂದು ಜನ್ನನಿಗೆ ಉಪಾಧ್ಯಾಯನು ಎಂದು ಸುರಸವಾದ ಅರ್ಥವಾದುದರಿಂದ ಜನ್ನನು ಈ ಪದ್ಯದಲ್ಲಿ ತನಗೆ ಹಿಂದೆ ಉಪಾಧ್ಯಾಯನಾಗಿದ್ದ ನಾಗವರ್ಮನನ್ನೂ, ಈಗ ಉಪಾಧ್ಯಾಯನಾ

ಗಿರುವ ಸುಮನೋಬಾಣನನ್ನೂ ಸ್ತುತಿಸಿರುವನು. ವ್ಯಾಕರಣ ಶಾಸ್ತ್ರವನ್ನು ಬರೆದು ಪ್ರಸಿದ್ಧನಾಗಿದ್ದ ನಾಗವರ್ಮನೂ, ಉತ್ತಮವಾದ ಕಾವ್ಯವನ್ನು ಬರೆದು ಸೂಕ್ತಿ ನವೀನೋಜ್ಜ್ವಲನೆಂಬ ಬಿರುದನ್ನು ಪಡೆದಿರುವ ಸುಮನೋಬಾಣನೂ ಉಪಾಧ್ಯಾಯರಾಗಿದ್ದುದರಿಂದ ತನಗೆ ಶಾಸ್ತ್ರದಲ್ಲಿಯೂ, ಕವಿತ್ವದಲ್ಲಿಯೂ, ಅಸಾಧಾರಣವಾದ ಪಾಂಡಿತ್ಯವಿತ್ತೆಂಬುದನ್ನೂ ವ್ಯಂಜ್ಯ ಮುಖ್ಯವಾಗಿಯೂ ಸೂಚಿಸಿರುವನು. ಅಲ್ಲದೆ ತಾನು ಪಂಡಿತನೂ, ಕವಿಯೂ ಆಗಿದ್ದನೆಂಬ ಈ ವಿಷಯವನ್ನೇ ರನ್ನಂ ವೈಯಾಕರಣಂ, ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ ಎಂದು ಯಶೋಧರ ಚರಿತ್ರೆಯಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿರುವನು. ಕಾವ್ಯಾವಲೋಕನವನ್ನು ಬರೆದ ನಾಗವರ್ಮನಿಗೂ ಅಭಿನವ ಶಬ್ದಸಂಸ್ಮರಣದಿಂದ ಜನಕ್ಕೆ ತಿಳಿವನ್ನುಂಟುಮಾಡಿದುದರಿಂದ ಇದಾನೀಂತನ ಶರ್ವವರ್ಮನೆಂಬ ಬಿರುದು ಬಂದಿತೆಂದು ತಿಳಿದು ಬರುವುದರಿಂದ ಜನ್ನನ ಉಪಾಧ್ಯಾಯನಾದ ನಾಗವರ್ಮನೇ, ಕಾವ್ಯಾವಲೋಕನ, ವಸ್ತುಕೋಶಗಳ ಕರ್ತೃವಾದ ನಾಗವರ್ಮನು ಎಂಬುದರಲ್ಲಿ ಯಾವ ಸಂದೇಹವೂ ಇರಲಾರದು. ಜನ್ನನು ನಾಗವರ್ಮನ ಶಿಷ್ಯನೆಂಬುದಕ್ಕೆ ಸೂಚಕವಾಗಿರುವ ಜನ್ನನ ಅನಂತನಾಥಪುರಾಣದ ಕೆಲವು ಪ್ರಯೋಗಗಳನ್ನು ಇಲ್ಲಿ ಉದಾಹರಿಸುವುದು ಅಪ್ರಕೃತವಾಗಲಾರದು. ಸಂಸ್ಕೃತದಲ್ಲಿ ಅಪೂರ್ವ ಪ್ರಯೋಗವಿದ್ದು ವಸ್ತುಕೋಶದಲ್ಲಿ "ಸದಕಂ ತಂತುಲವುಚ್ಯತೆ" ಎಂದು ಹೇಳಲ್ಪಟ್ಟಿರುವ ಸದಕ ಶಬ್ದವನ್ನೂ, ಪಾಯಸ (ಪ್ಪೈರೇಯ) ಶಬ್ದಪರ್ಯಾಯವಾದ "ತುಯ್ಯಲ್" ಎಂಬ ದೇಶ್ಯ ಶಬ್ದವನ್ನೂ, ಗಜಶಿಕ್ಷಾದಲ್ಲಿ ಉಪಯುಕ್ತವಾಗಿರುವ "ಯತ" "ಯಾತ" ಶಬ್ದವನ್ನೂ ವೈಷಧವ ಕಕುದಪರ್ಯಾಯವಾದ "ಇಣಿಲ್" ಎಂಬ ಪದವನ್ನೂ ಜನ್ನನು "ರಸತೋಯಂ ಭಾವ

---

1 ಈ ಪ್ರಕರಣದಲ್ಲಿ ಸುಮನೋಬಾಣನ ಬಿರುದು "ನವನೋಜ್ಜ್ವಲಬಾಣ" ಎಂದೋ "ಸೂಕ್ತಿ ನವೀನೋಜ್ಜ್ವಲಬಾಣ" ಎಂದೋ ನಿಷ್ಕರ್ಷಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಕುಸುಮಾವಳಿಯ "ವಿವಿತಕಥಾ...ವರಬಾಣನ ಸೂಕ್ತಿ ಕಳಾಪವಗ್ಗದ ಕವಿಮಾಥವ....." ಈ ಪ್ರಯೋಗವನ್ನೂ, ಇನ್ನೂ ಕೆಲವು ಇತರ ಕವಿಗಳ ಪ್ರಯೋಗವನ್ನೂ ನೋಡುವುದಾದರೆ "ಸೂಕ್ತಿನವೀನೋಜ್ಜ್ವಲಬಾಣ" ಎಂಬುದೇ ಈತನ ಬಿರುದೆಂದು ಹೇಳಬೇಕಾಗುವುದು, ಮತ್ತು ಇಲ್ಲಿ ಎಂಬ, ಎನ್ನುವ ವಿಶೇಷಣಕ್ಕೆ ವಿಶೇಷ್ಯವಿಲ್ಲ ಎಂಬ ಸೂಕ್ತಿಎಂದು ಅನ್ವಯಿಸಿ ಸೂಕ್ತಿಶಬ್ದಕ್ಕೆ ವಿಶೇಷಣ ಮಾಡಿದರೂ ಈ ಸೂಕ್ತಿಯೆಂಬ ಪ್ರಥಮಾಂತಕ್ಕೆ ಅನ್ವಯಿಸುವ ಕ್ರಿಯಾಪದವಾದರೂ ಇಲ್ಲ. ಮುಂದೆ ಸುಮನೋಬಾಣಂ ಎಂಬ ಅನಸ್ವಿತವಾದ ಪದವೊಂದು ಪ್ರಥಮಾಂತವೂ ಇರುವುದು. ಈ ಕಾರಣಗಳಿಂದ ಎಂಬ ಎಂಬಲ್ಲಿ ವಾಕ್ಯ ಪೂರ್ಣವಾಗುವಂತೆ ಪ್ರಕೃತದಲ್ಲಿ ಅರ್ಥ ಹೇಳಬೇಕಾಗಿರುವುದರಿಂದ ಎಂಬ ಎನ್ನುವ ಶಬ್ದವನ್ನು ಕವಿಯು ಪ್ರಯೋಗಿಸಿಲ್ಲ ವೆಂದೇ ಊಹಿಸಬೇಕಾಗುವುದು. ಪಂಪಭಾರತದ "ನಿನಗೇನೆಂದೊಡವೆಂದು ದೊಪ್ಪಿದವುದಂ ತೀಕೆನ್ನ ನಿನ್ನೀಶರಾಸನದೊಳ್ ಶೂಲಕಪಾಲಪಾಣಿ ದಯೆಯಿಂ ಬಂದಿರ್ದ....."

ಎಂಬ ಪ್ರಯೋಗವನ್ನೂ—

ಶಾಂತಿಪುರಾಣದ—

"ಜಿನತತ್ವಂ ಸ್ಮರತತ್ವವೆಂಬಿವೆರಡೆಂ ದೂರಸ್ಥವೆಂತೆನ್ನ ಆ।
ಜಿನತತ್ವಂ....."

ಕ್ಷಿತಿನಾರ್ಥ ಪಲರುಳ್ಳೊಡೆಂ...ದೂರಿಯಾಯ್ತೆಂತೆನ್ನ ಸಜ್ಯೋತಿರುನ್ನತಿ....॥

ಪ್ರಯೋಗಗಳನ್ನೂ ವಿಮರ್ಶಮಾಡಿದರೆ ಇಲ್ಲಿಯೂ ಎನ್ನ ಎಂಬ ಪಾಠವು ಪ್ರಮಾದದಿಂದ ಎಂಬ ಎಂದು ಮಾರ್ಪಟ್ಟಿರಂತೆ ಕಾಣುವುದು.

ಗಂಥಂ ಪದನವಕಚಯಂ ಕಾವ್ಯವುಪ್ಪಂ...೧-೬೪)——ಕಾಟಿಟ್ಟಿಕ್ಕಿಗೂಡುವವೋಲ್ ತುಯ್ಯಲ ನಿಂದ್ರವಂದಿ ತನ...(೧-೬೦) ಯತಯಾತ ಪ್ರೌಢಿಯಂ ಮಿಂಚಿನ ವೇಗವಡೆಮಂ...(೩-೩೫) ಇಣಿ ಗಿಡಿ ದಿಣಿಲಂ ಕೋಲ್ಮಿಳಿನಣೆದು...(೪-೧೧೧) ಎಂದು ಅನಂತನಾಥ ಪುರಾಣದಲ್ಲಿ ಪ್ರಯೋಗಿಸಿರುವನು. ಈ ಅಪೂರ್ವಪದಗಳ ಪ್ರಯೋಗ ಸ್ಫೂರ್ತಿಯು ಜನ್ನನಿಗೆ ಉಪಾಧ್ಯಾಯನಾಗಿದ್ದ ನಾಗವರ್ಮನ ಅತಿನಿಕಟ ಸಾನ್ನಿಧ್ಯದಿಂದಲ್ಲದೆ ಬೇರೊಂದರಿಂದಲ್ಲವೆಂದು ಧಾರಾಳವಾಗಿ ಹೇಳಬಹುದು.

ಚಾಳುಕ್ಯರಾಜರಲ್ಲಿ ಜಗದೇಕಮಲ್ಲ ಎಂಬ ಹೆಸರಿನವರು ಇಬ್ಬರೆಂದು ಶಾಸನಗಳಿಂದ ತಿಳಿದು ಬರುವುದು. ಜಗದೇಕಮಲ್ಲ ಅಥವಾ ಜಯಸಿಂಹ ಎಂಬವನು, ಕ್ರಿ. ಶ. ೧೦೫೫-೧೦೭೬ ವರೆಗೆ ಆಳಿದವನು. ಪೆರ್ಮಾ ಜಗದೇಕಮಲ್ಲನೆಂಬವನು ೧೧೩೬ ರಿಂದ ೧೧೫೧ ರ ವರೆಗೂ ರಾಜ್ಯಭಾರ ಮಾಡಿದವನು. ಜನ್ನನ ಉಪಾಧ್ಯಾಯನಾಗಿದ್ದ ನಾಗವರ್ಮನು ೧೧೫೧ ರಲ್ಲಿ ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದನೆಂದು ನಾವು ನಿಶ್ಚಯಿಸಬಹುದಾದುದರಿಂದ ಈತನ ಪ್ರಸಿದ್ಧಿಕಾಲವು ೧೧೫೦ ರಿಂದ ೧೧೯೦ ವರೆಗೂ ಇರಬಹುದೆಂದು ಹೇಳುವುದರಲ್ಲಿ ಯಾವ ಕೊರತೆಯೂ ಇರಲಾರದು.

೧೧೫೦ ರಲ್ಲಿ ಸಾಮಾನ್ಯವಾಗಿ ನಾಗವರ್ಮನಿಗೆ ೨೫ ವರುಷವಿರಬಹುದೆಂದೂ ೧೨೦೯ರಲ್ಲಿ ಯಶೋಧರ ಕಾವ್ಯವನ್ನು ಬರೆದ ಜನ್ನನಿಗೆ ಸುಮಾರು ೩೦ ವರುಷವಿರಬಹುದೆಂದೂ ಊಹಿಸುವುದಾದರೆ ನಾಗವವರ್ಮನ ಅಪರವಯಸ್ಸಿನಲ್ಲಿ ಎಂದರೆ ಸುಮಾರು ೬೫ ರಿಂದ ೮೦ ರ ವರೆಗೆ ಜನ್ನನು ಈತನ ಶಿಷ್ಯನಾಗಿದ್ದಿರಬಹುದೆಂದು ಊಹಿಸಿಕೊಳ್ಳುವುದರಲ್ಲಿ ಯಾವ ವಿಪ್ರತಿಪತ್ತಿಯೂ ಬರಲಾರದು.

ಜನ್ನನು ಅನಂತನಾಥಪುರಾಣವನ್ನು ಬರೆಯುವುದಕ್ಕೆ ಮೊದಲೇ ಈ ನಾಗವರ್ಮನು ಕಾಲ ಧರ್ಮವನ್ನೆಲ್ಲವನ್ನೆದಿದ್ದುದರಿಂದ ತತ್ಕಾಲದಲ್ಲಿ ಸುಮನೋಬಾಣನನ್ನು ಉಪಾಧ್ಯಾಯನನ್ನಾಗಿ ಸ್ವೀಕರಿಸಿ, ನಾಗವರ್ಮನನ್ನು ಆ ನಾಗವರ್ಮನೆಂದು ನಿರ್ದೇಶಿಸಿ ಸುಮನೋಬಾಣನನ್ನು ಇಂದು ಉಪಾಧ್ಯಾಯನೆಂದು ನಿರ್ದೇಶಿಸಿ ಹೇಳಿರುವನು. ಈ ಅಭಿಪ್ರಾಯದಿಂದಲೇ 'ಜನ್ನಂಗುಪಾಧ್ಯಾಯಂ, ಎಂಬ ಪದವನ್ನು" ದೇಹಳೀ ದೀಪನ್ಯಾಯದಂತೆ ವಾಕ್ಯ ಮಧ್ಯದಲ್ಲಿ ಸೇರಿಸಿರುವನೆಂಬುದರಲ್ಲಿ ಸಂದೇಹವೇ ಇರದು.

ಈ ಸಂದರ್ಭದಲ್ಲಿ ವಿಮರ್ಶಿಸಬೇಕಾದ ಹಲವು ವಿಷಯಗಳಿದ್ದರೂ ವಿಸ್ತಾರ ಭಯದಿಂದ ಇಲ್ಲಿ ಸಂಗ್ರಹವಾಗಿ ಹೇಳಲಾಗಿದೆ. ದೋಷಜ್ಞಾ ಗುಣಜ್ಞಾರೂ ಆದ ವಿದ್ವನ್ಮಣಿಗಳು ದೋಷವನ್ನು ದೂರೀಕರಿಸಿ ಗುಣಲೇಶವನ್ನಾದರೂ ಸ್ವೀಕರಿಸಿ ಆನಂದಿಸುವರೆಂದು ಪ್ರಕೃತ ವಿಮರ್ಶೆಯನ್ನು ಉಪಸಂಹರಿಸಿರುವೆವು.

ಇಂತು ಸಜ್ಜನವಿಧೇಯರು.

---

[1] ಇದಾನೀಂತನ ಶರ್ವವರ್ಮ, (ಈಗಣ ಶರ್ವವರ್ಮ,) ಅಭಿನವ ಶರ್ವವರ್ಮ, (ಹೊಸಬ ನಾದ ಶರ್ವವರ್ಮ,) ಎಂಬ ಎರಡು ಶಬ್ದಗಳಲ್ಲಿಯೂ ಇರುವ, ಈಗಣ, ಹೊಸಬ, ಎಂಬ ಅರ್ಥಗಳು ಭಿನ್ನವೆಂದೂ, ಇವೆರಡು ಬಿರುದುಗಳೂ ಬೇರೆ [redacted] ಎಂದೂ ಹೇಳುವುದು ಸಯುಕ್ತಿಕವಲ್ಲ.

ವಿಷಯಸೂಚಿಕ.

ಕಾಂಡದ ಹೆಸರು	ವರ್ಗದ ಹೆಸರು	ಪದ್ಯ ಸಂಖ್ಯೆ	ಪುಟ ದಿಂದ	ಪುಟದ ವರೆಗೆ
ಮುನ್ನುಡಿ			i	xvi
I ಅವಿಭಿನ್ನಾರ್ಥಕಾಂಡಂ	೧ ಸ್ವರ್ಗವರ್ಗಂ	೪೧	೧	೧೪
	೨ ಕಾಲವರ್ಗಂ	೧೪	೧೫	೧೪
	೩ ಸಂಸರ(ಣ)ವರ್ಗಂ	೨೦	೧೪	೨೧
	೪ ಸಲಿಲವರ್ಗಂ	೨೩	೨೨	೨೫
	೫ ಭೂವರ್ಗಂ	೩	೨೬	೨೩
	೬ [1]ಕಾಲಾಯಸಾದಿ ಧಾತುವರ್ಗಂ	೧೨	೨೪	೨೯
	೭ ವನವರ್ಗಂ	*೧೫	೩೦	೩೨
	೮ ವೃಕ್ಷಾದಿವರ್ಗಂ[2]	೩೪	೩೩	೩೯
	೯ ಮೃಗಪಕ್ಷಿವರ್ಗಂ[3]	೨೪	೪೦	೪೪
	೧೦ ಪುರಗೃಹೋಪಕರಣಾದಿ ವರ್ಗಂ	೩೪	೪೪	೫೧
	೧೧ ಮನುಷ್ಯವರ್ಗಂ[4]	೪೪	೫೨	೬೬
	೧೨ ದೇಹಾವಯವಾದಿವರ್ಗಂ	೪೨	೬೩	೭೪
	೧೩ ಭೂಷಣಾದಿವರ್ಗಂ	೪೦	೭೫	೪೧
	೧೪ ಸಮರಾದಿಸಂಪ್ರಕೀರ್ಣವರ್ಗಂ	೪೦	೪೭	೪೪
	೧೫ ಪಶುವರ್ಗಂ	೧೪	೪೮	೪೯
	೧೬ ಧಾನ್ಯವರ್ಗಂ	೨೨	೪೯	೪೫
	ಕಾಂಡದ ಉಪಸಂಹೃತಿ	೫	೪೬	೪೭
II ಸಾಮಾನ್ಯಕಾಂಡಂ	೧ ವಿಶೇಷಣವರ್ಗಂ	೭೨	೪೪	೫೦
	೨ ವಿಶೇಷ್ಯವರ್ಗಂ	೩೪	೫೦	೫೭
III ನಾನಾರ್ಥಕಾಂಡಂ	೧ ನಾನಾರ್ಥವರ್ಗಂ	೧೩೬	೫೦೪	೬೪೦
ಪರಿಶಿಷ್ಟಂ ೧	ಶಬ್ದಗಳ ಅಕಾರಾದ್ಯನುಕ್ರಮಣಿಕೆ		೬೪೩	೭೪೯
ಪರಿಶಿಷ್ಟಂ ೨	ಹಸ್ತಲಿಖಿತ ಪ್ರತಿಯ ಪಾಠ ಭೇದಂಗಳ್		೭೫೦	೭೮೨
ಶುದ್ಧಿಪತ್ರಂ			೭೮೩	೭೮೪

[1] ಶೈಲವರ್ಗಂ, ಪದ್ಯ-೪ ಕಾಲಾಯಿಸಾಧಾತುವರ್ಗ ೪ * ೧೪ ಪದ್ಯಗಳು. [2] ವನೌಷಧವರ್ಗಂ ೩೯. [3] ಮೃಗವರ್ಗ೪ ಪಕ್ಷಿವರ್ಗಂ ೧೬. [4] ಬ್ರಾಹ್ಮಣವರ್ಗಂ ೪೪. ಕ್ಷತ್ರಿಯವರ್ಗಂ ೧೫. ವೈಶ್ಯವರ್ಗಂ. ಶೂದ್ರವರ್ಗಂ ೬. ಮನು[illegible]ರ್ಗ ೧೫. ಎಂದು "ಗ" ಪ್ರತಿಯಲ್ಲಿದೆ.

ಶ್ರೀಃ.

ನಾಗವರ್ಮವಿರಚಿತಂ

ಅಪ್ಪ

ವಸ್ತುಕೋಶಂ.

ಅಥವಾ

ಅಭಿಧಾನಕೋಶಂ

ನಮಸ್ಸಿದ್ಧೇಭ್ಯಃ.

ಅವಿಭಿನ್ನಾರ್ಥಕಾಂಡಂ. ಪ್ರಥಮಂ,

೧ ಸ್ವರ್ಗವರ್ಗಂ.

ಕಂ॥ ದೇವಾದಿದೇವನಭವಂ ।
ಕೇವಳಬೋಧಪ್ರಬುದ್ಧತತ್ವಂ ಮುಕ್ತಿ ॥
ಶ್ರೀವಲ್ಲಭನೆಮಗೀಗೆ ಸು ।
ಖಾವಾಪ್ತಿಯೆನೊಸೆದು ವರ್ಧಮಾನಜಿನೇಂದ್ರಂ ॥ ೧ ॥

ವರರುಚಿ ಹಲಾಯುಧಂ ಭಾ ।
ಗುರಿ ಶಾಶ್ವತಮಮರಕೋಶಮೆಂಬಿವು ಮೊದಲಾ ॥
ಗಿರಿ ಪೂರ್ವಶಾಸ್ತ್ರಮಂ ಸಂ ।
ಹರಿಸಿ ಮನಂಗೊಳೆ ನಿಘಂಟುವಂ ವಿರಚಿಸುವೆಂ ॥ ೨ ॥

ಪುದಿದ ಮನಸ್ತಮಮಂ ಬಿಡೆ ।
ಪೆದಱಿ ಸದರ್ಥಪ್ರಕಾಶಮಂ ಮಾಡುಗುಮು ॥
ಪ್ಪುದಱಿಂ ಸಮಸ್ತವಿದ್ಯಾ ।
ಪ್ರದೀಪಮಭಿಧಾನಕೋಶಮಲ್ಲದೆ ಪೆಱಿತೇಂ ॥ ೩ ॥

ಕರಮೆ ಜಡಮತಿಯು ಮಱಿವಂ ।
ತಿರೆ ಕನ್ನಡದಿಂ ಜಲಕ್ಕನಾಗಿರ್ಪಿನೆಗಂ ॥
ವಿರಚಿಸಿದಂ ಕವಿಕಂಠಾ ।
ಭರಣನಿದಂ ನಾಗವರ್ಮನೆನೆ ಪೆಱ್ಚಿದರಾರ್ ॥ ೪ ॥

ಕಂ॥ ಅವಿಭಿನ್ನಾರ್ಥಂ ನಾಮಾ ।
ನ್ಯವಾಚಕಂ ಭಿನ್ನವಾಚಿಯೆಂಬುದುವೆಂದಿಂ ॥
ತಿವು ಮೂಱು ಮುಲ್ಲಿ ಕಾಂಡ ।
ಪ್ರವಿಭಾಗದೊಳೊಂದಿ ತೋಕ್ಕುಮನುಗತಿಯಿಂದಂ ॥ ೫ ॥

ಪರ್ಯಾಯಶಬ್ದದೊಳ್ ತಾ ।
ತ್ಪರ್ಯ್ಯದಿ ನಱಿದರ್ಥಗತಿಯಿನನ್ವರ್ಥತೆಯಿಂ ॥
ಪರ್ಯಾಳೋಚಿಸಿ ಕೊಳ್ವಾ ।
ಹಾರ್ಯಮಿದೆಂದನಭಿಹಿತದೊಳಭಿಯೋಗಪರರ್ ॥ ೬ ॥

ಶ್ರುತದೇವಿ ವಾಣಿ ವಾಗ್ಭಾ ।
ರತಿ ವಚನಂ ಭಾಷೆ ವಾಚಿ ಗೀರ್ ಬ್ರಾಹ್ಮಿ ಸರ ॥
ಸ್ವತಿ ವರದೆಯಾಗಿ ಪದಪ ।
ದ್ಧತಿಯನೊಡೆಂಬಡೆ ನಿಮಿರ್ಚಿ ತಿರ್ದುಗೆ ದಯೆಯಿಂ ॥ ೭ ॥

ಪರಮೇಷ್ಠಿ ಪರಂಜ್ಯೋತಿ ।
ಸ್ವ್ವರೂಪನಾಪ್ತಂ ತ್ರಿಲೋಕಗುರು ಸರ್ವಜ್ಞಂ ॥
ದುರಿತಹರನಕ್ಷಯಂ ವೀ ।
ತರಾಗನರ್ಹಂ ಜಿನೇಶ್ವರಂ ತೀರ್ಥಕರಂ ॥ ೮ ॥

ಸಿದ್ಧಾಂತವಾಗಮಂ ಶ್ರುತಿ ।
ರಾದ್ಧಾಂತಂ ಪ್ರವಚನಂ ಜಿನೋದಿತಮಕ್ಕುಂ ॥
ಸದ್ಧರ್ಮಕಥಾ ಕಥನ ನಿ ।
ಬದ್ಧಗ್ರಂಥಂ ಪುರಾಣಮಿತಿಹಾಸಾಖ್ಯಂ ॥ ೯ ॥

ಬುದ್ಧಂ ಸಮಂತಭದ್ರಂ ।
ಸಿದ್ಧಾರ್ಥಂ ಮುನಿ ತಥಾಗತಂ ಷಡಭಿಜ್ಞಂ ॥
ಶೌದ್ಧೋದನಿ ದಶಬಳನ ।
ತ್ಯುದ್ಧತಮದಮದನವಿಜಯಿ ಶಾಕ್ಯಂ ಸುಗತಂ ॥ ೧೦ ॥

ಕಂ॥ ಸರಸಿರುಹಭವಂ ಬ್ರಹ್ಮಂ ।
ಹಿರಣ್ಯಗರ್ಭಂ ವಿಧಾತೃ ದೇವನಜಂ ಪಂ ॥
ಕರುಹಾಸನಂ ಪ್ರಜಾಪತಿ ।
ವಿರಿಂಚನಂ ವಿಧಿ ಪಿತಾಮಹಂ ಚತುರಾಸ್ಯಂ ॥ ೧೧ ॥

ವೇದಂ ಛಂದಂ ಶ್ರುತಿ ತ ।
ದ್ಭೇದಂ ಸಾಮರ್ಗ್ಯಜುಸ್ತ್ರಯಂ ತ್ರಯಿ ಯೆನಿಕುಂ ॥
ವೇದಾಂಗಷಟ್ಕಮಂ ಶಿ ।
ಕ್ಷಾದಿಗಳುಪನಿಷದಮೆಂಬುದದು ವೇದಾನ್ತಂ ॥ ೧೨ ॥

ಮು॥ಸ್ರ॥ ಭವನೀಶಂ ಶಂಭು ರುದ್ರಂ ಪಶುಪತಿ ಗಿರಿಶಂ ಶೂಲಿ ಭರ್ಗಂ ಭವಾನೀ ।
ಧವನುಗ್ರಂ ವ್ಯೋಮಕೇಶಂ ಹರ ನತನುಹರಂ ಶಂಕರಂ ನೀಲಕಂಠಂ ॥
ಶಿವ ನೀಶಾನಂ ತ್ರಿಣೇತ್ರಂ ತ್ರಿಪುರಬಯಿ [ಗಿರೀಶಂ] ಕ್ರತುಧ್ವಂಸಕಂ ಸ್ಥಾ ।
ಣು ವಿರೂಪಾಕ್ಷಂ ಮೃಡಂ ಧೂರ್ಜಟಿ ಫಣಿಕಟಕಂ ವಾಮದೇವಂ ವೃಷಾಂಕಂ ॥ ೧೩ ॥

ಕಂ॥ ಗಂಗಾಧರಂ ಕಪಾಳಧ ।
ರಂ ಗಜವರರುಚಿರಚರ್ಮವಸನಧರಂ ಖ ॥
ಟ್ವಾಂಗಧರಂ ಗಿರಿತನಯಾ ।
ರ್ಧಾಂಗಧರಂ ಪೃಥುಜಟಾಧರಂ ಚಂದ್ರಧರಂ ॥ ೧೪ ॥

ಪ್ರಮಥಂ [ಗಣಂ]ಕಪರ್ದಂ ।
ಸಮುದಗ್ರಜಟಾಭರಂ ಪಿನಾಕಂ ಚಾಪಂ ॥
ಖಮರುದನಲಾತ್ಮಸೋಮಾ ।
ರ್ಕಮಹೀಸಲಿಲಂಗಳಂಗವುಭವಂಗೆಂದುಂ ॥ ೧೫ ॥

ಉಮೆ ಪಾರ್ವತಿ ಕಾತ್ಯಾಯನಿ ।
ಹಿಮವತ್ಸುತೆ ಚಂಡಿ ದುರ್ಗೆ ಮೇನಾತ್ಮಜೆ ಗೌ ॥
ರಿ ಮೃಡಾಣಿ ಗಿರಿಜೆ ರುದ್ರಾ ।
ಣಿ ಮಹೇಶ್ವರಿ ಕಾಳಿಯೆಂಬಿವಂಬಿಕೆಯ ಪೆಸರ್ ॥ ೧೬ ॥

ಕಂ॥ ಪರಶುಧರಂ ಗಣಪತಿ ವಿ।
ಘ್ನರಾಜ ನಿಭವದನ ನೇಕದಂತಂ ಲಂಬೋ ॥
ದರ ನಾಖುವಾಹನಂ ಶಂ।
ಕರನಗ್ರಸುತಂ ವಿನಾಯಕಂ ಹೇರಂಬಂ ॥ ೧೬ ॥

[ಗೌರೀಸುತಂ] ವಿಶಾಖಂ।
ತಾರಕರಿಪು ಷಣ್ಮುಖಂ ಮಹಾಸೇನಂ ಕ್ರೌಂ ॥
ಚಾರಿ ಗುಹಂ ಸೇನಾನಿ ಮು।
ಯೂರರಥಂ ಸ್ವಾಮಿ ಕಾರ್ತಿಕೇಯಂ ಸ್ಕಂದಂ ॥ ೧೪॥

ಚಾಮುಂಡಿ ಕರ್ಣಮೋಟಿ ಮು।
ಹಾಮಾಯಾಮೂರ್ತಿ ಚರ್ಚೆಯುಂ ಭೈರವಿಯಾ ॥
ನಾಮಮಿವಕ್ಕುಂ ಬ್ರಹ್ಮಾ।
ಣೀಮುಖ್ಯರೆನಿಪ್ಪರೇಪ್ಪಿರುಂ ಮಾತೃಕೆಯರ್ ॥ ೧೯ ॥

ಮು॥ ವನಜಾಕ್ಷಂ ಪುರುಷೋತ್ತಮುಂ ನಗಧರಂ ಶ್ರೀವತ್ಸಲಕ್ಷ್ಮಂ ಜನಾ।
ರ್ದನ ನಿಂದ್ರಾವರಜಂ ಚತುರ್ಭುಜ ನುಪೇಂದ್ರಂ ವಿಷ್ಣು ನಾರಾಯಣಂ॥
ದನುಜಾರಾತಿ ಮುಕುಂದ ನಬ್ಧಿಶಯನಂ ಗೋವರ್ಧನಂ ದೇವಕೀ।
ತನಯಂ ಕೇಶವ ನಚ್ಯುತಂ ಮುರಹರಂ ವೈಕುಂಠ ನಬ್ಜೋದರಂ॥ ೨೦॥

ಕಂ॥ ವನಮಾಲಿ ಖಭ್ರುವುಂ ಭುವ।
ನನಾಥ ನಜಿತಂ ದಶಾರ್ಹತನಯಂ ವಸುದೇ ॥
ವನ ತನಯ ನಾತ್ಮಭೂ ಪ।
ದ್ಮನಾಭನುಂ ವಿಶ್ವರೂಪಿ ವಿಷ್ವಕ್ಸೇನಂ ॥ ೨೧ ॥

ಶಾ॥ ಶ್ರೀವತ್ಸಂ ನರಕಾರ್ಯಧೋಕ್ಷಜ ನಜಂ ಪೀತಾಂಬರಂ ಚಕ್ರಭೃ।
ದ್ಗೋವಿಂದಂ ಹರಿ ಶೌರಿ ಮುಂಜವೃಜಿನಂ ಕಂಸಾರಿ ವಿಶ್ವಂಭರಂ ॥
ಮಾವ[ತ್ಸಂ ಸ್ವ]ಭವಂ ತ್ರಿವಿಕ್ರಮನವಂ ದಾಮೋದರಂ ಕೃಷ್ಣನ।
ಬ್ಜಾವಾಸಾಪತಿ ವಿಷ್ಟರಶ್ರವ ಹೃಷೀಕೇಶಂ ಸುಪರ್ಣಧ್ವಜಂ ॥ ೨೨ ॥

ಕಂ॥ ಗದೆ ಕೌಮೋದಕಿ ಚಕ್ರಂ ।
ಸುದರ್ಶನಂ ಸದಸಿ ನಂದಕಂ ಧನು ಶಾರ್ಙ್ಗಂ ॥
ತದಲಂಕಾರಂ ಕೌಸ್ತುಭ ।
ಮದು ಗರುಡಂ ಕೇತು ಪಾಂಚಜನ್ಯಂ ಶಂಖಂ ॥ ೨೩ ॥

ತಂದೆ ವಸುದೇವನಾನಕ ।
ದುಂದುಭಿಯೆನೆ ನೆಗಳ್ದಿ ಮಹಿಮೆಯಿಂ ದೇವಕಿ ತಾಯ್ ॥
ನಂದನ ನನನ್ಯಜಂ ಶ್ರೀ ।
ಸುಂದರಿ ತನಗಿನಿಯಳಗ್ರಜಂ ಬಲದೇವಂ ॥ ೨೪ ॥

ಬಲ ನೇಕಕುಂಡಲಂ ತಾ ।
ಳಲಕ್ಷ್ಮ ನಸಿತಾಂಬರಂ ಪ್ರಲಂಬಘ್ನಂ ಲಾಂ॥
ಗಲಿ ರೇವತೀಧವಂ ಹಲಿ ।
ಬಲಭದ್ರಂ ಮುಸಳಿ ಕಾಮುಪಾಳಂ ರಾಮುಂ ॥ ೨೫ ॥

ಶ್ರೀರಾಮೆ ಲಕ್ಷ್ಮಿ ಗೋಮಿನಿ ।
ವಾರಿರುಹಾವಸಥೆ ಪದ್ಮೆ ರಮೆ ಕಮಲೆ ಸುಧಾಂ ॥
ಭೋರಾಶಿತನಯೆ ಸಿರಿ ದನು ।
ಜಾರಿಪ್ರಿಯೆ ಯೆಂದಿವಿಂದಿರಾನಾಮಂಗಳ್ ॥ ೨೬ ॥

ಮನಸಿಶಯಂ ಪ್ರದ್ಯುಮ್ನಂ ।
ಮನೋಭವಂ ಕಂತು ಮನ್ಮಥಂ ಕಂದರ್ಪಂ ॥
ಮನಸಿಜ ನನಂಗ ನಂಗಜ ।
ನನನ್ಯಜಂ ಮಕರಕೇತು ಪೂರಂ ಮದನಂ ॥ ೨೭ ॥

ಸ್ಮರ ನತನು ದರ್ಪಕಂ ಶಂ ।
ಬರಶೂರ್ಪಕವೈರಿ ಕುಸುಮಬಾಪಂ ಶೃಂಗಾ ॥
ರ್ಮ[ರಸ್ಯೈಕಯೋನಿ] ಕಾಮುಂ ।
[ಸಿರಿಗುವರಂ] ರತಿಮನೋಹರಂ ಮಧುಮಿತ್ರಂ ॥ ೨೮ ॥

ಕಂ॥ ಅರುಣಾನುಜಂ ಸುಪರ್ಣಂ ।
ಸುರೇಂದ್ರಮದಮರ್ದನಂ ಸುಪರ್ಣೀತನಯಂ ॥
ಗರುಡಂ ವಿಹಂಗರಾಜಂ ।
ಗರುತ್ಮ ನಹಿವೈರಿ ವೈನತೇಯಂ ತಾರ್ಕ್ಷ್ಯಂ ॥ ೮ ॥

ತ್ರಿದಿವಂ ಸ್ವ ಸ್ಸ್ವರ್ಗಂ ಸುರ ।
ಸದನಂ ನಾಕಂ ತ್ರಿವಿಷ್ಟಪಂ ದಿವಮೆಂದಿಂ ॥
ತಿದು ತಾ ನಮರ್ತ್ಯಭವನಂ ।
ತದುದ್ಭವ [ರ್ಕಳ್] ದಿವೌಕಸರ್ ದೇವರ್ಕಳ್ ॥ ೯೦ ॥

ಅಮರರ್ ಸುಪರ್ವರನಿಮಿಷ ।
ರಮರ್ತ್ಯರಸ್ವಪ್ನರದಿತಿತನಯರ್ ಲೇಖರ್ ॥
ಸುಮನರ್ ಗೀರ್ವಾಣರ್ ಸುರ ।
ರಮೃತಾಶರ್ ಕ್ರತುಭುಜರ್ ನಿಳಿಂಪರ್ ತ್ರಿದಶರ್ ॥ ೯೧ ॥

ದನುಜರ್ ದೈತೇಯರ್ ದಿತಿ ।
ತನೂಭವರ್ ಪೂರ್ವದೇವ ರಸುರರ್ ಪಿತಾ ॥
ಳನಿವಾಸಿಗಳ್ ಸುರದ್ವಿಷ ।
ರೆನೆ ದೈತ್ಯರ್ ಶುಕ್ರಶಿಷ್ಯರಾರ್ಗಮದೈತ್ಯರ್ ॥ ೯೨ ॥

ಮ॥ ಪುರುಹೂತಂ ಮಘವಂ ದಿವಸ್ಪತಿ ಸುನಾಸೀರಂ ತುರಾಷಾಟ್‌ಪುರಂ ।
ದರನಾಖಂಡಲ ನಪ್ಸರಃಪತಿ ಬಿಡೌಜಂ ವಜ್ರಿ ಸಂಕ್ರಂದನಂ ॥
ಸುರರಾಜಂ ನಗವೈರಿ ದುಶ್ಯ್ಯವನನಿಂದ್ರಂ ಜಿಷ್ಣು ವೃದ್ಧಶ್ರವಂ ।
ಹರಿವಾಹಂ ಶತಮನ್ಯು ನೀರದರಥಂ ಶಕ್ರಂ ವೃಷಂ ವಾಸವಂ॥ ೯೩ ॥

ಕಂ॥ ಸುತ್ರಾಮಾಖ್ಯಂ ದಶಶತ ।
ನೇತ್ರಂ ಕುಲಿಶಾಯುಧಂ ಋಭುಕ್ಷು ದಿವೇಶಂ ॥
ವೃತ್ರವುಳೋಮಬಳಾಸುರ ।
ಗೋತ್ರಹರಂ ಪಾಕನಮುಚಿಜಂಭದ್ವಿಷ್ಟಂ ॥ ೯೪ ॥

ಕಂ॥ ಸತಿ ನೆಗಲಿಂದ್ರಾಣಿ ಪುಲೋ ।
ಮತನೂಭವೆ ಶಚಿ ಜಯಂತನಾತಂಗೆ ಸುತಂ ॥
ಕೃತಮತಿ ಪುರೋಹಿತಂ ವಾ ।
ಕ್ಪ [ತಿ ಮಾತ] ಳಿ ಸೂತನಾಯುಧಂ ಶತಧಾರಂ ॥ ೩೫ ॥

ಅಮರಾವತಿ ನಗರಿ ವನಂ ।
ನಮೇರುಮಂದಾರಪಾರಿಜಾತಾದಿಸುರ ॥
ದ್ರುಮಯೋನಿ ನಂದನಂ [ತುರ ।
ಗವು] ದುಚ್ಚೈಶ್ರವಸ ಮದುವೆ ದಿವಿಜತುರಂಗಂ ॥ ೩೬ ॥

ಐರಾವಣ ಮಭ್ರದ್ವಿಪ ।
ಮೈರಾವತ ಮಭ್ರಮೂಪ್ರಿಯಂ ದಿವಿಜಗಜಂ ॥
ಸಾರತರವಿವಿಧಮಣಿ ವಿ ।
ಸ್ತಾರನಿಧಾನಂ ಸುಧರ್ಮ ಮಮರಾಸ್ಥಾನಂ ॥ ೩೭ ॥

ಪವಿ ಶತಧಾರಂ ದಂಭೋ ।
ಳಿ ವಜ್ರ ಮಿಂದ್ರಾಸ್ತ್ರ ಮಶನಿ ಕುಲಿಶಂ ಸ್ವರು ಶಂ ॥
ಬವಿನಿತ್ತು ಮುಂ ತದೇಕಾ ।
ರ್ಥವಾಚಿ ಋಜು ರೋಹಿತಾಹ್ವಯಂ ಸುರಚಾಪಂ ॥ ೩೮ ॥

ಮ॥ ವಸು ವೈಶ್ವಾನರನಾಶುಶುಕ್ಷಣಿ ಹುತಾಶಂ ಕೃಷ್ಣವರ್ತ್ಮಂ ವಿಭಾ ।
ವಸು ಸಪ್ತಾರ್ಚಿ ಕೃಶಾನು ವಗ್ನಿ ದಹನಂ ಹವ್ಯಾಶನಂ ವಹ್ನಿ ವಾ ॥
ಯುಸಖಂ ಜ್ವಾಲಿ ಕೃಪೀಟಯೋನಿ ಯನಲಂ ಸ್ವಾಹಾಪ್ರಿಯಂಜಾತವೇ ।
ದಸ ನಪ್ಪಿತ್ತ ಮುಷರ್ಬುಧಂ ಹುತವಹಂ ಧೂಮಧ್ವಜಂ ಪಾವಕಂ ॥೩೯॥

ಕಂ॥ ಜ್ವಾಲಾಶಿಖಾರ್ಚಿ ಕಿಚ್ಚಿನ ।
ನಾಲಗೆಯು ಮಲಾತ ಮಂತದುಲ್ಮುಕೆ ಮುಕ್ತ ॥
ಜ್ವಾಳಿಗಳವುಳ್ಕೆಮೆನಿಕುಂ ।
ಜ್ವಾಲೆ ಕಣಂ ವಿಸ್ಫುಲಿಂಗ ಮೂಷ್ಮಂ ಬಾಷ್ಪಂ ॥ ೪೦ ॥

ಕಂ॥ ಯಮನರ್ಕಸುತಂ ಧರ್ಮಂ ।
ಯಮುನಾಸಹಜಂ ಪರೇತವಿಭು ದಂಡಧರಂ ॥
ಶಮನಂ ಪಿತೃಪತಿ ಕಾಲಂ ।
ಸಮವರ್ತಿ ಕೃತಾಂತನಂತಕಂ ಕೀನಾಶಂ ॥ ೪೧ ॥

ರಕ್ಷಃ ಕೋಣಪ ನೈಋತ ।
ರಾಕ್ಷಸ ಪುಣ್ಯಜನ ಯಾತುಧಾನ ಕ್ರವ್ಯಾ ॥
ದ ಕ್ಷಣದಾಚರ ರಿಂದು ಸ ।
ದೃಕ್ಪಾರ್ಥಂಗಳ್ ನಿಶಾಟಪರ್ಯ್ಯಯಂಗಳ್ ॥ ೪೨ ॥

ವರುಣಂ ಪಶ್ಚಿಮದಿಕ್ಪತಿ ।
ಶರನಿಧಿಪತಿ ಪಾಶಪಾಣಿ ಯಾದೋನಾಥಂ ॥
ವರುಣಾನೀರಮಣಂ [ವಾ ।
ರಿರಾಶಿ] ನಿಳಯಂ ಪ್ರಚೇತಸಂ ಪೆಸರಿಂದಂ ॥ ೪೩ ॥

ಪವಮಾನಂ ಶ್ವಸನಂ ಗಂ ।
ಧವಹಂ ಸತತಗತಿ ಮಾತರಿಶ್ವಂ ಮರುತಂ ॥
ಪವನಂ ಪ್ರಭಂಜನಂ ವಾ ।
ಯು ವಾತ ಮನಿಲಂ ಸವಿಾರಣಂ ಪೃಷದಶ್ವಂ ॥ ೪೪ ॥

ಭೌತಿಕದೇಹಾಂತರ್ಗತ ।
ವಾತಂ ಪ್ರಾಣಾದಿಪಂಚಸಂಜ್ಞಂ ಝಂಝಾ ॥
ವಾತಂ ಸವೃಷ್ಟಿವಾತಂ ।
ವಾತೂಳಂ ವಾತ್ಯೆ ವಾತಮಂಡಳಿ ಯಕ್ಕುಂ ॥ ೪೫ ॥

ಧನಪತಿ ಯಕ್ಷಂ ಶ್ರೀದಂ ।
ಮನುಷ್ಯಧರ್ಮಂ ಕಪರ್ದಿಸಖ ನೈಳಬಿಳಂ ॥
ಧನದಂ ಕುಬೇರ ನಳಕಾ ।
ಧಿನಾಯಕಂ ಗುಹ್ಯಕೇಶ್ವರಂ ವೈಶ್ರವಣಂ ॥ ೪೬ ॥

ಕಂ॥ ನಳಕೂಬರಂ ತನೂಭವ ।
ನಳಕಾನಗರಂ ಪುರಂ ವನಂ ಚೈತ್ರರಥಂ ॥
ನಿಳಯಂ ಕೈಲಾಸಂ ತ ।
ದ್ವಿಳಾಸಯಾನಕ್ಕೆ ಪುಷ್ಪಕಂ ಪೆಸರಕ್ಕುಂ ॥ ೪೩ ॥

ಶತಮುಖ ಹುತವಹ ಯಮ ನೈ ।
ರುತಿ ವರುಣ ಮರುತ್ತುಬೇರ ಶೂಲಧರರ್ ದಿ ॥
ಕ್ಪತಿಗಳವರೆಣ್ಬರುಂ ಕ್ರಮ ।
ಗತಿಯಿಂ ಪ್ರಾಚ್ಯಾದಿದಿಗಭಿರಕ್ಷಣನಿರತರ್ ॥ ೪೪ ॥

ತ್ರಿಪದಿ:— ಪ್ರಾಚಿಯವಾಚಿ ಪ್ರತೀಚಿಯುದೀಚಿಯೂ ।
ಶಾಚತುಷ್ಕಂ ಪರಿವಿಡಿಯಿಂದ ।
ವಾಚ[ತುಃ]ಪ್ರದಿಶ ವಿದಿಶೆಗಳ್ ॥ ೪೫ ॥

ಮು॥ ಸ್ರ॥ ಹರಿದಾಶಾದಿಕ್ಕಕುಪ್ಸಾಷ್ಟೈಗಳೆನಿ ದೆಸೆಗಳ್ ತದ್ದಿಶಾಚಕ್ರದೊಳ್ ಭೂ ।
ಭರಮುಂ ತಾಳ್ದಿರ್ದುವೆಂಟುಂ ದಿಗಿಭನಿವಹಮೈರಾವಣಂ ಪುಂಡರೀಕಂ ॥
ದ್ವಿರದೇಂದ್ರಂ ಪುಷ್ಪದಂತಂ ಕುಮುದರದನಿ ಸಂದಂಜನಂ ವಾಮನಂ ಭಾ
ಸುರತೇಜಂ ಸಾರ್ವಭೌಮಂ ದ್ವಿಪಪತಿ ಶುಭ[ದಂತಾವಳಂ]ಸುಪ್ರತೀಕಂ ॥ ೪೦ ॥

ಕಂ॥ ಘನಮಾತಂಗಾದಿಗಳಂ ।
ಗನಿಯರ್ ತಾಮಭ್ರಮೂಕಪಿಳೆ ಪಿಂಗಳೆಯುಂ ॥
ಜನೆ ತಾಮ್ರಪರ್ಣಿ ಯೆಂಗನೆ ।
ಯನುಪಮೆ ಪಡೆಗುಂ ಶುಭರದನೆ ಯಿಭದಾಕ್ರಮದಿಂ ॥ ೪೭ ॥

ಮೇನಕೆ ರಂಭೆ ತಿಲೋತ್ತಮೆ ।
ತಾ (ನೂರ್ವಶಿ) ಮುಂಜುಘೋಷೆ ಯೆಂಬಪ್ಸರೆಯರ್ ॥
ನಾನಾಪ್ರಕಾರಚಾರುಕ ।
ಳಾನಿವುಣೆಯರಮರಗಣಿಕೆಯರ್ ಸಲೆ ನಿಗಳ್ದಿರ್ ॥ ೪೮ ॥

ಕಂ॥ ದೇವಚಿಕಿತ್ಸಕರಶ್ವಿನಿ ।
ದೇವರ್ ನಾಸತ್ಯರಶ್ವಿಗಳ್ ದಸ್ರಾಖ್ಯರ್ ॥
ದೇವರ ವರ್ಧಕಿ ವಿಶ್ವಮು ।
ಹೀವಿದಿತಂ ತ್ವಷ್ಟ ವಿಶ್ವಕರ್ಮಂ ಪೆಸರಿಂ ॥ ೫೩ ॥

ಖೇಚರ ಕಿನ್ನರ ಯಕ್ಷ ಪಿ ।
ಶಾಚರ್ ಗಂಧರ್ವರಪ್ಸರಃಪ್ರಕರಂ ದೋ ॥
ಷಾಚರರಿಂದದ್ಭುತಗುಣ ।
ಗೋಚರರವರಿಯ್ದೆ ದೇವಯೋನಿಗಳೆನಿಪರ್ ॥ ೫೪ ॥

ಅಮೃತಂ ಸುಧೆ ಪೀಯೂಷಂ ।
ಸಮಂತದೇಕಾರ್ಥಮುಮರರುಣ್ಬಾಹಾರಂ ॥
ಯಮ ನಿಯತಿ ದಿಷ್ಟ ವಿಧಿನಾ ।
ಮ ಮಯೂನಯರೂಪಮಂತದಕ್ಕುಂ ದೈವಂ ॥ ೫೫ ॥

ಸುರಗಿರಿ ಮೇರುನಗಂ ಮುಂ ।
ದರಾದ್ರಿ ಕನಕಾಚಳಂ ಸುಮೇರುಮಹೀಧ್ರಂ ॥
ಸುರದೀರ್ಘಿಕೆ ಮುಂದಾಕಿನಿ ।
ಸುರನದಿ ವಿಷ್ಣುಪದಿ ಗಂಗೆ ಜಾಹ್ನವಿಯಕ್ಕುಂ ॥ ೫೬ ॥

ಸುರಸರಣಿಃ ವಿಷ್ಣುಪದಮುಂ ।
ಖರಂ ವಿಯತ್ ಖಂ ವಿಹಾಯಸಂ ಗಗನಂ ಪು ॥
ಷ್ಕರಮಾಕಾಶಂ ನಭಮುಂ ।
ತರಿಕ್ಷಮುಂಭೋದಮಾರ್ಗಮಭ್ರಂ ವ್ಯೋಮಂ ॥ ೫೭ ॥

ಸ್ತನಯಿತ್ನು ವಾರಿವಾಹಂ ।
ಘನಾಘನಂ ಘಮಯೋನಿ ಮೇಘಂ ಜಲದಂ ॥
ಘನಮಂಬುಧರಂ ಸೌದಾ ।
ಮಿನಿ ವಿಷಮಭ್ರಂ ಖರಾಹಕಂ ಜೀಮೂತಂ ॥ ೫೮ ॥

ಕಂ॥ ಉದ್ಯತ್ಸೌದಾಮಿನಿಯೊಳ ।
ಭಿದ್ಯೋತಿಸುಗುಂ ಸಮಾನಗತಿಯಿಂ ಚಪಳಾ ॥
ವಿದ್ಯುತ್ಕ್ಷಣಿಕಾ ತಟಿದಚಿ ।
ರದ್ಯುತಿ ಶಂಪಾಶತಹ್ರದಾಹ್ವಾದಿನಿಗಳ್ ॥ ೫೯ ॥

ಘನಸಂತತಿ ಕಾದಂಬಿನಿ ।
ಘನನಿರ್ಮುಕ್ತೋಪಳಂಗಳೆವು ಕರಕಂಗಳ್ ॥
ಘನನಿರ್ಘೋಷಂ ಸ್ತನಿತಂ ।
ಘನಸಂಭೂತಾಗ್ನಿ ತಾನಿರಮ್ಮದಮಕ್ಕುಂ ॥ ೬೦ ॥

ಓರಂತೆ ಮುಚ್ಚಿ ಮುಸುಕಿದ ।
ಧಾರಾಧರಮಾದ ದುರ್ದಿನಂ ಘನತಿಮಿರಂ ॥
ಧಾರಾಸಂಪಾತಮುದಾ ।
ಸಾರಂ ವಾತಾಸ್ತವಾರಿ ಶೀಕರಮಕ್ಕುಂ ॥ ೬೧ ॥

ಕಱಿಸಿವ ಮಱಿಸಿ ವೃಷ್ಟಿ ವರ್ಷಂ ।
ಬಱಿದಿದ್ದುದವಗ್ರಹಂ ಸಿಡಿಲ್ದು ಸಿಡಿಲ್ಬಂ ॥
ದೆಱಿಪುದು ವಿಸೃಜ್ಯಂ ಕಿ ।
ಕ್ಕಿಱಿಗಿಱಿದ ಮುಗಿಲ್ಗಳಿಲ್ಲದಿರವು ನಿರಭ್ರಂ ॥ ೬೨ ॥

ತಿಮಿರಂ ತ್ವಸಂತಮಸಂ ಧ್ವಾಂ ।
ತಮಂಧಕಾರಂ ತಮಂ ತಮಿಸ್ರ ಮುದಕ್ಕುಂ ॥
ಸಮುದಿತಘನಬಹುಳತಮಂ ।
ತಮಿಸ್ರ ಮಂತಂಧತಮಸಮಕ್ಕುಂ ಪೆಸರಿಂ ॥ ೬೩ ॥

ಮಾ॥ಸ್ರ॥ ರವಿ ಮಾರ್ತಂಡಂ ಪತಂಗಂ ತಪಿ ತಪನ ನಿನಂ ಭಾನು ಭೂಷಂ ಸಹಸ್ರಾಂ ।
ಶು ವಿವಸ್ವಂತಂ ಖಗಂ ಭಾಸ್ಕರನಹಿಮಕರಂಸೂರ್ಯನಂಭೋಜಮಿತ್ರಂ॥
ದಿವಸೇಂದ್ರಂ ಖ್ರಧ್ನ ನಂಶು ಗ್ರಹಪತಿ ಹರಿದಶ್ವಂ ತಮೋವೈರಿ ಹಂಸಂ ।
ಸವಿತಾರಂ ಸೂರ ನರ್ಕಂ ದ್ಯುಮಣಿ ತರಣಿ ಸಪ್ತಾಶ್ವ ನಾದಿತ್ಯನಕ್ಕುಂ ॥ ೬೪ ॥

ಕಂ॥ ಕಿರಣಂ ದ್ಯುತಿ ರುಗ್ದೀಧಿತಿ ।
ಮರೀಚಿ ರುಚಿ ರೋಚಿ ಶೋಚಿ ದೀಪ್ತಿ ಮಯೂಖಂ ॥
ಕರ ಮುಸ್ರ ಮಂಶು ಭಾ ಭಾ ।
ನು ರಶ್ಮಿ ಘೃಣಿ ವಸು ಗಭಸ್ತಿ ಪಾದಂ ತೇಜಂ ॥ ೬೫ ॥

ಖರತಿಗ್ಮತೀಕ್ಷ್ಣ ಚಂಡೋ ।
ಷ್ಣರೌದ್ರ ಘರ್ಮಾಂಶು ವೆನೆಯು ಮುಷ್ಣಗಹಿಮಕರಂ ॥
ಪರಿಧಿ ಯುಪಸೂರ್ಯಕಂ ತ ।
ತ್ಪರಿವೇಷಂ ತತ್ಪ್ರಕಾಶ ಮಾತಪಮಕ್ಕುಂ ॥ ೬೬ ॥

ವಿಧು ಚಂದ್ರಂ ರಜನಿಕರಂ ।
ಸುಧಾಂಶು ಮೃಗಲಕ್ಷ್ಮ ನಿಂದು ಹಿಮರಶ್ಮಿ ಕಳಾ ॥
ನಿಧಿ ಸೋಮ ನಮೃತಮಯ ನೋ ।
ಷಧೀಶ್ವರಂ ಕುಮುದಬಂಧು ತಾರಾಧೀಶಂ ॥ ೬೭ ॥

ಮಹಿತಾವಶ್ಯಾಯ ತುಷಾ ।
ರ ಹಿಮ ಪಾರ್ವಾಲೇಯ ತುಹಿನ ನೀಹಾರಕರಂ ॥
ಮಹಿತಾತ್ರಿನೇತ್ರಜಂ ಧ್ವಾಂ ।
ತಹರಂ ದ್ವಿಜರಾಜ ನರ್ಣವಪ್ರಿಯತನಯಂ ॥ ೬೮ ॥

ಅಂಕಂ ಲಕ್ಷಣ ಮದುವೆ ಕ ।
ಳಂಕಾಭಿಜ್ಞಾನ ಚಿಹ್ನ ಲಾಂಛನ ಲಕ್ಷ್ಮಾ ॥
ಖ್ಯಂ ಕುಶಿಪದೆನಿಸುಗುಂ ಹರಿ ।
ಣಾಂಕಾದಿಪದಪ್ರಯೋಗದಿಂ ಶಶಿನಾಮಂ ॥ ೬೯ ॥

ಬಿಂಬಂ ವಳಯಂ ಮಂಡಳ ।
ಮೆಂಬಿವಭಿನ್ನಾರ್ಧಮರ್ಧದಳಖಂಡಾಖ್ಯಂ ॥
ತಾಂ ಬಗೆಯೆ ಶಕಲಮದು ಶಶಿ ।
ಬಿಂಬಾರ್ಧಕ್ಕರ್ಧಚಂದ್ರ ನೆನೆ ಪೆಸರ್ವಡೆಗುಂ ॥ ೭೦ ॥

ಕಂ॥ ಉಪರಾಗಂ ಗ್ರಹಣಂ ಗ್ರಹ ।
ಮುಪಪ್ಲವಂ ರಾಹುಪೀಡೆ ಯಕ್ಕುಂ ಜ್ಯೋತ್ಸ್ನಾ ॥
ಭ್ಯುಪದೇಶಂಗಳ್ ಚಂದ್ರಾ ।
ತಪಮುಂ ಚಂದ್ರಿಕೆಯುಮೆನೆವ ತತ್ಕೌಮುದಿಯುಂ ॥ ೭೦ ॥

ಕ್ಷಿತಿತನಯಂ ವಕ್ರಂ ಲೋ ।
ಹಿತಾಂಗ ನಂಗಾರಕಂ ಕುಜಂ ಭೌಮಂ ಸೋ ॥
ಮುತನೂಭವಂ ಬುಧಂ ಜ್ಞಂ ।
ಪ್ರತೀತಿ ಮಿಗೆ ನೆಗಟ್ಟಿ ರೌಹಿಣೇಯಂ ಸೌಮ್ಯಂ ॥ ೭೧ ॥

ಅಂಗಿರಸ ಸುರೇಜ್ಯಂ ಧಿಷ ।
ಣಂ ಗೀಃಪತಿ ದಿವಿಜಮಂತ್ರಿ ವಾಚಸ್ಪತಿ ಮು ॥
ತ್ತಾಂಗಿರಸಂ ವಾಕ್ಪತಿ ಜೀ ।
ವಂ ಗುರು ವೆಂಬಿನಿತು ಮಿವು ಬೃಹಸ್ಪತಿನಾಮಂ ॥ ೭೨ ॥

ದನುಜರ ಗುರು ಕವಿ ಸಿತ ಭೃಗು ।
ತನೂಭವಂ ಕಾವ್ಯ ನುಶನಸಂ ಭೈಗು ಶುಕ್ರಂ ॥
ಶನಿ ಮಂದ ನರ್ಕಿ ನೀಲಂ ।
ಶನೈಶ್ಚರಂ ಶೌರಿ ಪಂಗು [ಕಾಳಂ] ಕ್ರೋಡಂ ॥ ೭೩ ॥

ಭಾನುರಿವು ಸಿಂಹಿಕಾಪ್ರಿಯ ।
ಸೂನು ತಮಂ ರಾಹು ಗಗನಚರಭುಜಗಂ ಸ್ವ ॥
ರ್ಭಾನು ವಿಧುಂತುದ ನಂತದು ।
ತಾನಕ್ಕುಂ ಕೇತು ನಾಮದಿಂ ಶಿಖಿ ಯೆನಿಕುಂ ॥ ೭೪ ॥

ಚಿತ್ರಶಿಖಂಡಿಗಳೆನಿಸಿದ ।
ರಾತ್ರಿದಶಮುನೀಶರೇಟ್ವಿರುಂ ವಿನಮಿತಲೋ ॥
ಕತ್ರಿತಯರ್ ಪುಲಹಮರೀ ।
ಚ್ಯತ್ರಿವಸಿಷ್ಠಾಂಗಿರಃಪುಲಸ್ತ್ಯಕ್ರತುಗಳ್ ॥ ೭೫ ॥

ಕಂ॥ ನಿರುಪಮಚರಿತ್ರದಿಂ ಮಿ ।
ಕ್ಕರುಂಧತಿ ವಸಿಷ್ಠನಂಗನೆ [ತಾಂ] ಮೈತ್ರಾ ॥
ವರುಣಿ ಯಗಸ್ತ್ಯನ ಸಾಧ್ವಿ [ಯೆ ।
ವರ] ಲೋಪಾಮುದ್ರೆ ತನ್ಮನೀಶ್ವರವಧುಗಳ್ ॥ ೭೭ ॥

ರಿಕ್ಷ ಮುಡು ತಾರೆ ತಾರಗೆ ।
ನಕ್ಷತ್ರಂ ಜ್ಯೋತಿ ತಾರಕಂ ಭಂ [ಭಿಷ್ಯಾಂ] ॥
ದಾಕ್ಷಾಯಣಿಗಳವೆಂದುಪ ।
ಲಕ್ಷಿಸುಗಂತವಱಿಂಗಳಶ್ವಿನೀಪ್ರಭೃತಿಗಳಂ ॥ ೭೮ ॥

ಸಂದಿರ್ದಶ್ವಿನ ಮುಶ್ವಯು ।
ಗೆಂದಕ್ಕುಂ ಬೇಱಿ ದೊಂದುಗುಣನಾಮಂ ಮು ॥
ತ್ತೊಂದಿರೆ ನಿಗಱಿಸ್ಗಂ ಕೃತ್ತಿಗೆ ।
ಯೊಂದಱಿಂಗಳೆಂದೊಱಿಸಿಗೆ ಬಂದ ಬಹುಳಾಖ್ಯಾನಂ ॥ ೭೯ ॥

ಮೃಗಶೀರ್ಷ ಮುಗ್ರಹಾಯಣಿ ।
ಮೃಗಶಿರದ ಪೆಸರ್ ತದಗ್ರ್ಯದೇಶಸ್ಥಿತ ತಾ ॥
ರೆಗಳಿಲ್ವಲಂಗಳೆನಿಕುಂ ।
ನಿಗಱಿಪ್ಪಾರ್ದ್ರೆಗೆ ಲುಬ್ಧಕಾಹ್ವಯಂ ವರ್ತಿಸುಗುಂ ॥ ೮೦ ॥

ಎರಡುಂ ಭಾದ್ರಪದೃಕ್ಷಾಂ ।
ತರಂಗಳುಂ ಪ್ರೋಷ್ಠಪದೆ ಯೆನಿಕ್ಕುಂ ಸಂಜ್ಞಾಂ ॥
ತರಮಱಿಗೆ ತ[ದ್ಧ ನಿಷ್ಕೈಗೆ] ।
ಪರಂ ಶ್ರವಿಷ್ಠಾಖ್ಯೆ ತಿಷ್ಯಮಕ್ಕುಂ ಪುಷ್ಯಂ ॥ ೮೧ ॥

ಇಂತು

ಸ್ವರ್ಗವರ್ಗಂ

ಶ್ರೀ ವೀತರಾಗಾಯನಮಃ.

—ನಮಸ್ಸಿದ್ಧೇಭ್ಯಃ—

ಕಂ॥ ಸಮಯವುನೇಹಂ ಕಾಲಂ ।
ನಿಮೇಷಕಾಷ್ಠಾದಿ ತದ್ವಿಶೇಷಮುದೆನಿಕುಂ ॥
ಸಮರಾತ್ರಿಂದಿವವೂಗಿರೆ ।
ಸಮನಿಸುಗುಂ [ವಿಷುವ] ವಿಷುವದಾಖ್ಯೆಗಳೆ [ರಡುಂ] ॥ ೧ ॥

ಹದಿನೆಂಟು ನಿಮೇಷದಿ ನಂ ।
ತದೊಂದು ತಾಂ ಕಾಷ್ಠೆ ಕಾಷ್ಠೆ ಮೂವತ್ತಾಱಿಂ ॥
ದದು ಕಳೆ ಕಳೆಗಳ್ ಮೂವ ।
ತ್ತ್ರದು ಕ್ಷಣಂ ಕ್ಷಣವುದಾಱಿ ಘಱಿಗೆ ಯೆನಿಕ್ಕುಂ ॥ ೨ ॥

ಅವಱಿರಡೆರಡಂ ಕೊಂಡೊಡೆ ।
ಬವಱಿಸುವ ಮುಹೂರ್ತವುಂತದೊಂದಕ್ಕುಂ ವು ॥
ತ್ತ್ರವು ಮೂವತ್ತ್ರಱಿನೊಂದೊಂ ।
ದೆ ವಲಂ ವರ್ತಿಸುಗುವುಂತಹೋರಾತ್ರಂಗಳ್ ॥ ೩ ॥

ದಿವಸಂ ದಿನಂ ದಿವಾಹಂ ।
ದ್ಯು ವಾಸರಂ ಘಸ್ರಮೆನೆ ಪಗಲ್ ಪ್ರತ್ಯೂಷಂ ॥
ದಿವಸಮುಖಂ ಪ್ರಾತಃ ಕಾ ।
ಲ್ಯವುಷಃಸಮಯಂ ಪ್ರಭಾತವುದು ಗೋಸರ್ಗಂ ॥ ೪ ॥

ತಮಿ ವಾ[ಸತೇಯಿ] ಶರ್ವರಿ ।
ತಮಿಸ್ರೆ ನಿಶೆ ರಜನಿ ದೋಷೆ ರಾತ್ರಿ ಕ್ಷಣದಾ ॥
ಸಮಭಿಖ್ಯೆ ವಿಭಾವರಿ ನ ।
ಕ್ತ ಮುಷೆ ಯಿರುಳ್ ತಾಂ ತ್ರಿಯಾಮ್ಯೆ ಯಾಮಿನಿಯಕ್ಕುಂ ॥ ೫ ॥

ಕಂ॥ ರಾತ್ರಿಯ ಮುಖಂ ಪ್ರದೋಷಂ ।
ರಾತ್ರಿಯೊಳಂ ಮಧ್ಯರಾತ್ರಿ ಯೆಱಗೆ ನಿಶೀಥಂ ॥
ರಾತ್ರಿವಿರಾಮಂ ವ್ಯುಷ್ಟಂ ।
ರಾತ್ರಿಗಳವು ಪಲವುಮಾಗೆ ಗಣರಾತ್ರಂಗಳ್ ॥ ೬ ॥

ಪ್ರತಿಪತ್ಪಕ್ಷತಿ ನಾಮ ।
ದ್ವಿತಯಂ ಪಾಡಿವಮುದಾದಿಯೆನೆ ತಿಥಿ ಪಕ್ಷ ॥
ಸ್ಥಿತಿಯೊಳ್ ಪದಿನೆಯ್ದಕ್ಕುಂ ।
ಪತಿಪತ್ಪಕ್ಷಾಂತಸಂಧಿ ಪರ್ವಮೆನಿಕ್ಕುಂ ॥ ೭ ॥

ಸ್ಪಷ್ಟಂ ಸೂರ್ಯೇಂದುಸಮಾ ।
ಶ್ಲಿಷ್ಟ ವಮಾವಾಸೆ ಯೆಂಬುದಕ್ಕುಂ ದರ್ಶಂ ॥
ದೃಷ್ಟೇಂದು ಸಿನೀವಾಲಿ ವಿ ।
ನಷ್ಟೇಂದು ಕುಹೂಸಮಾಖ್ಯಮುದು ತಾನಕ್ಕುಂ ॥ ೮ ॥

ಅನುಮತಿ ಯೆನಿಕುಂ ಪೂರ್ಣಿಮೆ ।
ಯಿನಿಸಾನುಂ ಕುಂದಿ ತೋಱುತಿರೆ ಚಂದ್ರಂ ನೆ ॥
ಟ್ಟನೆ ನಿಱಿಸಿದು ಬಿಂಬದಿಂ ಪೂ ।
ರ್ಣನಾಗೆ ರಾಕಾಖ್ಯೆ ಪೌರ್ಣಮಾಸಿ ಯುದಕ್ಕುಂ ॥ ೯ ॥

ಮೂವತ್ತು ದಿವಾರಾತ್ರಂ ।
ತೀವಿದೊಡದು ಮಾಸ ವೆರಡುಮಾಸಂ ಋತುವಂ ॥
ತಾವವು ಮುತ್ತಾಱಿಗೆ ಕ ।
ೞಾವೇದಿಗಳೆಂತದೊಂದು ವತ್ಸರಮೆಂಬರ್ ॥ ೧೦ ॥

ಸಮತೀತಾಬ್ದಂ ಪರುದಾ ।
ಖ್ಯಮದಕ್ಕುಂ ತಾಂ ಪರಾರಿ ತತ್ಪೂರ್ವಗತಂ ॥
ಸಮನಿಸೆ ಸಾಂಪ್ರತಿಗಂ ವ ।
ರ್ತಮಾನ ಮಪ್ಪಬ್ದ ಮೈಷಮಂ ಪೆಸರಿಂದಂ ॥ ೧೧ ॥

ಅಕ್ಕರ ವೃತ್ತ ॥
ಕ್ರಮದೊಳೊಂದಿರೆ ಮಧು ಮಾಧವಂ ಶುಕ್ರಂ ಶುಚಿ ನಭೋವಾಸಂ ನಭಸ್ಯಾಖ್ಯಮು।
ತ್ತಮಿಷ ಮೂರ್ಜಂ ಸಹಃಸಹಸ್ಯಂಗಳ್ ತಪಮುಂ ತಪಸ್ಯ ಮೆಂದಿಂತು ॥
ಸಮನಿಕ್ಕುಂ ಚೈತ್ರಾದಿನಾಮಂಗಳ್ ವಸಂತಂ ಗ್ರೀಷ್ಮಂ ಪ್ರಾವೃಟ್ಕರ ।
ತ್ಸಮಯಂ ಹೇಮಂತಂ ಶಿಶಿರ ಮೆಂಬಂತವು ತಾವಕ್ಕುಂ ಋತುಗಳ್ ಮತ್ತಾ ಋುಂ
॥ ೧೦ ॥

ಕಂ॥ ಸುರಭಿ ವಸಂತಕ್ಕಾಖ್ಯಾಂ ।
ತರಂ ನಿದಾಘುಂ ತಪಾಹ್ವಯುಂ ಗ್ರೀಷ್ಮಂ ವಾ ॥
ರ್ಷರಸಮಯಂ ವರ್ಷಾ ಋತು ।
ವೆರಡುಂ ಪ್ರಾವೃಡ್ವಿಶೇಷಸಂಜ್ಞೆಗಳಕ್ಕುಂ ॥ ೧೩ ॥

ಶರದಬ್ದ ಸಮುಂ ಸಂವ ।
ತ್ಸರ ಹಾಯನ ವತ್ಸರಂಗಳೆವು ವರ್ಷಂಗಳ್ ॥
ನರರೊಂದು ತಿಂಗಳದು ಪಿತ ।
ರರ ದಿವಸಂ ಬರಿಸ ವೊಂದು ದ್ರೋವೀಯದಿನಂ ॥ ೧೪ ॥

ಒಂದಕ್ಕುಂ ಬ್ರಹ್ಮಾಹಂ ।
ಸಂಧಿ [ಸಿ] ನಿಲೆ ದಿವ್ಯಯುಗಸಹಸ್ರದ್ವಯಮೋ ॥
ರೊಂದೆ ವಲಂ ಮನ್ವಂತರ ।
ಮೆಂದಱಿವುದು ನಿಯತಮೇಕಸಪ್ತತಿಯುಗದಿಂ ॥ ೧೫ ॥

ಪರಿವರ್ತಿಸೆ ದಶಗುಣದಿಂ ।
ಬರಿಸಂಗಳ್ ನಾಲ್ಕುಲಕ್ಕೆಯುಂ ದ್ವಾತ್ರಿಂಶ ॥
ತ್ಪರಿಮಿತ ಸಹಸ್ರಯುಗದಿಂ ।
ಪರಿಕಲ್ಪನಮಕ್ಕುಮಾಗತಿ ವಜ್ಞಾವಳಿಂದಂ? ॥ ೧೬ ॥

ಲಯಸಮಯಂ ಸಮಸಂಸು ।
ಪ್ತ ಯುಗಾಂತಂ ವಿಳಯ ಮಂತಕಾಲಂ ಕಲ್ಪಂ ॥
ಕ್ಷಯ ಮುಪಸಂಹೃತಿ (ಸರ್ಗಾ ।
ತ್ಯಯಂ) ಮಹಾಪ್ರಳಯ ಮೆಂಬುದದು ಸಂವರ್ತಂ ॥ ೧೭ ॥

ಕಂ॥ ಉತ್ತರ ಕಾಲಮುದಾಯತಿ ।
ಮತ್ತೆ ತದಾತ್ವಂ ತದಾತನಂ ತತ್ಕಾಲಂ ॥
ವೃತ್ತಂ ಭೂತಂ ಕ್ರಿಯೆಗುಪ ।
ಪತ್ತಿಯೊಳೊಡನಲ್ವುದೇಕಕಾಲಂ ಯುಗಪತ್ ॥ ೧೪ ॥

ಇಂತು
ಕಾಲವರ್ಗಂ

ಶ್ರೀ ವೀತರಾಗಾಯನಮಃ.

೧ ಅವಿಭಿನ್ನಾರ್ಥ ಕಾಂಡಂ. ೩ ಸಂಸರಣ ವರ್ಗಂ.

ಕಂ॥ ಭುವನಂ ಲೋಕಂ ವಿಷ್ಟಪ ।
ಮಿವು ಜಗದೊಳಭಿನ್ನವೃತ್ತಿಯಿಂದಂ ನೆಗಟ್ಟಿಂ ॥
ಭವ ಸಂಸೃತಿ ಸಂಸರಣಂ ।
ಜವಂಜವಂ ಜನ್ಮ ವೆಂಬುದದು ಸಂಸಾರಂ ॥ ೧ ॥

ಸ್ಥಾವರಮೆನೆ ಪಡೆಗುಂ ಪೃ ।
ಥ್ವೀವಿಟಪಿಶಿಲೋಚ್ಚಯಾದಿಕಂ ತ್ರಸಮುಕ್ಕುಂ ॥
ಜೀವನಿಕಾಯಂ ಜಂಗಮು ।
ಮಾವಿರ್ಭೂತಪ್ರಧಾನಚೈತನ್ಯಗುಣಂ ॥ ೨ ॥

ಜನನಂ ಜನ್ಮಂ ಪ್ರಸವಂ ।
ಜನಿ ಜನು ರುತ್ಪತ್ತಿ ಸೂತಿ ಯೇಕಾರ್ಥ ಮಿವಿಂ ॥
ತಿನಿತುಂ ಕ್ಷೇತ್ರಜ್ಞಂ ಚೇ ।
ತನ ನಾತ್ಮಂ ಪ್ರಾಣಿ ಜಂತು ದೇಹಿ ಯೆನಿಕ್ಕುಂ ॥ ೩ ॥

ದಿವಿಜರುಪಪಾದುಕರ್ ಮಾ ।
ನವಪಶುನಿವಹಂ ಜರಾಯುಜಂ ಫಣಿವಿಹಗಾ ॥
ದ್ಯವವೆಳ್ಳಮುಂಡಜಂ ಶೇ ।
ಷವಪ್ಪುವಿಂತಂತವುದ್ಭಿದಂಗಳೆನಿಕ್ಕುಂ ॥ ೪ ॥

ಕಂ॥ ಪಾತಾಳಂ ದನುಜೇಂದ್ರನಿ।
ಕೇತ ಮಧೋಭುವನ ಮುರಗಲೋಕಂ ರಸೆ ವಿ॥
ಖ್ಯಾತೆ ಬಡವಾಮುಖಂ ಸುತ।
ಳಾತಳವಿತಳಾದಿಸಪ್ತತಳಸಂಖಂಧಂ ॥ ೪॥

ಅವಟಂ ಛಿದ್ರಂ ಕುಹರಂ।
ವಿವರಂ ಶ್ವಭ್ರಂ ಬಿಲಂ ದರಂ ರಂಧ್ರಂ ಗ॥
ರ್ತ ವವೇಕಾರ್ಥಂಗಳ್ ನಾ।
ಕು ವಾವುಲೂರಾಹ್ವ ವಹಿಗೃಹಂ ವಲ್ಮೀಕಂ ॥ ೬॥

ಮ॥ ಉರಗಂ ಭೋಗಿ ಸರೀಸೃಪಂ ಫಣಿ ಭುಜಂಗಂ ಚಕ್ರಿ ದರ್ವೀಕರಂ।
ಹರಿಯುಂ ಕುಂಡಲಿ ಕಾವ್ರವೇಯ ನಹಿ ನಾಗಂ ವ್ಯಾಳ ನಾಶೀವಿಷಂ॥
ವುರುಪೃಷ್ಠಂ ಫಣಭೃತ್ಪೃದಾಕು ಭುಜಗಂ ಕುಂಭೀನಸಂ ಪನ್ನಗಂ।
ಮರುದಾಶಂ ಶನಿ ಗೂಢಪಾದ್ವಿಷಧರಂ ಸರ್ಪಂ ದ್ವಿಜಿಹ್ವಾಹ್ವಯಂ॥
॥ ೭॥

ಕಂ॥ ಉರಗವಿಷವಿಷವುದಂಷ್ಟ್ರಂ।
ಕುರ ವೂಶಿ ಯುರಗದ ಕಾಯ ವಂತದು ಭೋಗಂ॥
ಗರಲಂ ನಂಜು ವಿಷಂ ಗರ।
ವೆರೆ ನಿರ್ಮೋಕಂ ಫಣಾಹ್ವಯಂ ಪಿಡೆಯಕ್ಕುಂ ॥ ೮॥

ಗೋನಾಸ ನಜಗರಂ ಶಯು।
ತಾನಂತದು ಡುಂಡುಭಂ ಜಲವ್ಯಾಳಾಖ್ಯಂ॥
ನಾನಾವಿಕಲ್ಪವಿಷವಿ।
ದ್ಯಾನಿಪುಣಂ ಜಾಂಗುಲಿಕ ನೆನಿಕ್ಕುಂ ಭಿಷಜಂ ॥ ೯॥

ದಾರದ ರಸ ಪ್ರದೀಪನ।
ಸೌರಾಷ್ಟ್ರಿಕ ಶೌಕ್ಲಿಕೇಯ ತೀಕ್ಷ್ಣಮೆನಲ್ ಸಾ॥
ಧಾರಣದಿಂ ನೆಗಟ್ಟುಗುಮತಿ।
ಕ್ರೂರಸ್ಥಾವರವಿಷಪ್ರಭೇದಮನಿತ್ತುಂ ॥ ೧೦॥

ಕಂ॥ ನಿರಯಂ ಶ್ವಭ್ರಂ ದುರ್ಗತಿ ।
ನರಕಂ ತಜ್ಜನ್ಮ ನಾರಕಂ ಯಾತ್ಯ ನವಂ ॥
ದುರಿತವಿಪಾಕಂ ಯಾತನೆ ।
ಗುರುವೇದನೆ ದುಃಖ ಮೂರ್ತಿ ಪೀಡೆ ಯಸಾತಂ ॥ ೧೧ ॥

ದುರಿತಂ ಪಾಪ ಮಧರ್ಮ ।
ಸ್ವರೂಪಮಘ ಮಂಹಮೇನಸಂ ವೃಜಿನಂ ದು ॥
ಶ್ಚರಿತಂ ಕಿಲ್ಬಿಷ ಮಯಶ ।
ಸ್ಕರ ವಶುಭಂ ನಾರಕಂ ಮಳಂ ದುಷ್ಕರ್ಮಂ ॥ ೧೨ ॥

ಭವಿತವ್ಯತೆ ಭಾಗ್ಯಂ ವು ।
ಣ್ಯ ವಯಂ ಶ್ರೇಯಂ ವೃಷಂ ಸುಕರ್ಮಂ ಧರ್ಮಂ ॥
ವಿವಿಧವ್ರತೋಪವಾಸಾ ।
ದಿವಿಕಲ್ಪಂ ತತ್ಫಲಂ ಸುಖಂ ಶಂ ಶರ್ಮಂ ॥ ೧೩ ॥

ಉಪಚಾರಂ ಸೇವನೆ ಪ ।
ರ್ಯುಪಾಸ್ಯೆ ವರಿವಸ್ಯೆ ಭಕ್ತಿ ಶುಶ್ರೂಷಾರ್ಥಂ ॥
ಉಪಹಾರಂ ಬಲಿಕರ್ಮಂ ।
ಸಪರ್ಯೆ ಪೂಜಾಭಿಧಾನ ಮರ್ಚನೆ ಯಕ್ಕುಂ ॥ ೧೪ ॥

ಪ್ರತಿರೂಪಂ ಪ್ರತಿಬಿಂಬಂ ।
ಪ್ರತಿಮಾ ಪ್ರತಿಯಾತನಾಪ್ರತಿಚ್ಛಂದಂಗಳ್ ॥
ಪ್ರತಿಮಾನಂ ಪ್ರತಿಕಾಯಂ ।
ಪ್ರತಿನಿಧಿ ಯೆಂದಿವೆ ನರೂಪವಾಚಿಗಳೆನಿಕುಂ ॥ ೧೫ ॥

ದೈವಪ್ರತಿಕೃತಿಗಳ್ಗೆ ।
ರ್ಚಾವಚನಾಭಿಖ್ಯೆ ಸೂರ್ಮಿಯೆನೆ ನೆಗಟ್ಟಿಂ ನಾ ॥
ನಾವಿಧಲೋಹಮಯಪ್ರತಿ ।
ಮಾವಳಿಗಳ್ ಹರಿಣಿ ಹೇಮಮಯಿ ತಾನಕ್ಕುಂ ॥ ೧೬ ॥

ಕಂ॥ ಊಹಂ ತರ್ಕಂ ಜರ್ಜೆವಿ ।
ವೋಹ ಮವಿದ್ಯಾಪ್ರಭಾವ ಮಪರತಜಂತು ॥
ದ್ರೋಹಂ ಧರ್ಮಂ ಸಂಯಮು ।
ವಾಹಿತಸರ್ವೇಂದ್ರಿಯಪ್ರವೃತ್ತಿನಿರೋಧಂ ॥ ೧೩ ॥

ಜ್ಞಾನಂ ವೋಕ್ಷಾಧಿಗಮ ಮು ।
ನೂನಕಳಾಶಿಲ್ಪಶಾಸ್ತ್ರಕೌಶಳ ಮದು ವಿ ॥
ಜ್ಞಾನಂ ಸವೂಧಿ ಸಂಪ್ರಣಿ ।
ಧಾನಂ ತತ್ತ್ವಾದಿಚಿಂತನಂ ತಾಂ ಧ್ಯಾನಂ ॥ ೧೪ ॥

ಅಪವರ್ಗಂ ನಿಶ್ರೇಯಸ ।
ಮವುನರ್ಭವ ಮವ್ಯಯ ಮಕ್ಷರಂ ವೋಕ್ಷಂ ವು ॥
ಕ್ತಿಪದಂ ಬ್ರಹ್ಮಂ ಕೈವ ।
ಲ್ಯಪದವಿ ಶಿವಗತಿ ನಿರಾಮಯಂ ನಿರ್ವಾಣಂ ॥ ೧೫ ॥

ತ್ರಿಪದಿ ॥ ಧ್ರುವಂ ಸನಾತನಂ ನಿತ್ಯ ಮವಿನಶ್ವ ।
ರ ವಪ್ರತಿಚ್ಯವ ಶಾಶ್ವತ ಸ್ಥಾ ॥
ನ ವೆಮಗಕ್ಕೆ ನಿರಾಕುಳಂ ॥ ೧೦ ॥

ಇಂತು

—ಸಂಸರಣವರ್ಗಂ—

ಶ್ರೀ ವೀತರಾಗಾಯನಮಃ.

ಮು॥ ಸಲಿಲಂ ಜೀವನಮಂಬು ತೋಯ ಮುದಕಂ ಪಾಥಂ ಕುಶಂ ವಾರಿ ಕೋ।
ಮಳೆ ಮರ್ಣಂ ಭುವನಂ ದಕಂ ಘನರಸಂ ನೀರಂ ಶರಂ ಪುಷ್ಕರಂ ॥
ಜಲ ವಾಪಂ ವಿಷ ಮಂಭಸಂ ಕ ಮಮೃತಂ ಪಾನೀಯ ಮೆಂದಿಂತನಾ ।
ಕುಳದಿಂದಂ ತಱಿಸಲ್ಗೆ ನೀರ್ಗೆ ಪೆಸರಂ ಪರ್ಯಾಯದಿಂ ವಾಗ್ವಿದರ್ ॥ ೧॥

ಕಂ॥ ಸರಿದಧಿನಾಥಂ ರತ್ನಾ ।
ಕರ ಮಬ್ಧಿ ಸಮುದ್ರ ಮರ್ಣವ ಜಲನಿಧಿ ಸಾ ॥
ಗರ ಮಂಬುರಾಶಿ ಪನ್ನಗ ।
ಶರಣ ಮಕೂಪಾರ ಮುದಧಿ ಪಾರಾವಾರಂ ॥ ೨॥

ಭಂಗಂ ಲಹರಿಕೆ ವೀಚಿ ತ ।
ರಂಗಂ ಲಳಿ ಯೆಂಬಿವೊರ್ಮಿ ಪರ್ಯಾಯಂಗಳ್ ॥
ತುಂಗತರಂಗಂ ಕಲ್ಲೋ ।
ಲಂಗಳವುತ್ಕಲಿಕೆ ಯೆಂಬಿವಕ್ಕುಂ ಕಡೆಲೊಳ್ ॥ ೩॥

ವನರಾಶಿಯೊತ್ತು ವೇಳೆಯು ।
ದನಿಕುಂ ವೇಳಾವನಂ ತದುಪಕಂಠವನಂ ॥
ಘನತರಫೇನಂ ಡಿಂಡೀ ।
ರನಾಮ ಮಂಭಶ್ಚರೋಗ್ರಸತ್ವಂ ಯಾದಂ ॥ ೪॥

ಮೀನಂ ಶಫರಂ ತಿಮಿ ಪಾ ।
ಶೀನಂ ಝಷ ಮನಿಮಿಷಂ ವಿಶಾರಂ ಮತ್ಸ್ಯಂ ॥
ಮೀನವೆಸರ್ ತದ್ಭೇದಮು ।
ನೂನತಿಮಿತಿಮಿಂಗಿಳಾದಿಪೃಥುರೋಮಂಗಳ್ ॥ ೫॥

ಕಂ॥ ಎಳವಿಞಾಂಗಳ್ ಶಕುಲಂಗಳ್ ।
ನಳವಿಞಾನಂ ಬಿಲಿಚಿವಞಾಭಿಧಾನಮುದಕ್ಕುಂ ॥
ಚಳುಕಿಯೆನೆ ಶಿಂಶುವಾರಂ ।
ಕುಳೀರ ಮದು ಕರ್ಕಿ ತರ್ಕಿಸಲ್ ಕರ್ಕಟಕಂ ॥ ೬ ॥

ಅವಹಾರಂ ಗ್ರಾಹಂ ನ ।
ಕ್ರವಾಚಿ ಕುಂಭೀರಮುಗ್ರತಿಮಿಮುಕರಂ ಕೂ ॥
ರ್ಮವದಱಿಗೆ ಕಚ್ಛಪಂ ಕವು ।
ಠ ವೆಂಬುದಕ್ಕುಂ ತದೀಯವಧು ಧುಲಿ ಯೆನಿಕುಂ ॥ ೭ ॥

ಭೀಕಂ ಶಾಲೂರಂ ಮುಂ ।
ಡೂಕಂ ವರ್ಷಾಭು ದರ್ದುರಂ ತದ್ವಧು ಮುಂ ॥
ಡೂಕಿ ಜಳೂಕಿಕೆ ಜಿಗುಳೆ ಜ ।
ಳೂಕಂ ಗಂಡೂಪದಾಖ್ಯಮುದು ಕಿಂಚುಳಿಕಂ ॥ ೮ ॥

ಶಾಲಿನಿ॥ ಮುಕ್ತಾಸ್ಫೋಟಂ ಶುಕ್ತಿ ಶಂಬೂಕಮುಂಭ ।
ಶ್ಯುಕ್ತಿಪ್ರಖ್ಯಂ ವಿದ್ರುಮಂ ತಾಂ ಪ್ರವಾಳಂ ॥
ಮುಕ್ತಾನಾಮಂ ಮೌಕ್ತಿಕಂ ಕಂಬು ಶಂಖಂ ।
ವ್ಯಕ್ತಂ ಪ್ರೋಕ್ತಂ ಕ್ಷುಲ್ಲಕಂ ಕ್ಷುದ್ರಶಂಖಂ ॥ ೯ ॥

ಕಂ॥ ನೌ ತರಣಿ ಯಾನಪಾತ್ರಂ ।
ಪೋತಂ ಪ್ರವಹಣ ಮೆನಿಪ್ಪುದಱಿಗೆ ವಹಿತ್ರಂ ॥
ಪೋತವಣಿಕ್ ಸಾಂಯಾತ್ರಿಕ ।
ನಾತಂ ತತ್ಪೋತವಾಹಿ ನಾವಿಕ ನಕ್ಕುಂ ॥ ೧೦ ॥

ಹ್ರದಿನಿ ತರಂಗಿಣಿ ನಿಮ್ನಗೆ ।
ನದಿ ಸರಿದಾಪಗೆ ಸಮುದ್ರಸತಿ ಧುನಿ ತೋಲಿಪಿ ಪೊ ॥
ರ್ದಿದ ಕಾಲ್ ತಾಂ ಕುಲ್ಯಾಹ್ವಂ ।
ಹ್ರದ ಮೆಂಬುದಗಾಧತರಜಲಾಶಯಮಕ್ಕುಂ ॥ ೧೧ ॥

ಕಂ॥ ಅವಿರತ ಮುಕ್ಕುವ ತೊಱಿ ಯೊ ।
ಟ್ಟು ವೇಗ ವೋಘಂ ರಯಂ ಪ್ರವಾಹಂ ನ್ಪೋತಂ ॥
ಸ್ರವಣಮುಪಾಖ್ಯಂ ಕಾಷ್ಠಂ ।
ಋವಾಹಿ ತಾಂ ದ್ರೋಣಿ ಸಂಗಮಂ ಸಂಭೇದಂ ॥ ೧೦ ॥

ಪೂರಂ ಪ್ರವೃದ್ಧಸಲಿಲಂ ।
ತೀರಂ ರೋಧಂ ತಟಂ ಪ್ರಪಾತಂ ಕೂಲಂ ॥
ಪಾರಂ ಪರತಟ ಮುರ್ವಾ ।
ಕ್ಷೀರ ಮುವಾರಾಖ್ಯ ಮುಂತರೀಪಂ ದ್ವೀಪಂ ॥ ೧೩ ॥

ಸಲಿಲಭ್ರಮ ಮಾವರ್ತಂ ।
ಜಲಲವ ಮದು ಬಿಂದು ಪೃಷತ ವಿಪ್ರುಟ್ಸಂಜ್ಞಂ ॥
ಪುಳಿನಸ್ಥಳಿ ಸ್ಯೈಕತೆ ಸಿಕ ।
ತಿಥಾಹ್ವಯಂ ಸಿಕತೆ ವಾಳುಕಾಪರ್ಯಾಯಂ ॥ ೧೪ ॥

ಸರಸಿ ಸರಂ ಕಾಸಾರಂ ।
ಸರೋಜಷಂಡಂ ತಟಾಕ ಮಾಧಾರಂ ವು ॥
ಷ್ಕರಿಣಿ ಯದು ವಾಪಿ ದೀರ್ಘಿಕೆ ।
ಪರಿಖಾತಂ ದೇವಖಾತ ಮುಕ್ಕು ಮುಖಾತಂ ॥ ೧೫ ॥

ಉದಪಾನಂ ಕೂಪಂ ಪ್ರಹಿ ।
ಯದೆಂಬುದಱಿಗಂಧು ಪಲ್ವಲಂ ವೇಶಂತಂ ॥
ಉದಕೋಚ್ಛ್ವಾಸಂ ಕೋಡಿ ದ ।
ಲದು ಬಗರಗೆ ಚುಂಡಿ ಜೂತಕಂ ಚುರಿ ಪೆಸರಿಂ ॥ ೧೬ ॥

ಸ್ಥಿರಬಂಧಂ ಸೇತು ಪಯಃ ।
ಸರಣಿ ಯದಕ್ಕುಂಪ್ರಣಾಳಿ ಯೂವಾಹಂ ಪ ॥
ತ್ತಿರಿ ಸಮೆದ ನಿಪಾನಂ ತಾ ।
ನರಘಟ್ಟೋದ್ಘಾಟನಂ ಘಟೀಯಂತ್ರಾಹ್ವಂ ॥ ೧೭ ॥

ಕಂ॥ ಆವಾಳ ಮಾಳವಾಳ ಮು ।
ದಾವಾಪಂ ವಾರಿನಿರ್ಗಮಂ ವುಟಭೇದಂ ॥
ಶೈವಾಳಂ ಜಲನೀಳಿಕೆ ।
ಶೈವಳಮದು ನೀರೊಳಾದ ಪಾವನೆ ಯೆನಿಕುಂ ॥ ೧೪ ॥

ಅರವಿಂದಂ ರಾಜೀವಂ ।
ಸರಸಿರುಹಂ ಸಾರಸಂ ಮಹೋತ್ಪಳ ಮುಬ್ಜಂ ॥
ಖರದಂಡಂ ಕಮುಳಂ ತಾ ।
ಮರಸಂ ನಳಿನಂ ಕುಶೇಶಯಂ ಶತಪತ್ರಂ ॥ ೧೫ ॥

ಪರಿಷಜ್ಜಂಬಾಳ ನಿಷ ।
ದ್ವರ ಕರ್ದಮ ಶಾದ ಪಂಕಜಂ ಪದ್ಮಂ ಮು ॥
ತ್ತರುಣಂ ಕೋಕನದಂ ವುಂ ।
ಡರೀಕ ಮೆನಿಕುಂ ಸಿತಾಂಬುಜಂ ತಾನದಱಿರೊಳ್ ॥ ೧೦ ॥

ಕರಹಾಟಂ ಕಂದಂ ಕೇ ।
ಸರಮದು ಕಿಂಜಲ್ಕ ಮುಬ್ಜನಾಳಂ ದಂಡಂ ॥
ತರುಣಂ ಬಿಸಂ ಮೃಣಾಳಂ ।
ವರಾಳಕಂ ಬೀಜಕೋಶ ಮದು ಕರ್ನ್ನಿಕೆಯುಂ ॥ ೧೧ ॥

ಇಂದೀವರ ಮುತ್ಪಳ ಮೆಂ ।
ಬಂದವಿಭಿನ್ನಾರ್ಥ ಮಸಿತವದು ಕುವಳಯನಂ ॥
ಜ್ಞಂ ದಲ್ ಕುಮುದಂ ಕೈರವ ।
ಮೆಂದು ಸಿತೋತ್ಪಲ ವದಱಿ ಪೇಳಿಲ್ಪಡುಗುಂ ॥ ೧೨ ॥

ಸಮನಿಸಿರೆ ಕೆಂವು ಕಿಱಿದಾ ।
ನು ಮಱಿಗೆ ಸೌಗಂಧಿಕಾಖ್ಯಮದೆ ಕಲ್ಹಾರಂ ॥
ಕಮಳಿನಿ ಬಿಸಜಿನಿ ಕುಮುದಿನಿ ।
ಕುಮು (ದ್ವತಿಯದುಂ) ತದೀಯಸಂಹತಿ ಷಂಡಂ ॥ ೧೩ ॥

ಇಂತು

—ಸಲಿಲವರ್ಗಂ—

ಶ್ರೀ ವೀತರಾಗಾಯನಮಃ.

ಕಂ॥ ಸ್ಥಿರೆ ಧರಣಿ ಧಾತ್ರಿ ಮೇದಿನಿ ।
ಧರಿತ್ರಿ ಧರೆ ಯವನಿ ಪೃಥ್ವಿ ರಸೆ ವಸುಧೆ ವಸುಂ ॥
ಧರೆ ಕು ಮಹಿ ಜಗತಿ ವಿಶ್ವಂ ।
ಭರೆ ಗೋ ಕ್ಷ್ಮಾ ಕ್ಷ್ಮೋಣಿ ಭೂಮಿ ಭೂ ಗೋತ್ರೆ ನೆಲಂ ॥ ೧ ॥

ಮರುಧನ್ವಾಹ್ವಯೆಮೂಷರ ।
ಮಿರಿಣಂ ಮೃತ್ಸ್ನಾಖ್ಯೆ [ಮೃತ್ಸೆ] ಮೃತ್ತಿಕೆ ಸಕ್ಷಾ ॥
ರರಸ ಮದೂಷರಮತ್ತು ।
ರ್ವರೆ ಯೆನಿಸುಗು ಮುರ್ವಿ ಸರ್ವಸಸ್ಯಸಮೃದ್ಧಂ ॥ ೨ ॥

ಆವುದು ಬೆಳೆಗುಂ ವೃಷ್ಟಿಯಿ ।
ನಾವಿಷಯಂ ದೇವಮಾತೃಕಂ ಸತತಂ ಮು ॥
ತ್ತಾವುದು ನದೀಪ್ರವಾಹದ ।
[ತೀವಿ] ವನದೀಮಾತೃಕಂ ತದುರ್ವೀಭಾಗಂ ॥ ೩ ॥

ಎರೆಯುಳ್ಳುದೊಂದು ಭೂಮ್ಯಂ ।
ತರಮದು [ತಾಂ] ಕೃಷ್ಣ ಭೂಮಿ ಯಕ್ಕುಂ ಬೆಳ್ಮೆ ॥
ಣ್ಬೆರಸಿದ ಮಹೀಪ್ರದೇಶಂ ।
ನಿರಂತರಂ ಪಾಂಡುಭೂಮಿ ಯೆಂಬುದದೆನಿಕುಂ ॥ ೪ ॥

ಜಳಬಹುಳಮನೂಪಂ ಜಾಂ ।
ಗಳೆ ಮಜಳಂ ಶಾದಹರಿತ ಮಪ್ಪುದು ದಲ್ ಶಾ ॥
ದ್ವಳೆ ಮದು ಖಿಳೆ ಮಪ್ರಹತಂ ।
ನೆಲಂ ಸ್ಥಲಂ ಸ್ಥಲಿ ಸಶರ್ಕರಂ ಶರ್ಕರಿಲಂ ॥ ೫ ॥

ಕಂ॥ ಶಾಲೇಯ್ರಂವ್ಯೆಹೇಯಂ ।
ತೈಲೀನಂ ಕೋದ್ರವೀಣ ಮೌವಿಾನಂ ತ ॥
ಬ್ಳಾಳಿಪ್ರಭೃತಿ ಮಹಾಧಾ ।
ನ್ಯಾಳಿನಮುತ್ಪತ್ತಿಗಾವ ಮುಚಿತಂ ಕ್ಷೇತ್ರಂ ॥ ೬ ॥

ಪಶುಗಳ್ಗೆ ಹಿತವೆನಿಪ್ಪುದು ।
ಪಶೀಯಮದು ನಡ್ವಳಂ ನಳಾನ್ವಿತಮಕ್ಕುಂ ॥
ವೃಶಶಾಕಪ್ರಭವಂ ಶಾ ।
ಕಶಾಕಟಂ ಶಾಕಶಾಕಿನಂ ತಾನೆನಿಕುಂ ॥ ೭ ॥

ಇಂತು

—ಭೂವರ್ಗಂ—

ಶ್ರೀ ವೀತರಾಗಾಯನಮಃ.

ಕಂ॥ ಗಿರಿ ಗೋತ್ರಂ ಶಿಖರಿ ಧರಂ ।
ಸ್ಥಿರಂ ನಗಂ ಪರ್ವತಂ ಶಿಲೋಚ್ಚಯ ಮುರ್ವೀ ॥
ಧರ ಮದ್ರಿ ಶೈಲ ಮಚಲಂ ।
ದರಿಮಂತಂ ಶೃಂಗಿ ಸಾನುಮಂತ ಮಹಾರ್ಯಂ ॥ ೧ ॥

ಅನಗಕಟಕಂ ಪ್ರಸ್ಥಂ ।
ಸಾನು ತಟಂ ಭೃಗು ನಿತಂಬ ಮಂತದು ತಪ್ಪಿಲ್ ॥
ತಾನೆನಿಸುಗು ಮುಪಕಂಠದ ।
ಕಾನನ[ರಾಜಿಯು]ಮುಪತ್ಯಕಾಹ್ವಯಮಕ್ಕುಂ ॥ ೨ ॥

ದರಿ ಕಂದರಂ ಬಿಲಂ ಗ ।
ಹ್ವರಂ ಗುಹಾಕುಹರ ಮದ್ರಿಕುಂಜಂ ಕೊಳ್ಳಂ ॥
ಗಿರಿಪರ್ಯಂತಂ ಪಾದಂ ।
ಪರಿಸರ [ದ ತೊಜ್ಜಿಯದು ನಿರ್ಝರಂ ಪ್ರ] ಸ್ರವಣಂ ॥ ೩ ॥

ಶಿಲೆ ಪಾಷಾಣಂ ಗ್ರಾವೋ ।
ಪಲಾಶ್ಮ ದೃಷದಾಖ್ಯ ಮಕ್ಕು ಮಗಶಿಖರಾಗ್ರ ॥
ಸ್ಖಲಿತನಿತಾಂತಸ್ಥೂಳೋ ।
ಪಲಂಗಳವೆ ಗಂಡಶೈಲ ಮೆನೆ ಪೆಸರ್ವಡೆಗುಂ ॥ ೪ ॥

ಪಾರಸವಂ ಲೋಹಂ ಗಿರಿ ।
ಸಾರ ಮಯಸ್ತೀಕ್ಷ್ಣಮಾಯಸಾಖ್ಯಂ ಕಬ್ಬೊನ್ ॥
ಗೈರಿಕ ಮೆನಿಕುಂ ಜಾಜದು ।
ಸಾರಾಶ್ಮಭವಂ ಮನಶ್ಶಿಲಾದಿಗಳೆನಿಕುಂ ॥ ೫ ॥

ಗಿರಿಜೋತ್ತಮ ಕಾಂಚನ ಜಾ ।
ತರೂಪ ತಪನೀಯ ಭರ್ಮ ಹಾಟಕ ಚಾಮೀ ॥
ಕರ ಶಾತಕುಂಭ ಕಾರ್ತ ।
ಸ್ವರ ಕನಕ ಸುವರ್ಣ ರುಕ್ಮನಾಮಂ ಹೇಮಂ ॥ ೬ ॥

ಕಂ॥ ಗೈರಿಕ ನಿಷ್ಕ ಹಿರಣ್ಯ ಮು ।
ಹಾರಜಿತ ಸ್ವರ್ಣ ಕರ್ಬುರಾಷ್ಟಾಪದ ಮಿ॥
ನ್ನೋರಂತಲಿ ಜಾಖೂನದ ।
ಮೂರಯೆ ಗಾಂಗೇಯಶಬ್ದಿತಂ ಕಲ್ಯಾಣಂ ॥ ೭ ॥

ಶ್ವೇತಂ ರಜತಂ ತಾಂ ಕಳ ।
ಧೌತಾಖ್ಯಂ ತಾರ ಮೆಂಬುದಕ್ಕುಂ ರೂಪ್ಯಂ ॥
ರೀತಿಕೆ ಯದಾರಕೂಟಂ ।
ಖಾತಂ ತಾಂ ವೃತ್ತಿಲೋಹಮೆನೆ ವೃತ್ತಕಮುಂ ॥ ೮ ॥

ತ್ರಪು ವಂಗಂ ಸೀಸಂ ಸೀ ।
ಸಪತ್ರಕಂ ನಾಗ ಮಲ್ಲಿಗೆ ಸೌರಾಷ್ಟ್ರಕ ಮು ॥
ಭ್ಯುಪಗತಮಕ್ಕುಂ ಕಾಂಸ್ಯ ।
ಕ್ಕೆ ಪೆಸರ್ ತಾಮ್ರಕ ಮುದುಂಬರಂ ಕಿಸು ಶುಲ್ಬಂ ॥ ೯ ॥

ಮರಕತ ಮದಶ್ಮಗರ್ಭಂ ।
ಗರುಡೋದ್ಗಾರಂ ಹರಿನ್ಮಣಿಸಮಾಖ್ಯಂ ಮು ॥
ತ್ತರುಣಾಶ್ಮಂ ಕಿಸುಗಲ್ ಪ ।
ದ್ಮರಾಗಮಣಿ ವಾಳವಾಯಜಂ ವೈಡೂರ್ಯಂ ॥ ೧೦ ॥

ರೂಪ್ಯಂ ಸುವರ್ಣ ಮೆರಡು ಮು ।
ಕುಪ್ಯಂ ಮುತ್ತದೆ ಹಿರಣ್ಯ ಮೆಂಬುದುವಕ್ಕುಂ ॥
ಕುಪ್ಯ ಮವಲ್ಲದು [ದಕ್ಕುಂ] ।
ರೂಪ್ಯಂ ತಾನೆನಿಕು ಮಾಹತಂ ತದ್ದ್ವಿತಯಂ ॥ ೧೧ ॥

ದ್ರವಿಣಂ ದ್ರವ್ಯಂ ವಸ್ವ ।
ರ್ಥ ವಿತ್ತ ರೈ ರಿಕ್ಥ ಸಾರ ಧನ ವೇಕಾರ್ಥಂ ॥
ನವನಿಧಿಗಳ್ ಶೇವಧಿಗಳ್ ।
ನುವಿಹಿತ ನಿಕ್ಷೇಪಮಂತದುಪನಿಧಿ ಯೆನಿಕುಂ ॥ ೧೨ ॥

ಇಂತು

—ಕಾಲಾಯಸಾದಿ ಧಾತುವರ್ಗಂ—

ಶ್ರೀ ವೀತರಾಗಾಯನಮಃ.

ಕಂ॥ ತರು ಶಾಖಿ ಪಾದಪಂ ವಿ ।
ಪ್ಪರ ಮದ್ರಿ ಕುಜಂ ದ್ರುಮಂ ದ್ರು ಶಾಳ ಮಗಂ ಭೂ ॥
ಮಿರುಹಂ ವಿಟಪಿ ವನಸ್ಪತಿ ।
ಮರಂ ನಗಂ ಕುಟ ಮನೋಕಹಂ ಶಿಖಿ ವೃಕ್ಷಂ ॥ ೧ ॥

ಫಳ ಮುಳ್ಳುದು ಫಳಿನಂ ನಿ ।
ಷ್ಫಳಕುಜ ಮವಕೇಶಿ ಪುಷ್ಪಚಯಮಿಲ್ಲದೆಯುಂ ॥
ಫಳಮಪ್ಪುದದು ವನಸ್ಪತಿ ।
ಫಳವುಷ್ಪಕುಳಪ್ರಸೂತಿ ವಾನಸ್ಪತ್ಯಂ ॥ ೨ ॥

ತಮಗವಸಾನಂ ಫಳಪಾ ।
ಕಮಪ್ಪುಪೋಷಧಿಗಳೆನಿಸುಗುಂ ಹ್ರಸ್ವಶಿಖಾ ॥
ನಿವಹಂ ಕ್ಷುಪನಾಮಂ ವ ।
ಲ್ಲಿ ವೀರುದಾಖ್ಯಂಗಳೆಲ್ಲಮವೆ ಗುಲ್ಮಂಗಳ್ ॥ ೩ ॥

ಅಂಕುರ ಮುಂಕೂರಂ ಪ್ರಥ ।
ಮಾಂಕುರ ಮುಕ್ಕುಂ ಪ್ರರೋಹನಾಮಂ ಕಳಿಕಾ ॥
ಸಂಕುಳ ಮುಂತವೆ ಜಾಳಿಕ ।
ಮುಂ ಕೊನರುಂ ಮುಕುಳ ಕೋರಕಂಗಳವೆನಿಕುಂ ॥ ೪ ॥

ಛದನಂ ಪತ್ರಂ ಪರ್ಣಂ ।
ಛದಂ ಪಳಾಶಂ ದಳಂ ಸಮಮವೇಕಾರ್ಥಂ ॥
ವುದಿದೊಂದಿದ ಮೂಲಂ ತಾ ।
ನದು ಪಾದಂ ಶಿಫೆ ಜಟಾಭಿಧಾನಮದಕ್ಕುಂ ॥ ೫ ॥

ಕಂ॥ ಆರೋಹಮುಚ್ಛ್ರಯಂ ವಿ ।
ಸ್ತಾರಂ ವಿಟಪಂ ಪ್ರಕಾಂಡಮಕ್ಕುಂ ಸ್ಕಂಧಂ ॥
ಸಾರಂ ಮಜ್ಜಂ ವಲ್ಕಂ ।
ನಾರಂತದು ಕೋಟರಾಹ್ವಯಂ ತಾಂ ಪೊಟಿಲ್ ॥ ೬ ॥

ಶಿಖರಿಣಿ ॥ ಅವಾಗ್ಭಾಗಂ ಬುಧ್ನಂ ಕ್ಷಿತಿರುಹಕಿರಂ ತಾನೆ ಶಿಖರಂ ।
ಕವಲ್ಗಳ್ ಸ್ಕಂಧಾಗ್ರಪ್ರತತಿ ಬಹುಶಾಖಾಪರಿಕರಂ ॥
ಧ್ರುವಂ ಶಂಕಾವ್ಯಖ್ಯಂ ತಾಂ ಕೊಳಿಡದು ಮಡಳ್ ತಾಮದೆನಿಕುಂ ।
[ಸವಂ] ತಾಂ ಕಾಷ್ಠೋದ್ಮೇಂಧನಮೆನೆ ಸಮಿದ್ವಾಚಿ ಯೆನಿಕುಂ ॥ ೭ ॥

ಕಂ॥ ವ್ರತತಿ ಲತಾ ವೀರುತ್ತಾ ।
ಪ್ರತಾನಿನೀನಾಮ ಮಱಿಗೆ ವಲ್ಲರಿ ಭೃಶಸಂ ॥
ಭೃತನವಮಂಜರಿ ಗೊಂಚಲ್ ।
ಪ್ರತಾನ ಮುಳಪಂ ತೊಡಂಬೆ ಯಂತದು ವೃಂತಂ ॥ ೮ ॥

ಪೊಸಮಿಡಿ ಶಲಾಟು ತಾನದು ।
ಪಸುರಾಱಿದ ಫಳನಿಕಾಯಮಕ್ಕುಂ ವಾನಂ ॥
ಪೊಸದಳಿರೆನೆ ಪಲ್ಲವ ಮೆನೆ ।
ಕಿಸಲಯ ಮೆನೆ ತಾಂ ಪ್ರವಾಳ ಮೆನೆ ಸದೃಶಾರ್ಥಂ ॥ ೯ ॥

ಮುಕುಳಂ ಕುಟ್ಮಲ ಮದು ತ ।
ದ್ವಿಕಾಸ ಮುಜ್ಜೃಂಭಿತಂ ಸ್ಮಿತಂ ವ್ಯಾಕೋಚಂ ॥
ವಿಕಚಂ ದಳಿತಂ ಹಸಿತಂ ।
ವಿಕಸಿತ ಮುನ್ಮೀಲಿತಂ ವಿನಿದ್ರ ಮೆನಿಕ್ಕುಂ ॥ ೧೦ ॥

ಕುಸುಮಂ ಪ್ರಸೂನ ಸುಮನಃ ।
ಪ್ರಸವಾಖ್ಯಂ ಪುಷ್ಪಮೆನೆವ ಗುಚ್ಛಂ ಸ್ತಬಕಂ ॥
ಕುಸುಮದ ರಜಂ ಪರಾಗಂ ।
ಕುಸುಮಾಸವರಸ ಮದಲ್ತ್ತೆ ಮಧು ಮಕರಂದಂ ॥ ೧೧ ॥

ಕಂ॥ ಗೃಹವಾಟ ನಿಷ್ಕುಟಂ ರಮ ।
ಣಹೇತುವದು ಪುಷ್ಪವಾಟ ತಾಂ ಪೂದೋಟಂ ॥
ಬಹಳಮಧುಪಾನಕಂ ಹೃದ ।
ಯಹಾರಿ ವಿರುತಾಳಿವಾಳಿಕಾಕಮನೀಯಂ ॥ ೧೦ ॥

ಪ್ರಮದವನಂ ಶುದ್ಧಾಂತ ।
ಪ್ರಮದಾಜನದೊಡನೆ ಕೂಡಿ ವಿಹರಿಪ್ಪ ವನಂ ॥
ಸಮುದಿತ ಸಮಸ್ತಲೋಕಂ ।
ರಮಿಯಿಸುವ ವನಾಂತ ಮಂತದುದ್ಯಾನವನಂ ॥ ೧೩ ॥

ಪ್ರಹರ್ಷಣೀ॥ ಊರಿಂದಂ ಪೊಲಿಗಣ ಮೆಯ್ಯೊಳೊಲ್ದು ಧರ್ಮ ।
ಕ್ಯಾರಾನುಂ ವುರಜನವಿಟ್ಟ ಭೂಜಷಂಡಂ ॥
ಆರಾಮಂ ಪೆಸರೊಳದಕ್ಕುಮಾಪ್ಯನಿಂಬ ।
ಹ್ಮೀರಾದಿದ್ರುಮಬಹುಳಂ ಮನೋಭಿರಾಮಂ ॥ ೧೪ ॥

ಕಂ॥ ಕಾಂತಾರ ವಿಪಿನ ಗಹನ ।
ಪ್ರಾಂತರಕಾನನ ವನಾಟವೀ ಕಕ್ಷ ನಮಾ ॥
ಖ್ಯಂ ತಾ ನರಣ್ಯಮಿವು ಮು ।
ತ್ತಂತದರಣ್ಯಾನಿ ಯೆನಿಕುಮೊದವಿದ ಪೆರ್ಚಿಂ ॥ ೧೫ ॥

ಇಂತು

—ವನವರ್ಗಂ—

ಶ್ರೀ ವೀತರಾಗಾಯನಮಃ.

ಅಕ್ಕರಂ॥ ಅಸುಗೆ ಕಂಕೆಲ್ಲಿ ತಾನಶೋಕಾಹ್ವಯಂ ಪಾದರಿ ಪಾಟಳಾಖ್ಯಂ ।
ಕೊಸಗು ವೃಕ್ಷೋತ್ಪಳಂ ಕರ್ಣಿಕಾರಂ ಸಂಪಗೆ ಚಾಂಪೇಯಂ
ಚಂಪಕಾಹ್ವಯಮೆನಿಕುಂ ॥
ಪೆಸರೊಳ್ ಸೀವನ್ನಿ ಕಾಶ್ಮರಿಯಂ ಕಟ್ಫಳಂ ವೃಂತಲಂ ನ್ಯಗ್ರೋಧಂ
ವಟವೆನಿಕ್ಕು ।
ವಸಮುಪರ್ಣಂ ಸಪ್ತಚ್ಛದದ್ರುಮ ವೇಟಿಶಿಲೆ ವಾಟಿಶಿ ಯೆಂದಱಿದು
ಕೊಳ್ಗೆ ॥ ೧ ॥

ಕಂ॥ ಎಲವಂ ಸ್ಥಿರಾಯು ತಾಂ ಶಾ ।
ಲ್ಮಲಿ ಯೆನಿಕುಂ ಬಸರಿ ಪರ್ಪಟೀ ಪ್ಲಕ್ಷಾಹ್ವಂ ॥
ತಿಲಕಂ ಕ್ಷುರಕಾಖ್ಯಂ ಫೇ ।
ನಿಲ ಮಕ್ಕುಮುರಿಷ್ಟಶಾಖಿ ದಾಡಿಮಿ ಕರಕಂ ॥ ೨ ॥

ಚೂತಂ ಮಾಕಂದಮಹೀ ।
ಜಾತಂ ಸಹಕಾರ ಮಾಮ್ರ ಮೆನಿಕುಂ ಮತ್ತಾ ॥
ಮ್ರಾತಕ ಪೀತನಕಂ ರಾ ।
ಜಾತನಮಕ್ಕುಂ ಪ್ರಿಯಾಳಮೇ ಚಳದಳಕಂ ॥ ೩ ॥

ಚಲದಳ ಮಶ್ವತ್ಥಂ ಪಿ ।
ಪ್ಪಲ ಮರಳಿ ಪಲಾಶಕಾಖ್ಯಂ ಮುತ್ತಂ ॥
ತಳಿಮುಂ ತಾಳಮು ಮೆನೆ ಪನೆ ।
ಫಳಿನಿ ಶ್ಯಾಮಂ ಪ್ರಿಯಂಗು ನಾಮಂ ನಿಗಟಿಪ್ಪಂ ॥ ೪ ॥

ವಕುಳಂ ಕೇಸರತರು ಬೀ ।
ಜಕಮಕ್ಕುಂ ಕೋವಿದಾರಕುದ್ದಾಳಾಹ್ವಂ ॥
ಕಕುಭ ಮದರ್ಜುನಭೂಜಂ ।
ಲಿಕುಚಂ [ಲಕುಚಂ] ಕಪಿತ್ಥ ಮಱಿಗೆ ದದಿತ್ಥಂ ॥ ೫ ॥

ಕಂ। ಐರಾವತಾಭಿಧಾನಂ ।

ನಾರಂಗಂ ಬೀಜಪೂರಕಂ ರುಚಕಂ ಜಂ ॥
ಬೀರಂ ತಾಂ ಕರಣಂ ಕದ ।
ಳೀರಂಭಾಭಿಖ್ಯಮುಂತದಕ್ಕುಂ ಮೋಚಂ ॥ ೬ ॥

ಪೂಗಂ ಗುವಾಕ ಮೆನಿಕುಂ ।
ನಾಗಲತಾನಾಮ ಮಱಿಗೆ ತಾಂಬೂಳಿಕೆ ಪ್ರು ॥
ನ್ನಾಗಂ ಸುರವಲ್ಲಭ ಮದು ।
ನಾಗಂ ಗಜಕೇಸರಂ ಲವಂಗಂ ಪಲ್ಕಂ ॥ ೭ ॥

ಶೇಲು ಶ್ಲೇಷ್ಮಾತಕತರು ।
ಪೀಲು ವೆನಲ್ಗಡಫಲಂ ಗಿರಿಪ್ರಭವ ಮದ ॥
ಕ್ಷೋಳಂ ರೋಧ್ರಂ ತಿಲ್ವಂ ।
ಕಾಳಸ್ಕಂಧಂ ತವಾಳ ಮೆನೆ ತಾಪಿಚ್ಛಂ ॥ ೮ ॥

ಕ್ರಿಮಿಫಳ ಮುದುಂಬರಂ ನ ।
ಕ್ತಮಾಳ ಮುಕ್ಕುಂ ಕರಂಜಭೂಜಂ ಫಲ್ಲ ॥
ತ ಮರುಷ್ಕರಂ ಕದಂಬ ।
ದ್ರುಮ ಮುದು ನೀಪಂ ಮಧೂಕತರು ಗುಡಪುಷ್ಪಂ ॥ ೯ ॥

ನಿಂಬ ಮರಿಷ್ಟಂ ಸಿಚುಮಂ ।
ದಂ ಬೇವು ಪರೂಪಕಾಹ್ವಯಂ ಶಾಖಾಳಂ ॥
ಜಂಬೂ ನಾಮಂ ನೇಱಿಲ್ ।
ತುಂಬುರು ತಿಂದುಕ ಮೆನಿಪ್ಪುದಕ್ಕುಂ ಪೆಸರಿಂ ॥ ೧೦ ॥

ತಾಳಂ ಮದನಂ ಸರ್ಜಂ ।
ಶಾಲಂ ಸಲ್ಲಕಿ ಗಜಪ್ರಿಯಾಹ್ವಂ ಬಿಲ್ವಂ ॥
ಮೂಲೂರಂ ಶ್ರೀಫಲಮೆನೆ ।
ಕೋಲಂ ಕರ್ಕಂಧು ಬದರಿ ಕೋಲೀ ನಾಮಂ ॥ ೧೧ ॥

ಕಂ॥ ಚೇತಕಿ ಶಿವೆ ಹೈಮವತಿ ಹ ।
ರೀತಕಿ [ಯಭ]ಯೂಖ್ಯೆಪಥ್ಯೆ ತಿಷ್ಯಫಲಂ ಧಾ ॥
ತ್ರೀತರು [ವಾಮುಲಕಾಖ್ಯೆ] ವಿ ।
ಭೀತಕ ಮಕ್ಕುಂ ಕಲಿದ್ರುಮಂ ಭೂತಗೃಹಂ ॥ ೧೦ ॥

ಕತಕಂ ಪ್ರಸಾದನಂ... ।
ವಿತರದಮ್ಮೆಲ್ಲತರು ಶಿಗ್ರು ಶೋಭಾಂಜನಕಂ ॥
ಕೃತವೂಳಂ ಶವ್ಯಾಕಂ ।
ಚತುರಂಗುಳೆ ಮೆಂಬುದಕ್ಕು ಮಾರಗ್ವಧದೊಳ್ ॥ ೧೩ ॥

ಶುಕತರು ಭಾಂಡಿ ಶಿರೀಷಂ ।
ವಿಕಂಕತಂ ಸ್ವಾದುಕಂಟಕಂ ಚಿರಿಬಿಲ್ವಂ ॥
ಕುಕರಂಜಂ ಪನಸಂ ಕಂ ।
ಟಕಫಳೆ ಮೇರಂಡೆ ಮೂರುಬೂಕ ಮದಕ್ಕುಂ ॥ ೧೪ ॥

ಖದಿರಂ ಸಿತ ಮಜಿಃ ಯುಂತದು ।
ಕದರಂ ಗಾಯತ್ರಿ ಪಂತಧಾವನ ಮದು ವಿ ॥
ಟ್ಟಿದಿರ ಮರಿವೆೀಧನಾಮಕ ।
ಮದು ತಿನಿಶಂ ನೇಮಿ ತಾಂ ರಥದ್ರುಮ ಮಕ್ಕುಂ ॥ ೧೫ ॥

ಅರುಣಮದು ಶೃಂಗಿ ತೇಗಿನ ।
ಮರನದೆ ಸಾಕಂ ಮೃದುತ್ವಚಂ ಭೂರ್ಜಂ ಕುಂ ॥
ದುರು ಕುಂದುರುಪ್ಕ ಮೆನೆ ಪಿರಿ ।
ವರಂದವಂ ಹುಣಿಸೆ ತಿಂತ್ರಿಣೀಚಿಂಚಾಹ್ವಂ ॥ ೧೬ ॥

ಇಂಗುದಿ ತಾಪಸಭೂಜ ಮು ।
ದಿಂಗಳು ಮಿರ್ಬೀಡು ಶಿಂಶುಪಾಭಿಖ್ಯಂ ಖ ॥
ಟ್ವಾಂಗಂ ತಾನರಳಕ್ಕುಂ ।
ಮಾಂಗಲ್ಯಾನಾಮ ಮದು ಶಮೀದ್ರುಮಮಕ್ಕುಂ ॥ ೧೭ ॥

ಕಂ॥ ವಿದುಳೆಂ: ಶೀತಂ ವೇತಸ ।
ಮದು ವಂಶಂ ವೇಣು ಮುಸ್ಕರಂ ತ್ವಕ್ಸಾರಂ ॥
ಬಿದಿರಿವಱಿಶಿಖಾದ ಗಾಳಿಯ ।
ವುದುವಿಂ ಧ್ವನಿಯಿಸುವ ವೇಣು ಕೀಚಕ ಮಕ್ಕುಂ ॥ ೧೪ ॥

ತಾಳಂ ಖರ್ಜೂರಂ ಹಿಂ ।
ತಾಳಂ ಕೇತಕಿ ಸನಾರಿಕೇಳಂ ಕ್ರಮುಕಂ ॥
ತಾಳದ್ರುಮಮೆಂದಿವು ಭೂ ।
ಜಾಳಿಗಳೊಳ್ ತೃಣಮಹೀರುಹಂಗಳೆನಿಕ್ಕುಂ ॥ ೧೫ ॥

ಸರಳಂ ಪೀತದ್ರು ಮಹಾ ।
ತರುವಕ್ಕುಂ ಸ್ನುಹಿ ಕರೀರನಾಮಂ ಕ್ರಕರಂ ॥
ಕರವೀರ ಮಶ್ವಮಾರಂ ।
ಗಿರಿಮಲ್ಲಿಗೆ ವತ್ಸಕಾಭಿಧಾನಂ ಕುಟಜಂ ॥ ೧೦ ॥

ಪ್ರಪುನಾಟಮದೇಡಗಜಂ ।
ಕಪಿತ್ಥಪರ್ಣಾಖ್ಯೆ ತಗಸಿ ಮರ್ಕಟಿ ಯೆನಿಕುಂ ॥
ಕಪಿಕಚ್ಛು ದುರಾಲಭಿ ತುಱಿ ।
ಚೆ ಪೀಱಿಶಿಜಾಲಿನಿ ಯೆಲಾಬು ತುಂಬೀ ನಾಮಂ ॥ ೧೧ ॥

ಅನಳಂ ಚಿತ್ರಕ ಮದು ಗೋ ।
ಸ್ತನಿ ಮೃದ್ವೀಕಾಭಿಧಾನೆ ತಾಂ ದ್ರಾಕ್ಷೆ ತಪ ॥
ಸ್ವಿನಿ ಜಟಿಳೆ ಮಾಂಸಿ ವತ್ಸಾ ।
ದನಿ ಛಿನ್ನರುಹಂ ಗುಡೂಚಿ ತಂತ್ರಿ ಯೆನಿಕ್ಕುಂ ॥ ೧೨ ॥

ಮುಂಜಿಷ್ಠಾವಿಕಸಾಖ್ಯಂ ।
ತಾಂ ಜಿಂಗಿ ಕಿರಾತತಿಕ್ತಕಂ ಭೂನಿಂಬಂ ॥
ಗುಂಜೆಯದು ಕೃಷ್ಣಲಾಭಿ ।
ಖ್ಯಂ ಜಳದಂ ಮುಸ್ತೆ ಮುಸ್ತಕಂ ಕುರುವಿಂದಂ ॥ ೧೩ ॥

ಕಂ॥ ಏಳಾವಾಳುಕ ಸಂಜ್ಞಿಕ ।
ಮೈಳೇಯಂ ಭದ್ರಮುಸ್ತೆ ಗುಂದ್ರಾವಚನಂ ॥
ಬಾಳೆ ಮುಕೀರಂ ವಾರಿ ಮೃ ।
ಣಾಳೆಮುದೀಚ್ಯಾಭಿಧಾನಕಂ ಹ್ರೀವೇರಂ ॥ ೨೪ ॥

ಹರಿಣಿ॥ ಸುರಸಿತುಳೆ ನಾ (ಯ.....ತ)ರ್ಜಿಕಾಖ್ಯೆ ಕುಟೀರಕಂ ।
ಸುರಭಿತರಸಂ ಗಂಧಂ ತಾಂ ಪೃಶ್ನಿಪರ್ಣಿ ಭಣಿರ್ಜಕಂ ॥
ಮರು ಮರುವಕಂ ಪೀತಾಭಿಖ್ಯಂ ಹರಿದ್ರೆ ನಿ [ಶಾಭಿಧಂ] ।
ಮರದರಸಿನಂ ದಾರ್ವಿ ೀ ನಾಹ್ವಂ ಪಚಂಪಚೆ ದಾರುಕಂ ॥ ೨೫ ॥

ಕಂ॥ ಲಶುನಂ ಗೃಂಜನಸಂಜ್ಞಂ ।
ರಸೋನಕಂ ಸೂರಣಾಹ್ವಯಂ ಕಂದಂ ವಾ ॥
ಯಸಿ ಕಾಕಮಾಚಿ ಪೆಸರಿಂ ।
ಮಿಸಿ ಶತಪುಷ್ಪಿಕೆ ವುನರ್ನವಂ ವೃಶ್ಚಿವಂ ? ॥ ೨೬ ॥

ಅಂಗಾರವಲ್ಲಿ ಕೊಡಸಿಗೆ ।
ಲಾಂಗಳಿ ನಾಂಗುಳಿಕ ಮಗ್ನಿಮಂಥನ ನಱಿವಲ್ ॥
ಜಾಂಗೇರಿ ಚುಕ್ರಿಕಾಹ್ವಂ ।
ಭೃಂಗಂ ಮಾರ್ಕವ ಮಲಂಬುಸಂ ಬೋಳೆತರಂ ॥ ೨೭ ॥

ಕರವಂದಂ ಕರವಂದಿಗೆ ।
ಱಿವಣೆ ನಿರ್ದಿಗ್ಧಿಕಾಖ್ಯೆ ಶತಮೂಳಿ ಶತಾ ॥
ವರಿ ತಂಡುಳೀಯಕಂ ಜಳ ।
ಧರನಾಮಂ ಸೋವುವಲ್ಲಿ ವಾಕುಚಿಯಕ್ಕುಂ ॥ ೨೮ ॥

ತೊಂಡೆ ದಲೋಪ್ಮೀ ಬಿಂಬಂ ।
ತುಂಡಿಸವಾಭಿಖ್ಯ ಮಱಿಗೆ ಸಹದೇವಾಖ್ಯಂ ॥
ದಂಡೋತ್ಪಳೆಮಕ್ಕುಂ ನಿ ।
ಗುಂಡಿಯ ದಿಂದ್ರಾಣಿ ಸಿಂಧುವಾರ ಪೆನಿಕ್ಕುಂ ॥ ೨೯ ॥

ಕಂ॥ ಶರಪುಂಖಿ ಗೋಗಿರ್ಗಿ ತಾನದು ।
ಗಿರಿಕರ್ಣಿಕೆಯೆಂಬುದಕ್ಕು ಮಪರಾಜಿತೆ ಗೋ ॥
ಕ್ಷುರಕಂ ಶ್ವದಂಷ್ಟ್ರಮದು ಬಾ ।
ದರಂ ಪಿಚವ್ಯಾಖ್ಯಮಱಿಗೆ ಪಿಚು ಕಾಪರ್ಾಸಂ ॥ ೩೦ ॥

ಮು। ಸ್ಯ॥ ಸುವಹಾಕಂ ರಾಸ್ನೆ ರಾಜಕ್ಷವಯರಪುಲಿಯುವರ್ಾರುಕಂ ಕರ್ಕಟೀನಾ ।
ಮವಿಶೇಷಂ ಚಿರ್ಬ[ಟಂ]ವಾಳುಕಿಯೆನಿಪಡೆಗುಂ ವಾಸ್ತುಕಂ ವಾಸ್ತುಮತ್ಸ್ಯಾ॥
ಷ್ಟೆ ವಯಸಸ್ಥಾಭಿಖ್ಯೆ ಗುಳ್ಳಂ ಬೃಹತಿ ಬದನೆ ವಾತರ್ಾಕಿ ಕರ್ಕಾರು ಕೂಷ್ಮಾಂ।
ಡ ವೆನಿಕ್ಕುಂ ಕಾರವೇಲ್ಲಂ ಸುಷವಿ ಪೆಸರ್ಗೊಳಲ್ಕಾರ್ದ್ರಕಂ ಶೃಂಗಬೇರಂ
॥ ೩೧ ॥

ಕಂ॥ ಮರಿಚಾಹ್ವ ಮೂಷಣಂ ಮಗ ।
ಧರುಹಂ ಕೃಷ್ಣಾಕಣಾಹ್ವಯಂ ಪಿಪ್ಪಲಿ ನಾ ॥
ಗರಕಂ ಮಹೌಷಧಂ ಶುಂ ।
ಠಿ ರಾಮಠಂ ಹಿಂಗು ಜರಣಕಂ ಬಾಹ್ಲೀಕಂ ॥ ೩೨ ॥

ಅಜಮೋದ ಮಡೋವ ಮಜಾ ।
ಜಿ ಜೀರಕಂ ಧಾನ್ಯಮಱಿಗೆ ಕುಸ್ತುಂಬುರು ತಾಂ ॥
ಬಜೆ ಷಡ್ಗ್ರಂಥಿಕೆ ಕುಷ್ಮಮು ।
[ದ] ಜಾಹ್ವಯಂ ಮಾಣಿಮಂಥರಂ ಸಿಂಧೂತ್ಥಂ ॥ ೩೩ ॥

ಅಕ್ಕರ॥ ಜಾತಿ ಮಾಳತಿ ವಾಸಂತಿ ಮಾಧವಿ ಮಲ್ಲಿಗೆ ವಿಚಕಿಳಂ ಮೊಲ್ಲೆಕುಂದಂ ।
ಕೇತಕ್ಯಾಹ್ವಯಂ ಕೇದಗೆ ಯೂಥಿಕೆ ಮಾಗಧಿ ಬಂಧೂಕಂ ಬಂಧುಜೀವಂ ॥
ಮಾತೇಂ ತಾಂ ಕುರಂಟಕ ಮವಮ್ಮಾನಮೆ ರಕ್ತಂ ಕುರವಕಂ ನೀಲಂ ಬಾಣಂ।
ಪೀತಂ ಸಹಚರಿ ಯೆನಿಸುಗುಂ ಮತ್ತೆದು ವಿಳಕ್ಕೈಳಭಿಕೆ ಪಿಕ್ಕೆಯಕ್ಕುಂ॥ ೩೪ ॥

ಕಂ॥ ನವಮಾಳಿಕೆ ಸಂದಿರುವಂ ।
ತಿ ವರ್ಣಪುಷ್ಪಾಭಿಧಾನ ಮಮಿಲಾತಂ ದಾ ॥
ಸವಣಂ ಜಪಾಹ್ವಯಂ ನಂ ।
ದಿವಟ್ಟೆ ಮದು ತಗರಸಂಜ್ಞಿಕಂ ತಾನಕ್ಕುಂ ॥ ೩೫ ॥

ಕಂ॥ ಉತ್ತರಣಿ ಯಪಾವಮಾರ್ಗಂ ।
ಬೆತ್ತಂ ವೆತ್ತಂ ಕುಟನ್ನಟಂ ಪಳವಕತಾಂ ॥
ದುತ್ತೂರಂ ಕಾಂಚನ ಮು ।
ನ್ಮತ್ತಂ ಕಿಂಪಾಕಮದು ಮಹಾಕಾಳಾಖ್ಯಂ ॥ ೩೬ ॥

ಉಪೇಂದ್ರ॥ ವಾಸಾಟರೂಷಾಹ್ವಯು ಮಾಡಸೋಗೆ ।
ಕೋಶಾತಕಾಖ್ಯಂ ಕುಲಕಂ ಪಟೋಳಂ ॥
ಕುಶಂಕುಥಂ ಬರ್ಹಿ ಪವಿತ್ರದರ್ಭಂ ।
ಕಾಶಂ ಕಿಶಂ ಖಾಸಮಭಿಖ್ಯೆಯಕ್ಕುಂ ॥ ೩೭ ॥

ಕಂ॥ ಶರಮದು ಮುಂಜಂ ದೂರ್ವಾ ।
ಹರಿತಾಳೀ ನಾಮಕಂ ಕಱಿಂಕೆ ಯೆನಿಕ್ಕುಂ ॥
ತರುಣತೃಣಂ ಶಷ್ಪಂ ಯವ ।
ಸರಾಜಿ ಘಾಸಂ ಸಮಸ್ತತೃಣ ಮರ್ಜುನಕಂ ॥ ೩೮ ॥

ಇಂತು

—ವೃಕ್ಷಾದಿವರ್ಗಂ—



ನಮಸ್ಸಿದ್ಧೇಭ್ಯಃ

ಶ್ರೀ ವೀತರಾಗಾಯನಮಃ.

ಕಂ॥ ಶರಭ ಮದಷ್ಟಾಪದ ಮಿಭ ।
ವಿರೋಧಿ ಕಂಠೀರವಂ ಮೃಗಾಧೀಶಂ ಕೇ ॥
ಸರಿ ಹರಿ ಸಿಂಹಂ ವ್ಯಾಳ್ರಂ ।
ತರಕ್ಷು ಮೃಗರಿವು ಚಮೂರ ವೆನೆ ಶಾರ್ದೂಲಂ ॥ ೧ ॥

ಖರದಂಷ್ಟ್ರು ಕೋಳಿ ಸೂಕರ ।
ವರಾಹ ಕಿಟಿ ಘೃಷ್ಟಿ ಪೋತ್ರಿನಾಮಂ ಕ್ರೋಡಂ ॥
ಹರಿಣಂ ವನಾಯು ವೇಣಂ ।
ಕುರಂಗ ಮೃಗ [ಶಲಲಿ ಶಲ್ಯಕಂ] ತಾನಕ್ಕುಂ ॥ ೨ ॥

ಶಿವೆ ಮೃಗಧೂರ್ತಂ ಗೋವಾ ।
ಯು ವಂಚಕಂ ಜಂಬುಕಂ ಸೃಗಾಲಂ ನರಿ ಭೇ ॥
ರವ ಮಱುಗೆ ಬಳ್ಳಿ ಛಲ್ಲೂ ।
ಕ ವಚ್ಛಭಲ್ಲ [ಮೆನೆಕರಡಿ] ಭಾಲ್ಲುಕ ಮಕ್ಕುಂ ॥ ೩ ॥

ಸಾರಂಗಂ ಪೃಷತಾಖ್ಯಂ ।
ಸೈರಿಭ ಕಾಸರ ಲುಲಾಯವೆನೆ ಮಹಿಷಂ ಗೌ ॥
ಧಾರಂ ಗೋಧೇರಂ ವಾ ।
ರ್ಜಾರಂ ಪೃಷದಂಶ ವೋತು ಬೆಕ್ಕು ಬಿಡಾಳಂ ॥ ೪ ॥

ವೃಕ ವಿಘಾಸಾಮೃಗ ಮದು ಗಂ ।
ಡಕ ಮಕ್ಕುಂ ಖಲ್ಲಿ ಮುಸಳಿ ಗೋಧಿಕೆ ನರಟಂ ॥
ಕೃಕಲಾಸಂ ಮುಂಡಳಿ ಜಾ ।
ಹಕಂ ಬೃಹನ್ನಕುಳ ನಱುಗೆ ಬಭ್ರು ವೆನಿಕ್ಕುಂ ॥ ೫ ॥

ಕಂ॥ ಪ್ಲವಗಂ ಕಪಿ ಮರ್ಕಟಕಂ ।
ಪ್ಲವಂಗಮಂ ಖಲಿಮುಖಾಹ್ವಯಂ ವಾನರ ನಂ ॥
ತವಱಿಂಗಳಗೆ ಜಾತಿಯಿಂ ಕೃ ।
ಷ್ಣವರ್ಣ ನಾಗಿರ್ಪುದಱಿಂಗೆ ಗೋಲಾಂಗೂಳಂ ॥ ೬ ॥

ಚಮರಂ ಗೋಕರ್ಣಂ ರುರು ।
ಸೈಮುರಾಖ್ಯಂ ನ್ಯಂಕು ಕೃಷ್ಣಸಾರಂ ವಾತ ॥
ಪ್ರಮಿಯೆನೆ ಬೆಳ್ಮಿಗ ವಂತದು ।
ಚಮೂರ ವೃಕಸೂಕರಾದಿ ಕೋಟಿಶ್ಮಿಗ ಮಕ್ಕುಂ ॥ ೭ ॥

ಖನಕೋಂದುರು ಮೂಷಿಕ [ಮೂ
ಖು]ನಾಮಮಿಲಿ ಮತ್ಕುಣಾಖ್ಯ [ಮುದ್ದಂಶಂ] ತಾ ॥
ನಿನಿಕುಂ ಲೂತಾಹ್ವಯ ಮೂ ।
ರ್ಣನಾಭ ಮದು ವೃಶ್ಚಿಕಂ ದ್ರುಣಂ ಕ್ರಿಮಿ ಕೀಟಂ ॥ ೮ ॥

ಶಕುನಿ ನಗೌಕಂ ಪತಗಂ ।
ಶಕುನ್ತಿ ಖಗ ವಂಡಜಂ ಪತತ್ರಿ ಪತಂಗಂ ॥
ವಿಕಿರಂ ಪಕ್ಷಿ ಶಕುಂತಂ ।
ಶಕುನಂ ವಿಹಗಂ ವಿ ವಿಷ್ಕಿರಂ ಪತ್ರರಥಂ ॥ ೯ ॥

ಪತ್ರ ತನೂರುಹ ವಾಜ ಪ ।
ತತ್ರ ಚ್ಛದ ಪಿಂಛ ಪಕ್ಷ ನಾಮಂ ಗಱಿ ಚಂ ॥
ಚೂ ತೊಯ್ಕೋಟಿ ಚಂಚು ತುಂಡಂ ।
ವತ್ರಂಗಳ ಮೊದಲೆಱಿಂಕೆ ಪಕ್ಷತಿ ಯಕ್ಕುಂ ॥ ೧೦ ॥

ಗಗನಾಂತರದೊಳೆವಾಡುವ ।
ಖಗಗತಿ ಡೀನಂ ಪ್ರಡೀನ ಮುಡ್ಡೀನಂ ಪು ॥
ತೊಗೆದ ತದಂಡಂ ತಾಂ ತ ।
ತ್ತಿ ಗೂಡು ನೀಡಂ ಕುಳಾಯ ಮುವಱಿಲಿ ವಿರುತಂ ॥ ೧೧ ॥

ಕಂ॥ ಕೇಕಿ ವಿನೀಳಗಳೆಂ ಪ್ರಚ ।
ಲಾಕಿ ಮಯೂರಂ ಕಳಾಪಿ ಶಿಖಿ ನವಿಲಕ್ಕುಂ ॥
ಕೇಕಾರುತಿ ವಿರುತಂ ಪ್ರಚ ।
ಲಾಕಂ ಬರ್ಹಂ ಶಿಖಂಡ ಮದಱಿ ಕಳಾಪಂ ॥ ೧೦ ॥

ಜಳರಂಕು ಕಾಳಕಂಠಂ ।
ಬಳಾಕ ಬಿಸಕಂಠಿಕಾಹ್ವಯಂ ತಾನಕ್ಕುಂ ॥
ಕಳಹಂಸಂ ಕಾದಂಬಂ ।
ಕಳಕಂಠಂ ಕೋಕಿಲಂ ಪಿಕಂ ಪರಪುಷ್ಟಂ ॥ ೧೩ ॥

ಮು॥ಸ್ರ॥ ಗಿಳಿ ಕೀರಂ ತಾಂ ಶುಕಾಖ್ಯಂ ಜತುಕ ಮಜಿನಪತ್ರಾಹ್ವಯಂ ನೀಲಕಂಠಂ ।
ಕಳವಿಂಕಾಭಿಖ್ಯನಕ್ಕುಂ ಚಟಕ ಮುಱಿಗೆ ತತ್ಖಂಜನಂ ಖಂಜರೀಟಂ ॥
ಜಳಕಾಕಂ ಮದ್ದುನಾಮಂ ಕಳರವೆ ಮದು ಪಾರಾವತಾಖ್ಯಂ ಕಪೋತಂ।
ಬಳಿವುಷ್ಟಂ ವಾಯಸಂ ಕೌಶಿಕರಿವು ಕರಟಂ ಧ್ವಾಂಕ್ಷ ನೀಕಾಹ್ವಿಗೋಳಂ
॥ ೧೪ ॥

ಕಂ॥ ಮೌಕುಳಿ ಕೃಷ್ಣಧ್ವಾಂಕ್ಷಂ ।
ಕಾಕೋಳಂ ದ್ರೋಣ ನಿನತನೂಜ ನೆನಿಕ್ಕುಂ ॥
ಕಾಕಾರಿ ಕೌಶಿಕಾಖ್ಯ ಮು ।
ಲೂಕಂ ಪಿಂಗಲಿ ನಿಶಾಟನಂ ತಾನಕ್ಕುಂ ॥ ೧೫ ॥

ಪೊಲಗಿಡಿಗಂ ಶ್ಯೇನಂ ಪ ।
ತ್ರ ಲಕ್ಷಣಂ ಸಾರಸಾಹ್ವಯಂ ಶತಪತ್ರಂ ॥
ಸಲೆನಿಗಱ್ಪು ಭೃಂಗ ನಾಮಂ ।
ಕಳಿಂಗಮದು ಬೆಣ್ಣೆಭಂ? ಭರದ್ವಾಜಖಗಂ ॥ ೧೬ ॥

*ಉಪಜಾತಿ॥ ಕೋಕಂ ರಥಾಂಗಂ ಪೊಣರ್ವಕ್ಕಿ ಚಕ್ರಂ ।
ನೊತ್ತೀಕಾಹ್ವಯಂ ಚಾದಗೆ ಚಾತಕಂ ತಾಂ ॥
ಬಕಂ ಬಕೋಟಂ ಕಿಕಿದೀವಿ ಚಾಷಂ ।
ಶಕುಂತ ವಿನ್ನಂತದು ಭಾಸ ಮಕ್ಕುಂ ॥ ೧೭ ॥

---

* (ಇಂದ್ರವಜ್ರೋಪೇಂದ್ರ ವಜ್ರವೃತ್ತಂಗಳಿಂದಾದುಪಜಾತಿ ವೃತ್ತಮಿದು)
(ಕನ್ನಡ ಕಾವ್ಯಗಳಲ್ಲಿ ಈ ಬಗೆಯ ಉಪಜಾತಿ ವೃತ್ತಗಳನ್ನು
ಪ್ರಾಯಿಕವಾಗಿ ಯಾರೂ ಪ್ರಯೋಗಿಸಿಲ್ಲ)

ಕಂ॥ ಕೊಂಚೆ ಯದಕ್ಕುಂ ಪೆಸರಿಂ ।
ಕ್ರೌಂಚಂ ಕೃಕವಾಕು ತಾವ್ರಚೂಡಾಭಿಖ್ಯಂ ॥
ತಾಂ ಚರಣಹೇತಿ ಕುಕ್ಕುಟ ।
ನಂಚೆ ಸಿತಚ್ಛದಖಗಂ ಮುರಾಳಿಂ ಹಂಸಂ ॥ ೧೪ ॥

ಚರಣಾನನಂಗಳಾಥೂ ।
ಸರಮಾಗಿರೆ ಮುಲ್ಲಿಕಾಕ್ಷ ನವಱುಂಗಳ್ ಕರ್ಪೊಂ ॥
ದಿರೆ ಧಾರ್ತರಾಷ್ಟ್ರನಾತಾ ।
ಮ್ರುರುಚಿಯ ದಾದಂದು ರಾಜಹಂಸನೆನಿಕ್ಕುಂ ॥ ೧೫ ॥

ವರಟಾ ವರಾಳನಾಮಿಕೆ ।
ಮುರಾಳಿವಧು ತದ್ವಿಲಾಸ ಕೇಳೀನಿಳಯಂ ॥
ಸರಸವನಕಮಳಿನೀವನ ।
ವಿರಾಜಿತಂ ಮಾನಸಂ ಸರೋವರಮಕ್ಕುಂ ॥ ೧೦ ॥

ಕ್ರಕರ ಕಪಿಂಜಳೆ ತಿತ್ತಿರಿ ।
ಚಕೋರ ಹಾರೀತ ಕುರವ ಕಾರಂಡವ ಲಾ ॥
ವಕ ಜೀವಂಜೀವಕ ಶಾ ।
ರಿಕಾದಿಗಳ್ ವಿಹಗಜಾತಿಯಕ್ಕುಂ ಪಲವುಂ ॥ ೧೧ ॥

ಅಳಿ ಷಟ್ಪದಂ ಮಧುಪಂ ।
ಶಿಲೀಮುಖಂ ಮಧುಕರಾಹ್ವಯಂ ಭೃಂಗಂ ಪು ॥
ಪ್ಪಲಿಹಂ ಮಧುವ್ರತಂ ಚಂ ।
ಚರೀಕ ಮಿಂದಿಂದಿರಂ ದ್ವಿರೇಫಂ ಭ್ರಮರಂ ॥ ೧೨ ॥

ಚೀರೀ:ಝಿಲ್ಲೀಕಾ ಭೈಂ ।
ಗಾರೀಶಬ್ದಂ ಸಮಾನವಾಚ್ಯಂ ತದ್ಗಂ ॥
ಭೀರಾರಾವಂ ತಾಂ ಚೀ ।
ತ್ಕಾರಂ ಶಲಭಂ ಪತಂಗ ಮೆಂದಱಿಂಗಿವಱುಂಗಳ್ ॥ ೧೩ ॥

೯೦॥ ವಾನೇಯ ಮುಕ್ಷಿಕಾಭಿ ।
ಖ್ಯಾನಂ ದಂಶಂ ಪತಂಗಿ ಪತ್ರೆ ಯೆನಿಕ್ಕುಂ ॥
ಜೀನ ನೊಣಂ ಸರಘಾ ಹ್ವು ।
ದ್ರಾ ನಾಮುಂ ಜ್ಯೋತಿರಿಂಗಣಂ ಖದ್ಯೋತಂ ॥ ೬೪ ॥

ಇಂತು

—ಮೃಗಪಕ್ಷಿವರ್ಗಂ—

ನಮಸ್ಸಿದ್ಧೇಭ್ಯಃ

ಶ್ರೀ ವೀತರಾಗಾಯ ನಮಃ.

೧ ಅವಿಭಿನ್ನಾರ್ಥ ಕಾಂಡಂ. ೧೦ ಪುರಗೃಹೋಪಕರಣಾದಿ ವರ್ಗಂ.

* [ನೀವೃಜ್ಜನಪದ ದೇಶಮು ।
ಪಾವರ್ತನಮುಲ್ತೆ ನಾಡು ಕಂಪಣನಾಮುಂ ॥
ಆ ವಿಷಯಮೆನಿಪುದದಱಿಂಗಳ ।
ಗಾವುದು] ಕೃತವಾಸಮುದು ಜನಂ ಪ್ರಜೆ ಲೋಕಂ ॥

ಕಂ॥ ಗ್ರಾಮಂ ಸಂವಸಥಾಖ್ಯಂ ।
ಗ್ರಾವಿಣಂ ಗ್ರಾಮ್ಯ ನೆನಿಸುಗುಂ ತತ್ಪ್ರಭವಂ ॥
ಗ್ರಾಮಾಂತಿಕ ಮುಪಶಲ್ಯಂ ।
ಗ್ರಾಮಾಂತರ ಮವಧಿ ಸೀಮೆ ಸೀಮಾಘಾಟಂ ॥ ೧ ॥

ಅಯನಂ ಮಾರ್ಗಂ ಸೃತಿ ಸರ ।
ಣಿ ಯಧ್ವ ಮೇಕಪದಿ ಪದವಿ ಪದ್ಧತಿ ಪಂಥಂ ॥
ಪಯಣಂಬೋಪಾತಂ ಮಾ ।
ರ್ಗಯಾಯಿ ತಾಂ ಪಥಿಕ ನಧ್ವನೀನಂ ಪಾಂಥಂ ॥ ೨ ॥

ಮುನಿಜನ ನಿವಾಸ ಮಾಶ್ರಮು ।
ಮೆನಿಕ್ಕು ಮಾಭೀರಪಲ್ಲಿ ಘೋಷ ಮದಕ್ಕುಂ ॥
ವನಮಧ್ಯಗತಂ ಶಬರೋ ।
ಪನಿಚಿತ ಮದು ಪಕ್ಕಣಂ ಪುಳಿಂದಸ್ಥಾನಂ ॥ ೩ ॥

---

* ಈ ಕಂದಭಾಗ ಮಾತ್ರವಿದೆ—ಪದ್ಯ ಸಂಖ್ಯೆಯಾದರೋ.—ಸೀಮಾಘಾಟಂ ಎಂಬಲ್ಲಿ ೧ ಎಂದಿದೆ. ಈ ಅರ್ಥ ಪದ್ಯಕ್ಕೆ ಸಂಖ್ಯೆಯೂ ಇಲ್ಲ. ಆದುದರಿಂದ ಹಲವು ಗ್ರಂಥ ನಿಘಂಟುವನ್ನನುಸರಿಸಿ ಈ ಕಂದವನ್ನು ಸೇರಿಸಿದೆ.

ಸ್ರ॥ ಗ್ರಾಮಂ ವೃತ್ಯಾವೃತಾಂತಂ ಪುರಮುಚಿತಚತುರ್ಗೋಪುರಾಟ್ಟಾಳಸಾಳಂ।
ಗ್ರಾಮಂಗಳ್ತಾಮವೈನೂಱುರ ತಲೆ ಯೆನೆ ಸಂದಿರ್ದುದಕ್ಕುಂ ಮಡಂಬಂ ॥
ಭೂವಿಖ್ಯಾತ್ರಂ ಸುತ್ತುಗೊಂಡೆತ್ತಲುಮಿರೆ ಪುದುವಿಂ ಕರ್ಬಡಂ ಸಿಂಧುಶೈಲೋ।
ದ್ಭಾವಾಖ್ಯಂ ಖೇಡ ಮಾದಂದಱಿಗೆ ವಿಬುಧರಿರ್ದನ್ತದಂ ಬಾಡ ಮೆಂಬರ್ ॥

ಕಂ॥ ಜನನಾಥಸ್ಥಾನಂ ಶಿಬಿ।
ರನಿವೇಶಂ..... ಪ ॥
ತ್ತನ ನಿಗಮ ನಗರ ಪುಟಭೇ।
ದನ ನಗರೀ ಪೂಃ ಸಮಾಹ್ವಯಂ ಪುರಮಕ್ಕುಂ ॥ ೪ ॥

ಪರಿಖಾಭಿಖ್ಯಂ ಖೇಯಂ।
ಪರಿಧಿ ಪ್ರಾಕಾರ ವಪ್ರನಾಮಂ ಸಾಳಂ ॥
ಪರಿಕೂಟಂ ಹಸ್ತಿನಖಂ।
ಪುರಗೋಪುರ ಮಕ್ಕು [ಮಟ್ಟ] ಮಟ್ಟಾಳಾಖ್ಯಂ ॥ ೬ ॥

ಪುರಮಧ್ಯದೊಳೊದವಿದ ಬೀ।
ದಿ ರಥ್ಯೆ ವಿಶಿಖಾಹ್ವಯಂ ಪ್ರತೋಳೀಮುಖ ನಿ ॥
ಸ್ಸರಣಂ ಚತುಷ್ಪಥಂ ಚ।
ತ್ವರಮಕ್ಕುಂ ವಿಪಣಿ ಪಣ್ಯವೀಥೀನಾಮಂ ॥ ೭ ॥

ಭವನಂ ಸದನಂ ಸದ್ಮಂ।
ನಿವಾಸ ಮಾವಸಥ ಮಾಸ್ಪದಂ ನಿಳಯಂ ವೇ ॥
ಶ್ಮ ವಗಾರಂ ಶರಣಂ ಗೇ।
ಹ ವಾಲಯಂ ಕುಟಿ ನಿಕೇತನಂ ಗೃಹ ಮುಟಜಂ ॥ ೮ ॥

ಗುಣನಿಲಯಂ ದೂಷ್ಯಂ ಕಾ।
ವಣಮಂತೆದು ಕಾಯವಮಾನ ಮೆಂಬುದೆನಿಕ್ಕುಂ ॥
ತೃಣಕುಟಿ ವುಲ್ಲುಡಿ ಕೃತರ।
ಕ್ಷಣವಿಧಿ ನೆಱಿತಿ ಯಪ್ಪುದಱಿಗೆ ಕಾರಾಗಾರಂ ॥ ೯ ॥

ಕಂ॥ ಗೃಹಭೂಮಿ ವಾಸ್ತುಸಂಜ್ಞಂ ।
ಗೃಹಾಜಿರಂ ಪ್ರಾಂಗಣಂ ಗೃಹೋಪಗತಾವ ॥
ಗ್ರಹಿಣಿಯೆ ದೇಹಳಿ ಯಂತ ।
ರ್ಗೃಹ [ಮುಪವರಕಂ] ಗೃಹೈಕದೇಶಂ ಪ್ರಘಣಂ ॥ ೧೦ ॥

ಭವನಾಂತರ ಕುಡ್ಯಂ ಭಿ ।
ತ್ತಿ ವಿತರ್ದಿ ವೇದಿಕಾಸವಮಾಖ್ಯಾನಂ ಸ್ತಂ ॥
ಭ ವದು ಸ್ಥೂಣಾಖ್ಯಂ ಬಾ ।
ದವಣಂ ವಾತಾಯನಂ ಗವಾಕ್ಷಂ ಜಾಳಂ ॥ ೧೧ ॥

ದ್ವಾರಂ ದ್ವಾರ್ವಲಜಂ ಪ್ರತಿ ।
ಹಾರಂ [ಪ್ರಚ್ಛನ್ನಮಂತದಂ]ತದ್ವಾರಂ ॥
ದ್ವಾರಾರ್ಗಳಮದು ಪರಿಘಂ ।
ದ್ವಾರಪಿಧಾನಂ ಕವಾಟ ಮುಗುಟಿ ಯೆನಿಕ್ಕುಂ ॥ ೧೨ ॥

ದೇವಾಲಯ ಮಾಯತನಂ ।
ದೇವನರಾಧಿಪನಿಕೇತನಂ ಪ್ರಾಸಾದಂ ॥
ತಾವುಟಿದ ನೆಲೆಯ ಸೌಧಗೃ ।
ಹಾವಳಿಗಳ್ ಹರ್ಮ್ಯವೆಂಬಿವಕ್ಕುಂ ಕ್ರಮದಿಂ ॥೧೩ ॥

* ಉಪ॥ ವೃ॥ ನೃಪಾಲಯಾಂತರ್ಗತಕಹ್ಲೆ ಕೋಷ್ಠಂ ।
ನೋಪಾನ ಮಾರೋಹಣ ಮೆಂಬುದಕ್ಕುಂ ॥
ಕಪೋತಪಾಲ್ಯಂ [ಮೆಱಿಗುಂ ವಿಟಂಕಂ ।
ಗೋಪಾನಸೀ ನಾಮವೆಂ ಲೋವೆಗಕ್ಕುಂ] ॥ ೧೪ ॥

ಕಂ॥ ಪೊದಯಿಸಿ ದಾಚ್ಛಾದನಮುಂ ।
ಛದಿಯುಂ ಪಟಲಮು ಮೆನಿಪ್ಪುದಱಿಗೆ ವಳೀಕಂ ॥
ಛದಿಪರ್ಯಂತಂ ನೆಮ್ಮಿ ।
ರ್ಪ್ಪುದು ತಾನದು ಮತ್ತವಾರಣಂ ಗಿರಿರೋಹಂ? ॥ ೧೫ ॥

* (ಉಪಜಾತಿವೃತ್ತಂ—ಇಂದ್ರವಜ್ರೋಪೇಂದ್ರವಜ್ರವೃತ್ತಸಂಕಲಿತಂ)

ಉ॥ ದ್ವಾರದ ಮೇಲೆ ಪಾಂಗಲಿಂದಮರ್ಚಿದ ದಾರು ವದುತ್ತರಂಗ ವಾ ।
ದ್ವಾರದ ಮುಂದೆ ಸಂಧಿಸಿರೆ ಕಟ್ಟಿದ ವಂದನವಾಲೆ ತೋರಣಂ ॥
ದ್ವಾರದ ಪಕ್ಷಭಾಗದೊ [ಳೊಡಂ] ಬಡೆ ಮಾಡಿದುದಲ್ಲಿ ಪಕ್ಷಕ ।
ದ್ವಾರ ಮುಮರ್ಕೆವೆತ್ತೆಸೆದು ತೋರ್ಪ ತವಂಗ ಮದಿಂದ್ರಕೋಶಕಂ ॥ ೧೬ ॥

ಕಂ॥ ನೃಪತಿನಿಕೇತ ಸ್ಥಾನಕ ।
ಮುಪಕಾರ್ಯಮು ಮಂತದಕ್ಕು ಮುಪಕಾರಿಕೆಯುಂ ॥
ವಿಪುಳಮಣಿಕನಕರಜತ ।
ಪ್ರಪಂಚಸಂಭಾರಸಂಭೃತಂ ಕೋಶಗೃಹಂ ॥ ೧೭ ॥

ಅಂತಃಪುರಮೆನಿಕುಂ ಶು ।
ದ್ಧಾಂತಂ ರಾಜ್ಞೀನಿವಾಸಮವರೋಧಂ ಮ ॥
ತ್ತಂತದು ಶಯನಗೃಹಂ ಪ್ರಭು ।
ಣಾಂತರದೊಳ್ ವಾಸಭವನ ಮೆನೆ ಪೆಸರ್ವಡೆಗುಂ ॥ ೧೮ ॥

ರಸವತಿ ಮಹಾನಸಂ ಬಾ ।
ಣಸಿನ ಗೃಹಂ ಮಂಟಪಂ ಜನಾಶ್ರಯ ಮಸ್ತ್ರ ॥
ಪ್ರಸರಾಗಾರಂ ತಾಂ ಜಯ ।
ನಶಾಲೆ ಕಾರುಗಳೆ ಕರ್ಮಗೃಹ ಮನುವಾಸಂ ॥ ೧೯ ॥

ಅಕ್ಕರಂ॥
ಯತಿಕುಟೀರಕ ಮದು ಪರ್ಣಶಾಲೆ ದಲ್ ಮಂದುರಂ ತುರಂಗಮಶಾಲೆ ।
ಕ್ರಿತಹಟ್ಟ ಮಾಪಣಂ ಪಣ್ಯ ವಿಕ್ರಯಶಾಲೆ[ಯಾ]ವೇಶನಾಹ್ವಯಂ ಶಿಲ್ಪಶಾಲೆ॥
ಪ್ರತಿದೇಶಿಕಾಶ್ರಯಂ ಸತ್ರ್ರಶಾಲೆ ಪ್ರಪೆ ಯೆಂಬುದಲ್ಲಿಗೆ ಪಾನೀಯಶಾಲೆ ।
ಸತತಂ ವಿದ್ಯಾರ್ಥಿಜನೋಚಿತಾಸ್ಪದಮಕ್ಕುಂ ಮಠಂ ಶಾಸ್ತ್ರಶಾಲೆ ॥ ೨೦ ॥

ಕಂ॥ ಪರಿಬರ್ಹಂ [ಪರಿವಾರಂ] ।
ಪರಿಚ್ಛದಂ ಪರಿಕರಂ ಪರಿಸ್ಪಂದಂ ಬಿ ॥
ತ್ತರಿಸುವ ಗೃಹೋಪಕರಣಂ ।
ತ್ಕರ ಮವಕರ ಸಂಕರಾಖ್ಯಮದು ಮನೆಯ ಕಸಂ ॥ ೨೧ ॥

ಕಂ॥ ಶಯನೀಯಂ ಪರ್ಯಂಕಂ ।
ಶಯನಂ ಶಯ್ಯಾಖ್ಯೆ ವಮುತ ಮಾಸ್ತರಣ ಕುಥಾ ॥
ಹ್ವಯವಮುಲೊಲ್ಲೋಚಂ ಚಂದ್ರೋ ।
ದಯಂ ವಿತಾನಾ(ಹ್ವಯ)ಮೆ(ನಲದು) ಮೇಲ್ಕಟ್ಟುಂ ॥ ೨೦ ॥

ಉಪಧಾನ ಮುದುಚ್ಛೀರ್ಷಕ ।
ಮುಪಬರ್ಹಂ ಪ್ರಚ್ಛದಕ್ಕುಪಚ್ಛದ ನಾವುಂ ॥
ಅಪಟೀ ಪ್ರತಿಸೀರಾ ಕಾಂ ।
ಪಟಿ ತಿರಸ್ಕರಿಣಿಕಾಖ್ಯೆ ಜವನಿಕೆಯಕ್ಕುಂ ॥ ೨೧ ॥

ಆದರ್ಶಂ ಮುಕುರ (ಮೆನ ।
ದೆಲ್ಕಾ) ದರ್ಪಣ ಮುಱಿಗೆ ತಾಳೆವ್ಯಂತಂ ವ್ಯಜನಂ ॥
ಪಾದತ್ರಾಣ ಮುಪಾನತ್ ।
[ಪಾದುಕೆ] ತಾನಂತದನುಪದೀ[ನಾ] ನಾವುಂ ॥ ೨೪ ॥

ಆಸಂದಿ ವಿಷ್ವರಂ ವೇ ।
ತ್ರಾಸನಕಂ ಪೀಠವಾಸನಂ ಪೆಸರಿಂ ಭ ॥
ದ್ರಾಸನ ಮೆನೆ ಹೈಮಂ ರಾ ।
ಜಾಸನ ಮುದು ಮುನಿಜನಾಸನಂ ಬ್ರುಸಿಯಕ್ಕುಂ ॥ ೨೫ ॥

ಪಾತ್ರಂ ಭಾಂಡಂ ಸ್ಥಾಲಿ ಯ ।
ಮತ್ರಂ ಭಾಜನ ಮೆನಿಕ್ಕುಮಂತೆ ನಮುಸಾ ॥
ಮತ್ರವು ದಾವಪನಂ ಮಧು ।
ಪಾತ್ರಂ ಚಷಕಂ ಪತದ್ಗ್ರಹಾಖ್ಯಂ ಪಡಿಗಂ ॥ ೨೬ ॥

ಪೇಳಿಕೆಯದು ಮಂಜೂಷೆ ಕು ।
ಶೂಳಂ ಕುದಿರಱಿಗೆ ಶೂರ್ಪಕಂ ಪ್ರಸ್ಫೋಟಂ ॥
ಚಾಳನಿ ಯೆನೆ ಶಾರಣಿಕಂ ।
ಡೋಳಂ ಪಿಟಕಂ ಕಟಂ ಕಿಳಿಂಜಕ ಮಕ್ಕುಂ ॥ ೨೭ ॥

ಕಂ॥ ಮಂಗಳಕುಂಭಂ ಪೂರ್ಣಘ ।
ಟಂ ಗುಂಡಿಗೆ ಗುಂದಿಗಾಖ್ಯೆ ಕನಕಾಳುಗೆ ತಾಂ ॥
ಭೃಂಗಾರು ಹಸಂತಿಕೆ ಮು ।
ತ್ತಂಗಾರ ಶಕಟಿ(ಕೆ)ಯದು ಹಸಂತಿಯು ಮೆನಿಕುಂ ॥ ೦೯ ॥

ಕರಕಂ ಗಳೆಂತಿಕಾ ಕ ।
ರ್ಕರೀ ಸಮಾಹ್ವಂ ಘಟಂ ಕುಟಂ ಕಳಶ ಮುಳಿಂ ॥
ಜರ ಮೆನಿ ಪಡೆಗುಂ ಮಣಿಕಂ ।
ಶರಾವ ಮದು ವರ್ಧಮಾನಕಂ ತಾನಕ್ಕುಂ ॥ ೦೮ ॥

ಅ.ವೃ॥ ಮುಶ್ಲಿಕಾಖ್ಯಂ ಕಾಶಿಕೆ ಪಿಠರಕಂ ತಾನುಖಾ ಸ್ಥಾಳಿ ಕುಂಡ ನಾಮು ।
ಮುಲ್ಲಸದ್ದಂತಾದಿಸಾರದ್ಯವ್ಯಂಗಳೆ ಭಾಜನಮದು ಸಮುದ್ಗಕ ಮೆನಿಕುಂ ॥
ಗಲ್ಲಟಕಾಹ್ವಯಂ ಕಾವಲಿಯದು ಜಿರೀಷಾಭಿಧಾನಂ ಭಾಷ್ಪವಂಬರೀಷಂ ।
ಚುಲ್ಲಿ ಯಶ್ಮಂತ ಮುತ್ಥಾನ ಮಂತಿಕೆ ಯೆನೆ ಯಧಿಶ್ರಯಣಿ ಯೆನಿಪ್ಪುದಕ್ಕುಂ
॥ ೩೦ ॥

ಕಂ॥ ಮುಂಥಣಿ ಗರ್ಗರಿ ಕಡೆಗೋಲ್ ।
ಮುಂಥಾನಂ ಮುಂತು ವಂತದಕ್ಕುಂ ಖಜಕಂ ॥
ಕಂಥೆ ಕವುಂದಿ ಕೃಶಾನುವಿ ।
ಮುಂಥನಕಾಷ್ಠ ಮುಮುದರಣಿಯೆನೆ ಪೆಸರ್ವಡೆಗುಂ ॥ ೩೧ ॥

ಮುಸಳ ಮುಯೋಗ್ರ ಮೊರಲ್ಗಂ ।
ಪೆಸರಕ್ಕು ಮುಳೊಖಳಂ ಕಟಾಹಂ ಕುಂಡಂ ॥
ಕಸಕಿ[ಲೆನ]ಲ್ ಸಮ್ಮಾರ್ಜನಿ ।
ಯಸುವೆ ಶಿಖಾಪಟ್ಟಕಾಭಿಧಾನ ಮನಾಳ್ಗಂ ॥ ೩೨ ॥

ವುದಿದೆನೆದಿಪ್ಪಿಳೆಯ ಸೊಡರ್ ।
ಪ್ರದೀಪಕಂ ಕೇಶವಾರ್ಜನಂ ಕಂಕತ ಮುಂ ॥
ತದು ಕಂಬಿ ತದ್ರು ತಾಂ ದ ।
ರ್ವಿ ದಾರುಹಸ್ತಕ ಮೆನಿವ್ಪುದದು ಖಜಿಕಾಖ್ಯಂ ॥ ೩೩ ॥

ಕಂ॥ ವಿವಧಂ ವೀವಧ ಮೆನಿಕುಂ ।
ಸು ವಿಹಂಗಿಕೆ ಭಾರಯಷ್ಟಿ ಗಕ್ಕುಂ ನಾವುಂ ॥
ಪ್ರವಿಲಂಬಿ (ತದವಿಹಂಗಿಕೆ) ।
ಪ್ರವಿಲಗ್ನಂ ನೆಲವು ಕಾಚವುಂ[ತದು] ಶಿಕ್ಯಂ ॥ ೩೪ ॥

ವ್ಯಗಬಂಧಿನಿ ವಾಗುರಿ ಬಲೆ ।
ಬಗೆಗಾನಾಯುಂ ಕುವೇಣಿ ಬಡಿಶಂ ಜಾಳಂ ॥
ಖಗಬಂಧಂ [ಪಾಶಂ]ತಂ ।
ತ್ರಿ ಗುಣಂ [ವಟಿಕೂಪ] ಯುಂತ್ರ ಮುನ್ಮಾದಾಂಕಂ ॥ ೩೫ ॥

ಕರಪತ್ರಂ ಕ್ರಕಚಾಖ್ಯಂ ।
ಕರಕಸಮುದು ವಾಸಿ ತಕ್ಷಣೀನಾವುಂ ಕ ॥
ತ್ವರಿ ತಾಂ ಕೃಪಾಣಿ ದೃಷದವ ।
ಧರಣಿ ಪೆಸಗೊರ್ಳುವ್ವದಂತದಕ್ಕುಂ ಟಂಕಂ ॥ ೩೬ ॥

ಆವಿಕೆ ಚರ್ಮ ವಿಭೇದಿಕೆ ।
ಬೇವಂತದು ಮಾರವೆಂಬುದಕ್ಕುಂ ಪ್ರತಿಭಸವ್ರೈ ॥
ದೀವಿವಿರೋಪಾಖ್ಯಂ ನ ।
ದ್ಧಿ ವದ್ಧಿ ಸಂಜ್ಞೆಯುದು ವರತ್ರೈ ಯೆನಿಕ್ಕುಂ ॥ ೩೭ ॥

ಚೇಲಶಿಲಾದಿ ಕೃತಂ ಪಾಂ ।
ಚಾಳಿಕೆ ತಾನಕ್ಕುವೆಸೆವ ಪುತ್ರಿಕೆ ಲೀಲಾಂ ॥
ದೋಳಂ ಪ್ರಖ್ಯಾತಂ ಚಾಂ ।
ಡಾಳಿಕೆ ಚಂಡಾಳವಲ್ಲಕೀಪರ್ಯಾಯಂ ॥ ೩೮ ॥

ಇಂತು

—ಪ್ರಗೃಹೋಪ ಕರಣಾದಿವರ್ಗಂ—

ನಮಸಿದ್ಧೇಭ್ಯಃ

ಶ್ರೀ ವೀತರಾಗಾಯನಮಃ.

ಕಂ॥ ನೃ ನರ ಮನುಜನ್ಮ ಮಾನವ ।
ಮನುಷ್ಯ ಪಂಚಜನ ಮರ್ತ್ಯ ಸಂಜ್ಞಂ ಪುರುಷಂ ॥
ವನಿತೆ ವಧು ನಾರಿ ಸೀಮ ।
ನ್ತಿನಿ ಯೋಷಿದ್ವಾಮೆ ಕೇವಳಂ ಸ್ತ್ರೀನಾಮಂ ॥ ೧ ॥

ಪ್ರಮದೆ ನಿತಂಬಿನಿ ಭಾಮಿನಿ ।
ರಮಣಿ ವರಾರೋಹೆ ರಾಮೆ ವಾವಾಕ್ಷಿ ಮನೋ ॥
ರಮೆ ಲಲನೆ ಕಾನ್ತೆ ಎಂದಿ ।
ನ್ತು ಮುತ್ತಮಬಲಾವಿಶೇಷ [ಮುಂ ತಾಮ]ಕ್ಕುಂ ॥ ೨ ॥

ಸಹಚರಿ ಭಾರ್ಯೆ ಕುಟುಂಬಿನಿ ।
ಸಹಧರ್ಮಿಣಿ ಪತ್ನಿ ಜಾಯೆ ದಾರಂ ಕ್ಷೇತ್ರಂ ॥
ಮಹಿಳೆ ಪುರಂಧ್ರಿ ಕಳತ್ರಂ ।
ಗೃಹಿಣಿ ಗೃಹಂ ಸಜ್ಜನಕ್ಕೆ ಪೆಸರಿಂತಿನಿಸುಂ ॥ ೩ ॥

ಕುಲವಧು ಸಾಧ್ವಿ ಪತಿವ್ರತೆ ।
ಕುಲಪಾಳಿಕೆ ಸತಿ ಚರಿತ್ರವತಿಯಕ್ಕುಂ ಪುಂ ॥
ಶ್ಚಲಿ ಕುಲಟೆ ಯಸತಿ ಕುಲಪಾಂ ।
ಸುಳೆ ಖಂಧಕಿ ಜಾಱುತಿ ಪಾಣ್ಬೆ ಯಿತ್ವರಿಕೆ ಯವಳ್ ॥ ೪ ॥

ಪ್ರಿಯತಮೆ ಸುಭಗೆ ವಿಳಾಸಿನಿ ।
ದಯಿತೆ ಮನಃಪ್ರೀತೆ ರುಚಿರೆ ವಲ್ಲಭೆ ತಾಂ ಹೃ ॥
ತ್ಪ್ರಿಯೆ ಯಕ್ಕುಂ ನಯನ [ಮನಃ] ।
ಪ್ರಿಯೆ ಸುಂದರಿ ಸುತನು ರೂಪವತಿ ಯೆನೆ ಪಡೆಗುಂ ॥ ೫ ॥

ಮು॥ ಕೃತಸಾ ಪತ್ನಿಕೆಯಪ್ಪ ... ... ಧಿವಿನ್ನಾಖ್ಯೆ ನಿ ।
ಪ್ಪತಿ ವುತ್ತ್ರಾಂಗನೆ ತಾನವೀರೆ ಪತಿ (ವತ್ನೀ) ನಾಮೆ ದಲ್ ಭರ್ತೃ ಸಂ॥
ಯುತೆ ಕಾತ್ಯಾಯನಿ ಯರ್ಧವೃದ್ಧೆ ಪುನರೂಢಾಸ್ತ್ರೀ ಪುನರ್ಭೂಸವಾ ।
ಖ್ಯೆ ಕರಂ ದ್ವ್ಯೋಹಿತೆಯುಂ ವಧೂಟೆ ಯೆನಿಕುಂ(ತಾಂ) ಪ್ರೌಢ ತತ್ವೋಕ್ತಿಯಿಂ ॥ ೬ ॥

ಕಂ॥ ದಾರಿಕೆ ಲಂಜಿಕೆ ಪಣವಧು ।
ವಾರಾಂಗನೆ ಗಣಿಕೆ ವೇಶ್ಯೆ ಯೆನೆ ಬೆಲೆವೆಣ್ ಸಂ ॥
ಚಾರಿಕೆ ತಾಂ ದೂದವಿ ಯಭಿ ।
ಸಾರಿಕೆ ಸಂಕೇತನಕ್ಕೆ ಪೋಪವಳಕ್ಕುಂ ॥ ೭ ॥

ಗಳತ್ರುಗಾಳೆ ? ಚಿತ್ತ್ರಂ ।
ಗೊಳಲೆನಿತುಂ ಬಲ್ಲಳೆನಿಪವಳ್ ಕುಂಟಣಿ ಶಂ ॥
ಫಳಿ [ಚುಂಡೀ] ಯೆನೆ ನೆಗಟ್ಟ್ಗಂ ।
ಕೆಳದಿಯೊಳಾಳೀ ಸಖೀವಯಸ್ಯಾ ಶಬ್ದಂ ॥ ೮ ॥

*ಪರವೇಶ್ಮಸ್ಥಿತೆ ಘುಟ್ಟಿವಳ್ತಿ ಪೆಸರಿಂ ಸೈರಂಧ್ರಿ ಯಂತಃ ಪುರಾ ।
ಚರಿಯೆಂಬಳೀಕ್ಷಣಿಕೆ ಮುಗ್ಧಾಭೀಹ್ಲೆಸ್ಯವಾನಪ್ಪವಳ್ ॥
* * * * ॥ ೯ ॥

ಕನ್ನಿ ಕುವಾರಿಕೆ ಕನ್ನಿಕೆ ।
ತಾನ್ನಗ್ನಿಕೆ ಗೌರಿ ಯೆಂಬಳಕ್ಕುವುವಳ್ ಸಂ ॥
ಪನ್ನ ಋತು ವಾಗದನ್ನಂ ।
ಮುನ್ನಂ ಕುಡಲಾದವಳ್ ಪತಿಂವರೆ ಯೆನಿಕುಂ ॥ ೧೦ ॥

ಉಪಯಾಮು ವಿವಾಹೋದ್ವಾ ।
ಹಪರಿಣಯಂ ಪಾಣಿಪೀಡನಕ್ಕ್ರಿಯ್ಯೆ ವರಂ ॥
ಗುಪಯಂತೃ ವಲ್ಲಭಂ ಭ ।
ರ್ತೃ ಪತಿಪ್ರಿಯ ನೆನಿಪುದಱಿಗೆ (ಮನ್ತ್ರ) ಭಿಧಾನಂ ॥ ೧೧ ॥

* ಎಂಬ ಅಶುದ್ಧವಾದ ಈ ಅರ್ಧಪದ್ಯವಾತ್ರವಿದೆ. ಗ್ರಂಥವು ನಿರಂತರವಾಗಿ ಬರೆದಿದೆ.

ಕಂ॥ ನಿಧುವನ ರತ ಯೂಭ ಗ್ರಾ ।
ಮ್ಯಧರ್ಮನಾಮುಂ ವ್ಯವಾಯ ಮದು ಮೈಥುನಮುಂ ॥
ವಿಧವೆ ವಿಶಸ್ತ್ರೀ ಸುಪಾಸಿನಿ ।
ವಧೂಟಿ ಜೇಟೀಸವೂಖ್ಯೆ ದಾಸಿ ದಲಕ್ಕುಂ ॥ ೧೦ ॥

ಅವಿ ರಾತ್ರೆಯಿ ಮಲಿನಿಕೆ ಪು ।
ಪ್ಪವತಿ ರಜಸ್ವಲೆ ಯುದಕ್ಯೆ ಋತುಮತಿ ಮತ್ತಾ ॥
ರ್ತವಮದು ರಜಮೆಂದುಂ ಪು ।
ಪ್ಪವೆಂದು ಮವಿಭೇದ [ದಿಂದೆ ಪೇಟಿಲ್ಪ]ಡುಗುಂ ॥ ೧೨ ॥

ಗುರ್ವಿಣಿ ಧೃತಸತ್ವೆಯು ಮುಂ ।
ತರ್ವತ್ನಿ ಯೆನಿಪ್ಪೊಡಾಕೆ ಗರ್ಭಿಣಿ ಯೆನಿಕುಂ ॥
ಗರ್ಭಿಣಿಗಳಪ್ಪ ಕಾಮಿನಿ ।
ಯರ್ ಬಯಸುವ ಬಯಕೆ ದೋಹಲಂ ದೌಹೃದವುಂ ॥ ೧೪ ॥

ಗರ್ಭಂ ಭ್ರೂಣಂ ಪೆಸರೊಳ್ ।
ಗರ್ಭಾಶಯ ಮದು ಜರಾಯುಜಂ ಜನನಂ ಪೆರ್ರ್ ॥
ದುರ್ಭವನಂ ವಟು ಮಾಣವ ।
ಕಾರ್ಭಕಬಾಳಂ ಸ್ತನಂಧಯಾಖ್ಯಂ ಡಿಂಬಂ ॥ ೧೫ ॥

ಸೂತಿಕೆ ಜಾತಾಪತ್ಯೆ ವಿ ।
ಜಾತೆ ವಿಶಲ್ಯಾಭಿಧಾನೆ ತಾನೆನಿಕುಂ ತ ॥
ತ್ಸೂತಿನಿಕಾಯಮುರಿಪ್ಪ ನಿ ।
ಕೇತಾಖ್ಯಂ ಸೂತಿಮಾಸವದು ಮೈಜನನಂ ॥ ೧೬ ॥

ವೃ॥ ಜನನಿ ಸವಿತ್ರಿ ಮಾತೃ ಸುಪು ತಾಯ್ ಜನಕಂ ಪಿತೃವಪ್ಪ ತಂದೆ ನಂ ।
ದನ ತನುಜನ್ಮ ತೋಕ ಸುತ ಪುತ್ರ ತನೂಭವ ಸೂನು ನಾಮುಕಂ ॥
ತನಯನದಲ್ಲಿ ಪೆಣ್ ದುಹಿತೃ ನಂದನೆ ಪುತ್ರಿ ತನೂಜೆ ಸೂತಿ ತಾ ।
ನೆನಿಕು ಮಪತ್ಯಶಬ್ದಮದು ಕೇವಲಮಾತ್ಮಜವರ್ಗವಾಚಕಂ ॥ ೧೭ ॥

ಕಂ॥ ಸೋದರ್ಯಂ ಭ್ರಾತೃ ಸಮೂ ।
ನೋದರ್ಯಂ ಸೋದರಂ ಸಗರ್ಭ್ಯಂ ಪೆಣ್ಗಾ ॥
ನಾದಂದು ಸ್ವಸೃ ಸಹಜೆ ಸ ।
ಹೋದರಿ ಸಹಜಾತೆ ಭಗಿನಿ ಯೆನೆ ಪೆಸ[ರಕ್ಕುಂ] ॥ ೧೪ ॥

ಅನುಜಂ ಕನೀಯ ನವರಜ ।
ನನುಜನ್ಮಂ ತಮ್ಮ ನಗ್ರಜಂ ಜ್ಯೇಷ್ಠಂ ಜ್ಯಾ ॥
ಯ ನೆನಿಕ್ಕು ಮವರ್ಗೆ ಸವತಿಯ ।
ತನಯಂ ನಾಪತ್ನ್ಯ ನಂತವಂ ದಾಯೋದ್ಯಂ ॥ ೧೫ ॥

ಪಿತೃವಿನೊಡಹುಟ್ಟಿದಾತಂ ।
ಪಿತೃವ್ಯ ನಂಬಿಕೆಯ ಸೋದರಂ ಮಾತುಲಕಂ ॥
ಸತಿಯ ಸಹಜಾತ ನಕ್ಕುಂ ।
ಪ್ರ[ತೀ]ತಿಯಿಂ ಸ್ಯಾಲನಾವುನುಂ ದೇವರನುಂ ॥ ೧೦ ॥

ತಂದೆಯ ತಂದೆ ಪಿತಾಮಹ ।
ನೆಂದಱಿವುದು ತಾಯ ತಂದೆ ಮಾತಾಮಹನೆಂ ॥
ಬೊಂದೆಭುವರ್ಗಳೆ..... ।
ತಂದೆಗಮಕ್ಕುಂ ಪ್ರಕರ್ಷದಿಂದೆ ... ನಾಮುಂ ॥ ೧೧ ॥

ಮಗಳೆಮಗಂ ದೌಹಿತ್ರಂ ।
ಮಗನ ಮಗಂ ನಪ್ತ್ರ ಪೌತ್ರ ನೆನಿಕುಂ ಸ್ನುಷೆ ತಾಂ ॥
ಮಗನ ವಧು ಮಗಳೆ ವರನುಂ ।
ನೆಗಳ್ದುಂ ಜಾಮಾತೃವೆಂಬ ಸಂಜ್ಞಾಂತರದಿಂ ॥ ೧೨ ॥

ಭ್ರಾತೃಸುತಂ ಭ್ರಾತೃವ್ಯಂ ।
ಭ್ರಾತೃವಧೂ ಪ್ರತಿಕ? ಯೂತೃಗಳ್ ತಮ್ಮೊಳವರ್ ॥
ಭ್ರಾತೃವಧು ತಾಂ ಪ್ರಜಾವತಿ ।
ಮಾತುಳವಧು ಮಾತುಳಾನಿಯೆಕ್ಕುಂ ಪೆಸರಿಂ ॥ ೧೩ ॥

ಕಂ॥ ಸ್ವಸೃತನಯಂ ಸ್ವಸ್ರೀಯಂ ।
ಪಿಸರಿಂ ನಾದುನಿ ನನಾಂದೃ ನಂದಿನಿಯೆನಿಕುಂ ॥
ಶ್ವಶುರಶ್ವಶ್ರೂನಾವುವ ।
ದೆನೆಗುಂ ಕೂಸಿತ್ತವೂವನೊಳವುತ್ತೆಯೊಳಂ ॥ ೨೪ ॥

ಉಪವೂತೃ ಧಾತ್ರಿ ತತ್ಪು ।
ತ್ರಿ ಪೇಟಿ ಧಾತ್ರೇಯಿಯುಂ ಭುಜಿಷ್ಯೆಯು ಮಕ್ಕುಂ ॥
ಉಪಪತಿ ಜಾರ ನವಂಗಲಿ ।
ಯೆ ವುಟ್ಟಿದಂ ಜಾರಜಾತ ನಾತಂ ಕುಂಡಂ ॥ ೨೫ ॥

ಉಪಗತವುಂವೇಷದ ಯೋ ।
ಷೆ ಪೋಟಿ ಕೂಟದಾಸಿ ಬೋಟಿ ಯೆನಿಕುಂ ಕ್ಲೀಬ ॥
ವ್ಯಪದೇಶಂ ವರ್ಷವರಂ ।
ನವುಂಸಕಂ ಪೇಡಿ ಷಂಡಕಂ ತಾಂ ಷಂಡಂ ॥ ೨೬ ॥

ನವವಯಸಂ ತರುಣಂ ಯುವ ।
ನವ[ಂವ]ಯಸ್ಥ [ನೆನೆ]ಯೂತಯೂವಮಂ ವೃದ್ಧಂ ॥
ಸ್ಥವಿರಂ ತಾಂ ವರ್ಷೀಯಂ ।
ಪ್ರವಯಂ ಜೀರ್ಣಂ ಜರಾರ್ದಿತಂ ದಶವಿಾಸ್ಥಂ ॥ ೨೭ ॥

ಬಂಧು ಸನಾಭಿ ಸಗೋತ್ರಂ ।
ಬಾಂಧವ ನಾತ್ಮೀಯ ನೆನಿಸುಗುಂ ಜ್ಞಾತಿ ಯವಂ ॥
ಬಂಧುಸಮೂಹಂ ಕೃತ ಸಂ ।
ಬಂಧಂ ಬಂಧುತೆ ನಿಜಾಪ್ತವರ್ಗಂ ನಂಟರ್ ॥ ೨೮ ॥

ಸಂತತಿ ವಂಶಂ ಗೋತ್ರಂ ।
ಸಂತಾನಂ ಜನನ ಮನ್ವವಾಯಂ ಕುಲ ಮಿಂ ॥
ನಂತವಲಿಸೊಳ್ ಜನಿಯಿಸಿದಾ ।
ತಂ ತಾಂ ಸ್ವಜನಂ ಸ್ವಬಂಧು ವನ್ಯಂ ಕುಲ್ಯಂ ॥ ೨೯ ॥

ಕಂ॥ ಕ್ಷಿತಿಯೊಳ್‌ವರ್ತಿಸುಗುಂ ಕ್ರಮ ।
ಗತಿಯಿಂದಂ ಬ್ರಾಹ್ಮಣಾದಿ ವರ್ಣಂ ನಾಲ್ಕುಂ ॥
ಚತುರಾಶ್ರಮಮುಮುಂ ಶ್ರುತಿಬೋ (ಚೋ ।
ದಿ) ಧಿತೋಕ್ತಿಯಿಂ ಬ್ರಹ್ಮಚಾರಿ ಮೊದಲೆನೆ ನೆಗಟ್ಟುಂ ॥ ೩೦ ॥

ಸಲೆ ಭೈಕ್ಷ ವಶನ ಮಜಿನಂ ।
ಪಲಾಶದಂಡಂ ಜಟಾಳಿ ಕೌಪೀನಂ ಮೇ ॥
ಖಳೆ ಯೆಂಬಿಂತಿವೆ ಪೇಟ್ಟುದ್ದಾ ।
ತ್ಮಲಿಂಗದೊಳ್ ಬ್ರಹ್ಮಚಾರಿ ವರ್ಣಿ ಯೆನಿಕ್ಕುಂ ॥ ೩೧ ॥

ದೇವಾತಿಥಿ ಪಿತೃಪೂಜಕ ।
ನಾವಿರ್ಭೂತ ಸ್ವಕೀಯ ಕರ್ಮಾಜೀವಂ ॥
ಪಾವನಚರಿತಂ ಸಕಲಗು ।
ಣಾವಸಥಂ ಗೃಹಸ್ಥ ನಂತವನಕ್ಕುಂ ॥ ೩೨ ॥

ಯತಿ ಸಂಯಮಿ ಋಷಿ ಮುನಿ ಸು ।
ಶ್ರುತ ನಾತಂ ಸಾಧು ಯೋಗಿ ತಾಪಸ ನಾತಂ ॥
ವ್ರತಿ ಯಕ್ಕುಂ ಮೌಖಂ ದೀ ।
ಕ್ಷಿತ ನನ್ತೇವಾಸಿ ಶಿಷ್ಯ ನೆನಿಕುಂ ಭಾತ್ರಂ ॥ ೩೩ ॥

ವಾನಪ್ರಸ್ಥ ನವಂ ವೈ ।
ಖಾನಸ ನೆಂದೀಗೆ ಭಿಕ್ಷು ಕರ್ಮಂದಿ ಯವಂ ॥
ಪೀನಂ ಪಾರಿವ್ರಾಜಂ ।
ತಾನಕ್ಕುಂ ಸರ್ವಲಿಂಗ ಮದು ಪಾಷಂಡಂ ॥ ೩೪ ॥

ಆಚಮನ ಮುಪಸ್ಪರ್ಶಂ ।
ಶೌಚಂ ಬಹಿರಾತ್ಮಶುದ್ಧಿ ಜಪ ಮುಳುಮುರ್ಪಂ ॥
ವಾಚಂಯಮವಿಧಿ (ಮೌನ) ಮು ।
ಪಾಚರಣಂ ಪರ್ಯುಪಾಸ್ತಿ ಶುಶ್ರೂಷಾಖ್ಯಂ ॥ ೩೫ ॥

ಕಂ॥ ಪರ್ಯಂಕಂ ಪರಿಕರ ಮೆನೆ ।
ಪರ್ಯಸ್ತಿಕೆ ನಿತ್ಯಕರ್ಮ ಮದು ಯಮು ಮುಕ್ಕುಂ ॥
ಪರ್ಯಟನಂ ತಾನೀಯರ್ಘಾ ।
ಚರ್ಯಾರ್ಥಂ ಪರಿಮಿತವ್ರತಸ್ಥಿತಿನಿಯಮಂ ॥ ೩೬ ॥

ದ್ವಿಜ ವಿಪ್ರ ಭೂಮಿದೇವಾ ।
ಗ್ರಜನ್ಮ ಬಾಡವ ಸವಾಹ್ವಯಂ ಬ್ರಾಹ್ಮಣ ನಾ ॥
ದ್ವಿಜರೊಳಗೆ ಜಾತಿಮಾತ್ರೋ ।
ಪಜೀವಿಯುಂ ಬ್ರಾಹ್ಮಣವ್ರತಂ ತಾವೆಂಬರ್ ॥ ೩೭ ॥

ಅತ್ತವ್ರತ ಸಂಸ್ಕಾರ ನಿ ।
ವರ್ತಿತ ನವಕೀರ್ಣನುಂ ನಿರಾತ್ಮನು ಮುಕ್ಕುಂ ॥
ವೃತಾಧ್ಯಯನಂಗಳ ಸಂ ।
ಪತ್ತಿಬಲಂ ಬ್ರಹ್ಮವರ್ಚಸಂ ತಾನಕ್ಕುಂ ॥ ೩೮ ॥

ವೇದಂಗಳನಿತಱಿಂಗಳೊಳ ಮಿವ ।
ನೋದಾಳಿ ಯೆನಿಪ್ಪನಱಿ ಗನೂಚಾನ ನವಂ ॥
ವೇದದೊಳೊಂದನಿಸಿರ್ದೊಡ ।
ಪೋದಿನ ಮಾತಿಲ್ಲದಂ ನಿರಾಕೃತಿ ಯಕ್ಕುಂ ॥ ೩೯ ॥

ಯಜನಾದಿ ಕರ್ಮನಿರತಂ ।
ದ್ವಿಜೋತ್ತಮಂ ಶ್ರೋತ್ರಿಯಂ..... ॥
..... ।
..... ॥ ೪೦ ॥

[ಕ್ರತು] ಯಾಗ ಮಧ್ವರಂ ಸ ।
ಪ್ತತಂತು ಸತ್ರಂ ಮಖಂ ಸವಂ ಯಜ್ಞಂ ಸಂ ॥
ಸ್ಕೃತಭೂಮಿ ವೇದಿ ವಹ್ನಿ ।
ತ್ರಿತಯಂ ತ್ರೇತಾಗ್ನಿ ಗಾರ್ಹಪತ್ಯಪ್ರಮುಖಂ ॥ ೪೧ ॥

ಕಂ॥ ಹವಿ ಸಾನ್ನಾಯ್ಯಂ ಚರು ಹ ।
ವ್ಯವಾಹನೊಳು ವಿಧಿಹುತಂ ವಷಟ್ಕೃತ ಮುಕ್ಕುಂ ॥
ಸವ ನಿರ್ವರ್ತನ ಮುವಭೃಥ ।
ಸವನಂ ವಿಶ್ರಾಣನಂ ವಿತರಣಂ ದಾನಂ ॥ ೪೦ ॥

ಇಷ್ಟಂ ಯಾಗಾರ್ಥದೊಳು ।
ತ್ಕೃಷ್ಟಂ ಪೂರ್ತಂ ವದನ್ಯ? ಹೇತುವಿಕೀರ್ಣಂ ॥
ಇಷ್ಟಾಪೂರ್ತಂಗಳವು ।
ತ್ಕೃಷ್ಟಶ್ರೇಯೋನಿಮಿತ್ತ ಮುಕ್ಕುಮುವೆರಡುಂ ॥ ೪೨ ॥

ಪಿತೃದಾನ ಮುದು ನಿವಾಪಂ ।
ಪ್ರತಿನಿಯತಂ ಶಾಸ್ತ್ರವಿಹಿತಕರ್ಮಂ [ಶ್ರಾದ್ಧಂ] ॥
ಪಿತೃಸವನ ಮುಪಸ್ನಾತಂ ।
ಮೃತದಿನದೊಳ್‌ಮಾಲಿಪ್ಪದೌರ್ಧ್ವದೈಹಿಕ ಮುಕ್ಕುಂ ॥ ೪೪ ॥

ಪ್ರೇತಂ ಮೃತಂ ಪರಾಸು ಪ ।
ರೇತಂ ಮೃತಿ ಮೃತ್ಯು ಮರಣ ವೆನೆ ಪಂಚತ್ವಂ ॥
ಏತಾಸು ಶವಂ ಕುಣಪಂ ।
ಪ್ರೇತವನಂ [ಮೃತ ವನಂ] ಶ್ಮಶಾನ ಮುದಕ್ಕುಂ ॥ ೪೫ ॥

ಪರಲೋಕಮುಱುಗೆ ಲೋಕಾಂ ।
ತರ ಮುಕ್ಕುಂ ದೇವಭೂಮಿ ಯದು ದೇವತ್ವಂ ॥
ಪುರುಷಾರ್ಥಂ ವರ್ಗತ್ರಯ ।
ಪರಿಕಲ್ಪಿತ ಮಪ್ಪ ಧರ್ಮಕಾಮಾರ್ಥಂಗಳ್‌ ॥ ೪೬ ॥

ಅವನೀಪತಿ ರಾಜಂ ಪಾ ।
ರ್ಥಿವಂ ನೃಪಂ ಕ್ಷತ್ರಿಯಂ ಜನಾಧಿಪ ನರಸಂ ॥
ಭುವನೈಕವಲ್ಲಭಂ ಚ ।
ಕ್ರವರ್ತಿ ಮೂರ್ಧಾಭಿಷಿಕ್ತ ನವನಧಿರಾಜಂ ॥ ೪೭ ॥

ಕಂ॥ ಅರಸಂ ಪೆರ್ಗಡೆ ಜನಪದ ।
ವರಿದೆನಿಸುವ ಕೋಟಿ ಕೋಶ ಮಾಯತ್ತಂ ಬಂ ॥
ಧುರವೃತ್ತಮಿತ್ರ ನೆಂದಿಂ ।
ತು ರಾಜ್ಯಮಕ್ಕುಂ ವಿಚಾರಿಸಲ್ ಸಪ್ತಾಂಗಂ ॥ ೪೮ ॥

ಭಟ್ಟಿನಿಯರ್ ನೃಪಸತಿಯರ್ ।
ಪಟ್ಟಮಹಾದೇವಿ ಯಗ್ರಮಹಿಷಿ ಯೆನಿಕ್ಕುಂ ॥
ಪಟ್ಟಕ್ರಮಕ್ಕೆ ಮುನ್ನಂ ।
ಪಟ್ಟದ ನೃಪತನಯನನ್ತವಂ ಯುವರಾಜಂ ॥ ೪೯ ॥

ನರಪತಿ(ಯ) ಬುದ್ಧಿಸಚಿವಂ ।
ಪರಿಚಿತ ನಯಶಾಸ್ತ್ರ ನಪ್ಪವಂ ಮಂತ್ರಿ ಮಹೋ ॥
ದ್ಧುರಭಾರಕ್ಷಮ ಮುಪಧಾ ।
ಪರಿಶುದ್ಧಂ ಕರ್ಮಸಚಿವ ನಕ್ಕು ಮಮಾತ್ಯಂ ॥ ೫೦ ॥

ರಸಿಕಂ ಕೇಳಿಕರಂ ನ ।
ರ್ಮಸಚಿವ ನಧ್ಯಕ್ಷೆ ನಧಿಕೃತಂ ಪ್ರಿಯೆಯೊಳ್ ॥
ಪೆಸರಿಂ ಪ್ರಕೃತಿ ಯೆನಿಕುಂ ।
ರಸವತಿ ಮೊದಲಾಗೆ ಪೆಱಿವುಮಧಿಕಾರಂಗಳ್ ॥ ೫೧ ॥

ಉಪೇಂದ್ರ ॥ ಆರಾಳಿಕಂ ಪಲ್ಲವಸೂದ ಸೂಪ ।
ಕಾರಾಹ್ವಯಂ ಬಾಣಸಿಗಂ ವಿಧಿಜ್ಞಂ ॥
ಪೌರೋಗವಂ ಸೂಪ ಮಹಾನಸಾಧಿ ।
ಕಾರಸ್ಥಿತಂ ಭಕ್ತಿಗುಣಾನುರಕ್ತಂ ॥ ೫೨ ॥

ಕಂ॥ ಅಂತಃಪುರದೊಳೆ[ಗ]ಧಿಕೃತ ।
ನಂತರ್ವಂಶಿಕ ನೆನಿಪ್ಪನಕ್ಕುಂ ಸ್ಥಾಪ ॥
ತ್ಯಂ ತಾಂ ಕಂಚುಕಿ ದಲ್ ಬಗೆ ।
ಗಂತಾತನೆ ಸೌವಿದಲ್ಲನುಂ ಸೌವಿದನುಂ ॥ ೫೩ ॥

ಕಂ॥ ಸೇನಾನಿ ವಾಹಿನೀಪತಿ ।
ತಾನಕ್ಕುಂ ಪಡೆವಳಿಂ ಪ್ರಶಾಂತ ಹಿತಾನು ॥
ಷ್ಠಾನರತಂ ಕೃತಶಾಂತಿವಿ ।
ಧಾನಂ ಸೌವಸ್ತಿಕಂ ಪುರೋಹಿತ ನಾತಂ ॥ ೪೪ ॥

ದ್ವಾರನಿಯುಕ್ತಂ ತಾಂ ಪ್ರತಿ ।
ಹಾರಂ ದೌವಾರಪಾಳಕಂ ದ್ವಾರ್ಥಂ ದೌ ॥
ವಾರಿಕ ನೆನೆ ಪಡಿಯಜಿ ನಾ ।
ವಾರವಿದಂ ನ್ಯಾಯದೃಗ್ವಿವಾಕಂ ಸ್ಥೇಯಂ ॥ ೪೫ ॥

ಕಾರ್ತಾಂತಿಕಂ... ।
ಹೂರ್ತಿಕ ದೈವಜ್ಞನಾ ದಿಕ್ಗಣಕಂತಾನಕ್ಕುಂ ॥
.....ಮೌ ।
ಹೂರ್ತಿಕ ಜ್ಯೋತಿಷ.....ತಂತ್ರಜ್ಞಂ ? ॥ ೪೬ ॥

ಗೋವಿಂದಂ ಗೋಧಿಕೃತಂ ।
ಗೋವಂ ನಿಯತಾಧಿಕಾರ ನಜಿಗಾಯುಕ್ತಂ ॥
ಸೇವಕನನುಚರ(ನವ)ನುಪ ।
ಜೀವಿನರಂ ಕಿಂಕರಂ ಭುಜಿಷ್ಯಂ ದಾಸಂ ॥ ೪೭ ॥

ಆ ಸೇವೆ ಯುಪಾಸನೆ ವಿ ।
ಶ್ವಾಸಂ ವಿಸ್ರಂಭ ನಾಮು ಮುವ್ಯಭಿಚಾರಂ ॥
ಶಾಸನ ಮಾಜ್ಞೆಯು ಮಾದೇಶಂ ।
ಶಾಸನಹರ ನಜಿಗೆ ಲೇಖವಾಹಂ ದೂತಂ ॥ ೪೮ ॥

ಅಪಸರ್ಪಂ ಚಾರಂ ಗೂ ।
ಢಪುರುಷಂ ಪ್ರಣಿಧಿ ಹೇರಿಕಂ ಸ್ಪಶ ನೆನಿಕುಂ ॥
ಲಿಪಿಕಾರಂ ಲೇಖಕನಾ ।
ಲಿಪಿಯುಂ ಲಿಭಿ[ವಿ]ಲಿಖಿತಾಕ್ಷರಾಳಿನ್ಯಾಸಂ ॥ ೪೯ ॥

ಕಂ॥ ಉಪಧಾ ಪ್ರಾಭೃತನಾಮಕ ।
ಮುಪಾಯನಂ ಬಲಿ ಕರಾಹ್ವಯಂ ಸಿದ್ಧಾಯಂ ॥
ಉಪದಾನಮು ಮುತ್ಕೋಚಮು ।
ಮುಪಚಾರಂ ಲಂಚ ಮೂಮಿಷಾಖ್ಯ ಮುದಕ್ಕುಂ ॥ ೬೦ ॥

ಅರಸು ನೃಪಲಕ್ಷ್ಮೀ ತಾನಾ ।
ಧಿರಾಜ್ಯ ಮೆನಿಕುಂ ನೃಪೇಂದ್ರಚಿಹ್ನಂ ಕಕುದಂ ॥
ಹರಿಪೀಠ ಮಾಸನಂ ಚಾ ।
ಮರಂ ಪ್ರಕೀರ್ಣಕ ಮುದಾತಪತ್ರಂ ಛತ್ರಂ ॥ ೬೧ ॥

ಊರುಭವಂ ಭೂಮಿಸ್ಪೃಶ ।
ನೂರವ್ಯಂ ವೈಶ್ಯ ನಯ್ಯ್ ನೆನೆ ಪರದ ನವಂ ॥
ಗಾರಂಬಂ ವಾಣಿಜ್ಯಂ ।
ಗೋರಕ್ಷಣ ಮೆಂಬ ವಾರ್ತ್ತೆ ಜೀವಿಕೆ ಯಕ್ಕುಂ ॥ ೬೨ ॥

ವಣಿಜಂ ವೈದೇಹಂ ಪಣ್ಯ ।
ಪಣಿಕಂ ಪಣ್ಯೌಕಜೀವಿ ವಾರ್ಧುಷಿಕಂ ದ್ವೈ ॥
ಗುಣಿಕಂ ವೃದ್ಧ್ಯಾಜೀವಂ ।
ರಿಣ ಮುಱೀಗದು ಪರ್ಯುದಂಚನಂ ತಾನಕ್ಕುಂ ॥೬೩ ॥

ಸತ್ಯಾನೃತ ಮದು ಪರದಪ ।
ಮಿತ್ಯಕ ಮುದ್ಧಾರ ಮರ್ಘವಿಕ್ರೀತಿ ಪರಾ ॥
ವೃತ್ಯಾಖ್ಯಂ ವಿನಿಮಯನಂ ।
ಸತ್ಯಂಕಾರಂ ಪಣಾರ್ಪಣಂ ಸಂಚಕರಂ ॥ ೬೪ ॥

ವೃದ್ಧಿ ಕಳಾಂತರ ಮಂತದು ।
ವೃದ್ಧಿಯಿ ನುಪಜೀವಿಸಿರ್ಪುದಱೀಗೆ ಕುಸೀದಂ ॥
ವೃದ್ಧಿ ವಿಭೂತಿ ಧನಾಶಾ ।
ವೃದ್ಧಿ ಧನಾಯಾಖ್ಯೆ ಧನಿ ಧನಾಧಿಕ ನಾಥ್ಯಂ ॥ ೬೫ ॥

ಕಂ॥ ಅಧಮರ್ಣಂ ದಾಸ್ಯಂ ದಾ ।
ತೃ ಧನಿಕ ನವನುತ್ತಮರ್ಣ ನಕ್ಕುಂ ಪೆಸಱಿಂ ॥
ದಧನಂ ದುರ್ಗತಿಕಂ ದು ।
ರ್ವಿಧ ನೆಂದಱಿಗಿಲ್ಲದಂ ದರಿದ್ರಂ ನಿಸ್ವಂ ॥ ೬೬ ॥

ಕೃಷಿಕಂ ಕ್ಷೇತ್ರಾಜೀವಂ ।
ಕೃಷೀವಳಂ ಕರ್ಷಕಂ ಕುಟುಂಬಿ ಯೆನಿಕ್ಕುಂ ॥
ಕೃಷಿ ತತ್ಕರ್ಮ ಮುದಕ್ಕುಂ ।
ವಿಷಯಂ ಕೇದಾರ ಭೂಮಿ ವಪ್ರಂ ಕ್ಷೇತ್ರಂ ॥ ೬೭ ॥

ಹಳೆ ಸೀರಾಭಿಖ್ಯಂ ಲಾಂ ।
ಗಲ ವಿಷಾಹ್ವಯ ಮುದೀಸು ಪಾಳಂ ಕುಶಿರಂ ॥
ಹಳಪದ್ಧತಿ ಸೀತಾಖ್ಯಂ ।
ಕಳೋತ್ಪಳಂ ಮೇಥಿ ಮೇಥಿ ದಾಮವಿರಾಮಂ ॥ ೬೮ ॥

ದಾತ್ರಂ ಲವಿತ್ರ ಮುಱಿಗೆ ಖ ।
ನಿತ್ರಂ ಕುದಾ್ದಲ ಮದುವೆ ಗೋದಾರಣಕಂ ॥
ತೋತ್ರಂ ಪ್ರಾಜನ ಮಕ್ಕುಂ ।
ಯೋತ್ರ ಮುದಾಬಂಧಯೋಕ್ತ್ರ ರಶ್ಮಿ ಸವಾಖ್ಯಂ ॥ ೬೯ ॥

ಕೃಷ್ಟಂ ಕ್ಷೇತ್ರಂ ಸೀತ್ಯಂ ।
ಲೋಷ್ಟಂ ಲೋಷ್ಟಕಸವಾಹ್ವಯಂ ಕೋಟೀಶಂ ॥
ಲೋಷ್ಟವಿಭೇದನ ಮದು ನಿ ।
ಸ್ವಷ್ಟಂ ಶಂಬಾಕೃತಂ ದ್ವಿಸೀತ್ಯ ವೆನಿಕ್ಕುಂ ॥ ೭೦ ॥

ಯಜನಾಧ್ಯಯನಂ ದಾನಂ ।
ನಿಜವಾಗಿರೆ ನೃಪವಣಿಕ್ಕುಲಕ್ಕಂ ಸಲ್ಗುಂ ॥
ದ್ವಿಜನಾವಮುಂ ವಿಕ್ರಾ ತು ।
ರ್ಯಜಾತಿ ತಾಂ ವೃಷ [ಲ ನಂತ್ಯ]ವರ್ಣಂ ಶೂದ್ರಂ ॥ ೭೧ ॥

ಕಂ॥ ಭೃತಿ ವೇತನೆ ಮೂಲ್ಯಂ ಬೆಲೆ ।
ಭೃತಕಂ ವೈತನಿಕ ನಲಿಗೆ ಕರ್ಮಕರಂ ಪ್ರಾ ॥
ಕೃತ ನಪಶದಂ ಪೃಥಗ್ಜನ ।
ನಿತರಂ ಪಶಮರ ನೆನಿಪ್ಪ ನಕ್ಕುಂ ಜಾಲ್ಮಂ ॥ ೨೦ ॥

ಪ್ರಕೃತಿಜನಂ ಶಿಲ್ಪಿಗಳಲಿ ।
ಗೆ ಕಾರುಗಳೆ ತಾವೆನಿಪ್ಪರನ್ತವಲಿಶೊಳ್ ವ ॥
ರ್ಧಕಿ ದಲ್ ರಥಕಾರಂ ತ್ವ ।
ಷ್ಟ್ರ ಕಾಷ್ಟತಟ್ ತಕ್ಷ್ಣಕಾಭಿಧಾನ ವೆನಿಕ್ಕುಂ ॥ ೨೩ ॥

ಮಾಳಿಕಾರಂ (ಮಾಲಿ) ಕು ।
ಲಾಲಾಖ್ಯಂ ಚಕ್ರಿ ಕುಂಭಕಾರ ನವಂ ಶೈ ॥
ಲಾಲಿ ನಟಂ ತಾಂ ಭರತಂ ।
ಶೈಲೂಷಾಹ್ವಂ ಕೃಶಾಶ್ವಿ ಜಾಯಾಜೀವಂ ॥ ೨೪ ॥

ಪ್ರಕೃತಾನುಭಾವನತನ ।
ರ್ತಿಕೆ ಲಾಸಿಕೆ ಯೆಂಬಳೆಕ್ಕು ವೋದಿಸುವ ನಟಂ ॥
ಪ್ರಕಟಂ ಸ್ತ್ರೀವೇಷಧರಂ ।
ಭ್ರುಕುಂಸ ನೆನೆಯುಂ ಭ್ರುಕುಂಸ ನೆನೆಯುಂ ನೆಗಟಿಕ್ಕಂ ॥ ೨೫ ॥

ಜಾಲಿಕನೆನೆ ಕಾಪಟಿಕಂ ।
ನೀಲೀರಾಗಂ ದೃಢಾನುರಾಗಂ ಲಜ್ಜಾ ॥
ಶೀಲಂ ಲಜ್ಜಾಲು ಕರಂ ।
ಶಾಲೀನಂ ಶಾರದಾಖ್ಯ ನಕ್ಕು ಮಧೃಷ್ಟಂ ॥ ೨೬ ॥

ವೈತಾಳಿಕನಕ್ಕುಂ ಪ್ರಾ ।
ಭಾತಿಕ ನನ್ವವಾಯಶಂಸಿ ಮಾಗಧನಾತಂ ॥
ಸೂತಂ ವಂದಕ್ಕನಧಿಕಗು ।
ಣಾತಿಶಯಸ್ತುತಿವಿಶಾರದಂ ವಂದಿ ಯವಂ ॥ ೨೭ ॥

ಕಂ॥ ವೈತಾಳಿಕ ಪ್ರಬೋಧಕ ।
ಸೂತ ಸ್ತುತಿಪಾಠಕಾಖ್ಯೆ ವಂದಿಯೊಳಕ್ಕುಂ ॥
ದ್ಯೂತಕರ ನಕ್ಷಧೂರ್ತಂ ।
ದ್ಯೂತ ಮದಕ್ಷವತಿ ಲಗ್ನಕಂ ಸಹಿತಾಖ್ಯಂ ॥ ೭೪ ॥

ವೈಕಟಿಕಂ ಮಣಿಕಾರಂ ।
ವ್ಯೋಕಾರಂ ಲೋಹಕಾರ ನಸಿಧಾವುಕನಂ ॥
ತಾ ಕಮ್ಮಟಿ ನಸಗಂ·ತಾಂ ।
ಸ್ವೀಕೃತನಿರ್ದೀಜಕಾಭಿಧಾನಂ ರಜಕಂ ॥ ೭೫ ॥

ತ್ರಿಪದಿ॥ ಐರಣಿಕಂ ಕುರುಕುರುಕಾರಂ ತದಧ್ಯಕ್ಷಂ ।
ಭೌರಿಕ ನೆನಿಕುಂ ಕುಶೀಲವರ್ ।
ಚಾರಣ ರಪ್ಪರ್ ಪೆಸರಿಂದಂ ॥ ೮೦ ॥

ಕಂ॥ ಪರಿವೋಷಿ ದಸ್ಯು ಪಾಟ ।
ಚ್ಚರ ನೈಕಾಗಾರಿಕಂ ಪರಾಸ್ಕಂದಿ ಖಳಂ ॥
ಪರಿಪಂಥಿ ಚೋರಕಂ ತ ।
ಸ್ಕರಂ ಮಲಿವುಚ್ಚ ನೆನಿಪ್ಪನಕ್ಕುಂ ಸ್ತೇನಂ ॥ ೮೧ ॥

ಮತಿಗೆಡಿಸಿ ಛಿದ್ರಪಾತಂ ।
ಪ್ರತಾರಕಂ ಪಶ್ಯತೋಹರಂ ಕಡುಗಳ್ಳಂ ॥
ಪ್ರತಿರೋಧಕ * ನಾರಟಗೊ ।
ಳ್ವ ತಕ್ಕಿನವನಲೀಗೆ ಕಳವ ಚೌರ್ಯಂ ಸ್ತೇಯಂ ॥ ೮೨ ॥

ವೈವಧಿಕಂ ಪರಿಕಂತಂ ? ।
ಪಾವಡಿ ಗಹಿತುಂಡಿಕಾಖ್ಯ ನಕ್ಕುಂ ರಂಗಾ ॥
ಜೀವಂ ಚಿತ್ರಕರ ನಜಾ ।
ಜೀವ[ನ]ನಜಪಾಳಿ ಲೇಪಕಂ ಪಳಿಗಂಡಂ ॥ ೮೩ ॥

* ನಾಲಿಡಿಗೊಳ್ವ (ಎಂದಿರಬಹುದು).

ಕಂ॥ ಕ್ಷು*ರಿಮುಂಡಿ ನಾಪಿತಂ ಧೀ ।
ವರ ಜಾಳಿಕ ದಾಶನಾಮ ವಿಾಂಗುಲಿಗಂ ಶಾ ॥
ಬರ [ಚಾಪ] ಶರಕರಂ ವಾ ।
ಗುರಿಕಾಖ್ಯಂ ಮೃಗಯು ಲುಬ್ಧಕಂ ಬಿಯದ ನವಂ ॥ ೮೪ ॥

†ಕೌಟಿಕ ನಾಮಿಷಮಂ ಮಿಗೆ ।
ಪಾಟಿಸಿ ಮಾಱುತ್ತಮಿಪ್ಪ ವೈತಂಸಿಕ ನಾ ॥
ಬೇಟನ ಮೃಗವ್ಯ ಮೃಗಯೋ ।
ಚ್ಚಾಟನ ಪಾಪರ್ದ್ಧಿರತ ನವಂ ಬೇಂಟಿಯವಂ ॥ ೮೫ ॥

ಶೌಂಡಿಕನೆನೆ ಕಳ್ಳ (ವಳಂ) ।
ಚಂಡಂ ನಾಗಾರಿಯೆಂದ [ಡೆ] ಂಡೆಯವಂ ವೈ ॥
ತಂಡಿಕನಱಿ ಕುಹಕತೆಯಂ ।
ಕೊಂಡಾಡುವ ನಿಂದ್ರಜಾಲಿಕಂ ತಾನಕ್ಕುಂ ॥ ೮೬ ॥

ತಂತುಗುಣಂ ಸೂತ್ರಂ ಮು ।
ತ್ತಂತೆ ಕುವಿಂದಾಖ್ಯೆ ತಂತುವಾಯಂಗಕ್ಕುಂ ॥
ಅಂತಾವಸಾಯಿ ಚಂಡಾ ।
ಳಂ ತಾಂ ಹೊಲೆಯಂ ಜನಂಗಮುಂ ಮಾತಂಗಂ ॥ ೮೭ ॥

ವನಚರ ಕಿರಾತ ಧಾನು ।
ಷ್ಕ ನಿಷಾದ ವುಲಿಂದ ಶಬರ ಭಿಲ್ಲಾಖ್ಯಂ ಬೇ ॥
ಡನವಂ ತಾನಕ್ಕುಂ ಶ್ವಪ ।
ಚ ನಿಷ್ಪವಾಳಾವಿಭೇದಕಂ ಮ್ಲೇಚ್ಛಕುಳಂ ॥ ೮೮ ॥

ಇಂತು

— ಮನುಷ್ಯಜಾತಿವರ್ಗಂ —

* ಕ್ಷುರಮರ್ದಿ (ಹಲಾಯುಧ). † ಕೌಳಿಕ (ಹಲಾಯುಧ).

ಶ್ರೀ ವೀತರಾಗಾಯನಮಃ.

ನಮಃಸಿದ್ಧೇಭ್ಯಃ.

ಕಂ॥ ತನು ಗಾತ್ರಂ ವಿಗ್ರಹ ಮುಪ ।
ಘನಂ ಶರೀರಂ ಕಳೇಬರಂ ಕಾಯಂ ಸಂ ॥
ಹನನಂ ದೇಹಂ ವಪು ಯೆಂ ।
ದಿನಿತುಂ ಭಾವಿಸುವೊಡಂಗಪರ್ಯಾಯಂಗಳ್ ॥ ೧ ॥

ಚರಣಂ ಕ್ರಮು ಮಂಘ್ರಿ ಪದಂ ।
ಬೆರಲಂಗುಳಿ ಪಾದತಳ ಮುದಡಿ ಯೆನೆ ಪಡೆಗುಂ ॥
ಪರಭಾಗಂ ಪಾರ್ಷ್ಣಿ ಮಡಂ ।
ಪರಡುಗ[ಳ]ವೆ ಗುಲ್ಫಘಂಟಿಕಾನಾಮಂಗಳ್ ॥ ೨ ॥

ಪ್ರಸೃತಾಖ್ಯೆ ಜಂಘೆ ತೊಡೆ ಯೂ ।
ರು ಸಕ್ಥಿ ಮೊಳಕಾಲ್ಗಳೆಂತ ವಪ್ಪೀವಂ ಜಾ ॥
ನು ಸವೂಹ್ವಂಗಳವೆನಿಕುಂ ।
ಪೆಸರಿಂ ಪಾದಾಗ್ರ ವಂತದಕ್ಕುಂ ಪ್ರಪದಂ ॥ ೩ ॥

ಸ್ರ॥ ವೃ॥ ಆರೋಹಂ ಶ್ರೋಣಿ ಕಾಂಚೀಪದ ಜಘನ ಕಟೀ ಸಂಜ್ಞೆಯಕ್ಕುಂ ನಿತಂಬ ।
ಕ್ರೂರುಶ್ರೋಣಿ[ದ್ವಯಾ]ಸಂಧಿಗಳೆರಡುಮವುಂ ವಂಕ್ಷಣಂ ಪಾಯು [ಗೂಢ] ॥
ದ್ವಾರಾಪಾನಂ ಗುದಂ ಮೇಢನ ಮುಲಿಗದೆ ದಲ್ ಶೇಫ ಶಿಶ್ನಾಹ್ವಯಂ ಸಂ ।
ನಾರಾಧ್ವಂ ತಾಂ ವರಾಂಗಂ ಸ್ಮರಸದನ ಮುಪಸ್ಥಂ ಭಗಂ ಯೋನಿ ನಾಮುಂ ॥ ೪ ॥

ಕಂ॥ ಕಟಿಕೀರ್ಮಂ ಸ್ಫಿಕ್‌ಪ್ರೋಥಂ ।
ಕಟಿಸ್ಥಿತಂ ಕೂಪಕಂ ಕುಕುಂದರ ಮೆರಡುಂ ॥
ಘಟತತ್ಪ್ರಸ್ಥಿಪದಂ ತ್ರಿಂ ।
ಕಟಾಹ್ವಯಂ ವೃಷಣ ಮಂತರಂಗಾಂಗ [ಮದುಂ] ॥ ೫ ॥

ಖಸಿಖುದರಂ ಜಠರಂ ಕು ।
ಕ್ಷಿಸಮಾಹ್ವಂ ನಾಭಿ ಪೊಕ್ಕುಳಿಂದಲಿವುದು ಕಿ ॥
ಬ್ಬಸಿಖಿದು ವಸ್ತಿ ಕೆಲಂ ಪಾ ।
ಶ್ವ್ವಸಂಜ್ಞಿಕಂ ಪಶ್ಚಿಮಾಂಗಭಾಗಂ [ಪೃಷ್ಠಂ] ॥ ೬ ॥

ಶಿಖರಿಣಿ॥ ಉರಂ ವತ್ಸಂ ವಕ್ಷಂ ಹೃದಯ ಮೊದೆ ಮುಯ್ವಂಸಯುಗಳಂ ।
ಕೊರಲ್ ಕಂಠ ಗ್ರೀವಾ ಗಳ ನಿಗರಳಂ ಕಂಧರವೆನಲ್ ॥
ಕರಂ ದೋ ರ್ಬಾಹ್ವಾಖ್ಯಂ ಭುಜೆ ಭುಜ ಮುವೇಕಾರ್ಥವಚನಂ ।
ಕರಾಗ್ರಂ ತಾಂ ಹಸ್ತಂ ಶಯಸಮುಭಿದಂ ಪಾಣಿ ಕರಮುಂ ॥ ೭ ॥

ಕಂ॥ ಕಕ್ಷೆ ಭುಜಮೂಲ ಮುಂತದು ।
ವಕ್ಷೋಂಸದ್ವಿತಯಸಂಧಿ ಜತ್ರು ವೆನಿಕ್ಕುಂ ॥
ವಕ್ಷೋಜ ಕುಚ ಸ್ತನ ಮುಪ ।
ಲಕ್ಷಿಸೆ ಮೊಲೆ ಮೊಲೆಯ ಕೊಟ್ಟು ಚೂಚುಕ ಮುಕ್ಕುಂ ॥ ೮ ॥

ಮಣಿಬಂಧನದಿಂದಂ ಕಿಱಿ ।
ಕುಣಿಕೆವರಂ ಕರಭ ಮೆಂಬುದಕ್ಕುಂ ಪೊಱಿಕೆಯ್ ॥
ಮಣಿಕಟ್ಟಿನ ಕೂರ್ಪರದೆಡೆ ।
ಯಣ ಮುಂಗೆಯ್ ತಾಂ ಪ್ರಕೋಷ್ಠ ನಾಮಮುದಕ್ಕುಂ ॥ ೯ ॥

ಕರಶಾಖೆಗಳೆಂಗುಳಿಗಳ್ ।
ಕರಜಂ ನಖರಂ ನಖಂ ಪುನರ್ಭವ ಮುಗುರ್ಗಳ್ ॥
ಕರಯುಗಸಂಪುಟ ಮಂಜಲಿ ।
ಕರಂ ನಿಕುಂಚಿತ ನಿಜಾಂಗುಳೀಕಂ ಪ್ರಸೃತಂ ॥ ೧೦ ॥

ಕಂ॥ ಅಂಗುಷ್ಮಂ ತರ್ಜನಿ ಮು ।
ಧ್ಯಾಂಗುಳಿ ಪೆಸರಿಲಿ ಕನಿಷ್ಠೆಯೆಂವಕ್ಕುಂ ನಾ ॥
ಮುಂಗಳ್ ಬೆರಳ್ಗೆ ತಱುದೆ ತ ।
ದಂಗುಳಿಗಳೊಳಾದ ಸಂಧಿ ಪರ್ವ ಮೆನಿಕ್ಕುಂ ॥ ೧೧ ।

ವಿಸ್ತೃತಾಂಗುಳಿ ಪಾಣಿ ತಳಂ ।
ಪೆಸರಿಂ ಪ್ರತಳಂ ಚಪೇಟವೆನೆ ಪಡುಗುಂ ನಂ ॥
ಧಿಸಿದಂಗುಳಿ ಯೆಂಬುದು ಮು ।
ಷ್ಟಿ ಸಪ್ರಕೋಷ್ಮಂ ಕರಾಗ್ರ ವಂತದು ಹಸ್ತಂ ॥ ೧೨ ॥

ಅಂಗುಷ್ಮಕ್ಕೆ ಕನಿಷ್ಠಿಕೆ ।
ಯಿಂ ಗೋಕರ್ಣಂ (ವಿ) ತಸ್ತಿ ಪೆಸರಿಲಿಯಿಂ ಮು ॥
ಧ್ಯಾಂಗುಳಿಯಿಂದಂ ತಾಳಿ ।
ಖ್ಯಂ ಗೇಣ್ ತರ್ಜನಿಯಿ ನಳೆಯೆ ತಾಂ ಪ್ರಾದೇಶಂ ॥ ೧೩ ॥

ವಂಶಸ್ಥಂ॥ ಅರತ್ನಿನಾಮುಂ ಸಕನಿಷ್ಠಕಂ ಮೊಲಿಂ ।
ಕರಾಗ್ರಬದ್ಧಾಂಜಳಿ ರತ್ನಿಸಂಜ್ಞಿಕಂ ॥
ಸಿರಕ್ಕೆ ಮೇಲೆತ್ತಿದ ಬಾಹು ಪೌರುಷಂ ।
ಕರದ್ವಯಂ ವ್ಯಾಮ ಮುತಿಪ್ರಸಾರಿತಂ ॥ ೧೪ ॥

ಅಕ್ಕರಂ॥ ವದನ ವಾನನ ವಾಸ್ಯಂ ಮುಖಂ ತುಂಡಂ ಲಪನಂ ವಕ್ತ್ರಂ ಪೊಗಕ್ಕೆ ನಾಮುಂ ದನ್ತಂ ।
ರದಂ ದಶನಂ ದ್ವಿಜಂ ನಾಲಗೆ ರಸನೆ ರಸಜ್ಞಾ ಜಿಹ್ವೆ ಕದಪು ಕೆಲ್ಲಂ ಕಪೋಳಂ ಗಂಡಸ್ಥಳಂ ದಂತ ।
ಚ್ಛದಾಹ್ವಯಾಧರ ವೋಷ್ಠ[ದಂತವಾಸಂ] ತದುಪಾಂತಮುಂ ।
ತದು ಸೃಕ್ವಾಭಿಧಾನ ಮುಧರದಧಸ್ಸ್ಥಳಂ ಚಿಬುಕ[ಮೆನಿಕುಂ]॥ ೧೫ ॥

ಕಂ॥ ಈಕ್ಷಣ ನಯನ ವಿಲೋಚನ ।
ಚಕ್ಷುರ್ನೇತ್ರಾಂಬಕಾಕ್ಷಿಗಳ್ ದೃಙ್ನಾಮಂ ॥
ವೀಕ್ಷಣಮಕ್ಕುಂ ದೃಷ್ಟಿಕ ।
ಟಾಕ್ಷಂ ಕೇಕರ ಮಪಾಂಗ ಮೆನಿಕುಂ ಕಡೆಗಣ್ ॥ ೧೬ ॥

ಜನಿತಾಶ್ರುಜಲಂ ಬಾಷ್ಪಂ ।
ಕನೀನಿಕಾನಾಮ ಮಕ್ಷಿತಾರಕ ಮಕ್ಕುಂ ॥
ಹನು ತಾಂ ಗಂಡಾಂತಂ ಮೂ ।
ಗು ನಾಸಿಕಾ ಘ್ರಾಣ ಸಿಂಘನೀ ಘೋಣಾಖ್ಯಂ ॥ ೧೭ ॥

ಶ್ರವಣಂ ಕರ್ಣಂ ಶ್ರೋತ್ರಂ ।
ಕಿವಿ ನಿಟಿಳಂ ಭಾಳ ಮುಳಿಕ ಮಱುಗೆ ಲಲಾಟಂ ॥
ಅವಟು ಕೃಕಾಟಿಕೆ ಘಾಟಾಹ್ವ ।
ಯವದಕ್ಕುಂ ಪುಬ್ಬುವಳ್ಳಿ ತಾಂ ಭ್ರೂನಾಮಂ ॥ ೧೮ ॥

ಮುನ್ನೋತ್ತಮಾಂಗ ಶೀರ್ಷಕ ।
ಮುಸ್ತಕ ಮೂರ್ಧಾ[ಭಿಧೇಯಮುಂ] ಮೌಳಿ ಶಿರಂ ॥
ಹಸ್ತಂ ಪಾಶಂ ಪಕ್ಷಂ ।
ಶಸ್ತಕಚಪ್ರಚಯವಾಚಕಂ ತತ್ಪರದೊಳ್ ॥ ೧೯ ॥

ಮು॥ ತಲೆರೋಮಂ ಚಿಕುರಂ ಕಚಂ ಶಿರಸಿಜಂ ಕೇಶಂ ಶಿರೋಜಂ ನವಿರ್ ।
ಪಲಿತಂ ಪಾಂಡರ ವಾದವಾಳವು(ವು)ದಂತಾ ಕುಂಚಿತಂ ಕುಂತಳಂ॥
ಅಳಕಂಗಳ್ ಕುರುಳೋಳಿಗಳ್ ಭ್ರಮುಕರಂ ಬಾಳಸ್ಥಿತಂ ನೀಳ್ಪ ಬೈ ।
ತಲೆ ಸೀಮಂತಸವಾಹ್ವಯಂ ಕಬರಿ ಧಮ್ಮಿಲ್ಲಂ ಕಜೋದ್ಬಂಧನಂ ॥

ಕಂ॥ ಬಾಳಕರ ಶಿಖಿ ಶಿಖಂಡಂ ।
ಜೂಳಾಖ್ಯಂ ಕಾಕಪಕ್ಷ ಮೆಂಬುವದಕ್ಕುಂ ॥
ಸ್ಥೂಳಾವನದ್ಧ ವೇಣೀ ।
ಜಾಳಂ ಮುನಿಜನದ ಜಟೆ ಜಟಾಹ್ವಯ ಮಕ್ಕುಂ ॥ ೨೧ ॥

ಕಂ॥ ರೋಮಂ ತನೂರುಹಂ ಮುಖ ।
ರೋಮಂ ಶ್ಮಶ್ರು ಕೂರ್ಚಕಂ ಹನುರೋಮಂ ॥
ರೋಮಾವಳಿ ಮಧ್ಯೋದ್ಭವ ।
ರೋಮಂ ತಾನಕ್ಷಿಗೆ ನಯನರೋಮಂ ಪಕ್ಷ್ಮಂ ॥ ೨೦ ॥

ಪರಿವಿಡಿಯಿಂದಂ ತ್ವಕ್ಚ ।
ಕ್ಷು ರಸನೆ ಕಿವಿ ಮೂಗಿ ಮೈದು ಮಕ್ಷಿಗೆ ಹೃಷೀಕಂ ॥
ಕರಣಂ ಖಮಿಂದ್ರಿಯ ಸ್ಪ ।
ರ್ಶ ರೂಪ ರಸ ಗಂಧ ಶಬ್ದ ವಿಷಯಪ್ರವರಂ ॥ ೨೧ ॥

ಐಂದ್ರಿಯಕಂ ಪ್ರತ್ಯಕ್ಷಮು ।
ತೀಂದ್ರಿಯಮಪ್ಪುದು ಪರೋಕ್ಷ ಮಕ್ಷಾದ್ಯಂ ಬು ॥
ದ್ಧೀಂದ್ರಿಯ ಮುಂತಯ್ದುಂ ಕ ।
ರ್ಮೇಂದ್ರಿಯ ವಾ(ಕ್ಪಾದ) ಪಾಣಿಪಾಯೂಪಸ್ಥಂ ॥ ೨೨ ॥

ಮನ ಮಾಶಯ ಮುಂತಃಕರ ।
ಣ ನಾಮಮುದೆ ಚಿತ್ತಮುಂತೆ ಚೇತಂ ಸ್ವಾಂತಂ ॥
ಮನದಿಡುವಟ್ಟಿಯೊಳೆ ವರ್ತಿಕು ।
ಮನಿತಿಂದ್ರಿಯ ಗಣಮುಮುದಕ್ಷಿಶೂಳಧಿಕೃತ ನಾತ್ಮಂ ॥ ೨೩ ॥

ವಾಯು ಸವಿಕಾರಂ ಪಿತ್ತಂ ।
ಮಾಯು ಕಫಂ ಶ್ಲೇಷ್ಮ ಮೆಂದೆನಿಕ್ಕುಂ ತತ್ತ್ರ ॥
ಯ್ಯಾಯತ್ತಂ ಬಹಿರಾತ್ಮಂ ।
ಕಾಯಂ ಪ್ರತ್ಯುಪ್ತಸಪ್ತಧಾತು ನಿಬದ್ಧಂ ॥ ೨೪ ॥

ಕ್ಷತಜಂ ರುಧಿರ ಮಸೃಕ್ಕೊ ।
ಹಿತ ಮಸ್ರಂ ಶೋಣಿತಾಖ್ಯಮೆಂಬುದು ರಕ್ತಂ ॥
ಕ್ಷತ ವಿಕಾರ್ಮಂ ವ್ರಣ ಮರು ತ ।
ದ್ಗತವಾದುದು ಪೊಲಸುನಾರ್ಪ ಗಂಧಂ ವಿಸ್ರಂ ॥ ೨೫ ॥

ಕಂ॥ ತ್ವಚ ಮಜಿನಾಸೃಗ್ಧರಿ ಕೃ ।
ತ್ತಿ ಚರ್ಮ ಮೆನಿ ತೋ(ಲ್‌ತ್ವಗಾ)ಹ್ವಯಂ ಸ್ನಾಯು ಸಿರಾ ॥
ಪ್ರಚಯಂ ವಸೆ ಮೇದಂ ವಪೆ ।
ವಿಚಾರಿಸಲ್ ಕರುಳೆದಾಂತ್ರವೂಲೆ ಪುರೀತಂ ॥ ೨೪ ॥

ಎಲು ವಸ್ಥಿ ಕೀಕಸಂ ಮೆ ।
ಯ್ಯೆಲು ವದು ಕಂಕಾಳ ಸಂಜ್ಞಕಂ (ದಲ್) ಕೆಯ್ಯಾ ॥
ಲೆಲುವುಗಳವೆ ನಳಕಂ ತಲೆ ।
ಯೆಲುವಜ್ಜಿಗೆ ಕರೋಟಿ [ಶಕಲವು]ಕ್ಕೆಕಪಾಲಂ ॥ ೨೫ ॥

ಪಲಲಂ ಪಿಶಿತಂ ಕ್ರವ್ಯಂ ।
ಪಲ ವಾಮಿಷ ವಡೆಗು ಜಾಂಗಲಾಖ್ಯಂ ವಾಂಸಂ ॥
ತಿಳಕಾಭಿಖ್ಯಂ ಕ್ಲೋಮಂ ।
ಬಳ ಮಿಂದ್ರಿಯ ಮುಂತೆ ಧಾತು ರೇತಂ ಶುಕ್ಲಂ ॥ ೨೦ ॥

ಶಮಲಂ ವರ್ಚಸ್ಕಂ ವ ।
ರ್ಚ ಮಮೇಧ್ಯ ಮುವಸ್ಕರಂ ಶಕೃದ್ಗೂಥಂ ವಿ ॥
ಷ್ಮೆ ಮುಳಂ ಪುರೀಷ ಮುಚ್ಚಾ ।
ರ ಮದಕ್ಕುಂ ಪ್ರಸ್ರವಾಭಿಧಾನಂ ಮೂತ್ರಂ ॥ ೨೧ ॥

ರೋಗಾತಂ (ಕಂ) ವ್ಯಾಧಿ ರು ।
ಜಾ ಗದ ಮುಪತಾಪನಾಮ ವಾಮಯಕಕ್ಕುಂ ॥
ರೋಗಾರ್ತ ನಾತುರಂ ತಾಂ ।
ರೋಗವಿನಿರ್ಮುಕ್ತ ನಪ್ಪನವನುಲಕ್ಷಣಂ ॥ ೨೨ ॥

ಅರುಜಂ ವಾರ್ತಂ ಕಲ್ಯಂ ।
ನಿರಾಮಯಂ ಪಟು ವೆನಿಪ್ಪ ನಾರೋಗ್ಯಮಯಂ ॥
ಜ್ವರ ಕುಷ್ಠ ಭಗಂಧರ ಮೇ ।
ಹರಾಜಯಶ್ಮಾದಿ ಭೇದಭಿನ್ನಂ ರೋಗಂ ॥ ೨೩ ॥

ಕಂ॥ ದವಥು ಪರೀತಾಪಂ ಶೋ ।
ಥವಿಕಾರಂ ಶ್ವಯಥು ವಮಥು ವಮನಂ [ಕಾಸಂ] ॥
ಕ್ಷವಥು ವದವಸಾದಂ ಕ್ಲಮು ।
ಥು ವೇಪನಂ ತಾನದಱಿಗೆ ವೇಪಥು ವೆನಿಕುಂ ॥ ೩೪ ॥

ಆನಾಹಮುದು ನಿಬಂಧಂ ।
ಪೀನಸ ಮೆನೆ ನೆಗಡಿ ತಾಂ ಪ್ರತಿಶ್ಯಾಯುಂ ಕ ॥
ಚ್ಛರ್ದಿನಾಮು ಮಱಿಗೆ ವಾಮಂ ।
ಸೀನ ಕ್ಕುಂ ಕ್ಷುತ್ಕ್ಷವಂ ಕಿಳಾಸಂ ಸಿಧ್ಮಂ ॥ ೩೫ ॥

ಮುಂಡಲ ಮುಕ್ಕುಂ ಕುಷ್ಮಂ ।
ಗಂಡೆ ನ್ಫೋಟಕ ಸಮಾಹ್ವಯುಂ ತಾಂ ಪಿಟಕಂ ॥
ಪಾಂಡುರ ಕುಷ್ಮಂ ಶ್ವಿತ್ರಂ ।
ಕಂಡೊ ಕಂಡೊತಿ ಖಜ್ಜುಗಳ್ ತಾನಕ್ಕುಂ ॥ ೩೬ ॥

ವಾತವ್ಯಾಧಿಪರೀತಂ ।
ವಾತಕಿ ವಿಕ್ಲಿನ್ನಚಕ್ಷು ಪಿಲ್ಲಂ ಶ್ಲೇಷ್ಮೋ ॥
ಪೇತಂ ಶ್ಲೇಷ್ಮಳೆ ನರ್ಶಾ ।
ನ್ವೀತ ನೆನಿಪ್ಪಾತ ನರ್ಶಸಂ ತಾ ನಕ್ಕುಂ ॥ ೩೭ ॥

ಖಳತಿ ಶಿಪಿವಿಷ್ಟ ನವನುದ ।
ರಿಳ ನಕ್ಕುಂ ತುಂದಿಳಂ ಕಿಲಾಸಯುತಂ ಸಿ ॥
ಷ್ಮಳೆನ [ಕ್ಕು]ಂ ಬುಗುಡೆಂ ತುಂ ।
ದಿಳ ನುಪಚಿತ ದದ್ರುರೋಗಿ ದದ್ರುಣ ನಾತಂ ॥ ೩೮ ॥

ವಿಕಲಾಂಗಂ ಪೋಗಂಡೆಂ ।
ಕುಕರಂ ಕುಣಿ ಪಂಗು ಪೆಟಿವ ನೆನಿಕುಂ ಖಂಜಂ ॥
ವಿಕೃತಾಂಘ್ರಿಯುತಂ ನತನಾ ।
ಸಿಕ ನವಟೀಟಂ ವ್ಯಪೇತನಾಸಂ ವಿಗ್ರಂ ॥ ೩೯ ॥

ಮು॥ಸ್ರ॥ಗಡುಳಿಂ ತಾಂ ಕುಬ್ಜ ನಲ್ಪಸ್ವತನುಪರಿಗತಂ ಪೃಶ್ನಿ [ಯೂತಂ] ಕಿರಾತಂ ।
ಜಡನಕ್ಕುಂ ಮೂಕ ನೇಡಂ ಬಧಿರನೆನಿಪವಂ ವಾಮನಂ ಖರ್ವಶಾಖಂ ॥
ಎಡಮೂಕಂ ವಾಕ್ಕು ಪ್ರತಿವ್ಯಾಪೃತಿವಿ [ರ]ಹಿತ ನಂಥಂ ಸಮನ್ತ್ಹಹೀನಂ ।
ನುಡಿಯಲ್ಕೇಳಲ್ಕಣಂ ಪೋಂಗಱಿಯದ ಕುಳಿಯಂ ಪೇಟಿಪ್ಪುದಾನೇಕಮೂಡಂ॥

ಕಂ॥ ಬಳವಂತಂ ಮಾಂಸಳ [ನಿ ।
ಬ್ಳ] ನೆನೆ ತಾಂ ಕ್ಷೀಣಮಾಂಸ.....॥
.....ನಧಿಕಲೋಮ ।
...ನುಪಜಾತಕಚ್ಚು ಪೋಮನ ನಕ್ಕುಂ ॥ ೪೧ ॥

ದೋಷಂ ಪ್ರತಿಕಾರಕ್ರಿಯೆ,।
ದೋಷಜ್ಞಂ ತಂತ್ರವೇದಿ ಬೆಜ್ಜಂ ವೈದ್ಯಂ ॥
ಭೇಷಜ ಮೌಷಧ ಮುಗದಂ ।
ಭೇಷಜ್ಯಂ ಜಾಯು ತಂ [ತ್ರ] ಮುನ್ತೀಕಾರ್ಥಂ ॥ ೪೨ ॥

ಇಂತು

—ದೇಹಾವಯವಾದಿವರ್ಗಂ—

ಶ್ರೀ ವೀತರಾಗಾಯನಮಃ.

—ನಮಸ್ಸಿದ್ಧೇಭ್ಯಃ—

ಕಂ॥ ಪ್ರತಿಕರ್ಮಂ ನೇಪಥ್ಯಂ ।
ಪ್ರತಿಸಂಸ್ಕಾರಂ ಪ್ರಸಾಧನಂ ವೇಷ ಮುಲಂ ॥
ಕೃತಿ ಮುಂಡನಂ ವಿಭೂಷಾ ।
ಪ್ರತಾನ ವಾಭರಣ ಮೆಂಬುವವು ತೊಡವಕ್ಕುಂ . ॥ ೧ ॥

ಮುಕುಟಂ ಕೋಟೀರಂ ಮೌ ।
ಳಿ ಕಿರೀಟಂ ತಾನೆನಿಕ್ಕು ಮುಷ್ಣೀಷಂ ಕ॥
ರ್ಣಿಕೆ ಕರ್ಣವೇಷ್ಟನಂ ಕ ।
ರ್ಣಕುಂಡಲಂ ತಾಳಪತ್ರಕಂ ತಾಟಂಕಂ ॥ ೨ ॥

ಗ್ರೀವಾಳಂಕೃತಿ ಯೆನಿಕುಂ ।
ಗ್ರೈವೇಯಕ ಮುಲಳುಮೌಕ್ತಿಕಾವಳಿ ಹಾರಂ ॥
ದೇವಚ್ಛಂದಂ ಯಷ್ಟಿಶ ।
ತಾವಚ್ಛಿನ್ನಂ ತದರ್ಧ ವದು ಮಾಣವಕಂ ॥ ೩ ॥

ಏಕಾವಳಿ ಸರಿಗೆ ಸುವ ।
ರ್ಣಾಕಳಿತಂ ಲಂಬಣಂ ಲಲಂತಿಕೆ ಮುಕ್ತಾ ॥
ನೀಕಂ ತ್ರಿ [ನವಯುತಂ ತಾ] ।
ರಾಕೃತಿ ನಕ್ಷತ್ರಮಾಲೆ ಯೆನಿಕುಂ ಪೆಸರಿಂ ॥ ೪ ॥

ಅಂಗದ ಮೆನೆ ಕೇಯೂರ ಮು ।
ದುಂಗುರ ಮೂರ್ಮಿಕೆಯು ಮುಂಗುಳೀಯಕ ಮಕ್ಕುಂ ॥
ಸಂಗತಲಿಖಿತಾಕ್ಷರಚಯ ।
ಮುಂಗುಳಿಮುದ್ರಿಕೆ ಯೆನಿಪ್ಪುದಕ್ಕುಂ ಪೆಸರಿಂ ॥ ೫ ॥

ಕಂ॥ ಕಂಕಣ ಮೂರ್ವಾಪಂ ವಳೆ ।
ಯಂ ಕಟಕಂ ಪಾರಿಹಾರ್ಯ್ಯ ನಾಮಂ ಹಸರ್ತ್ತ ॥
ಳಂಕೃತಿ ಮೇಖಳೆ ಕಟಿಸೂ ।
ತ್ರಂ ಕಾಂಚೀಕಳಾಪ ಸಪ್ತಕೀ ರಶನಾಖ್ಯಂ ॥ ೬ ॥

ಶಿಂಜಿನಿ ನೂಪುರ ಮುಂದುಗೆ ।
ಮುಂಜೀರಂ ಹಂಸಕಂ ತುಳಾಕೋಟಿ ಮನೋ ॥
ರಂಜನಮುಂಜುಳಮೃದುಕಳೆ ।
ಸಿಂಜಾನಕ್ಷುದ್ರಘುಂಟಿ ಕಿಂಕಿಣಿ ಯೆನಿಕುಂ ॥ ೭ ॥

ಸವನಂ ಮಜ್ಜನ [ಸವ] ಮೂ ।
ಪ್ಲವನಂ ಸ್ನಾನಮು ಮದಂತನರ್ಥಾಂತರ ಮುಂ ॥
ಗವಿಲೇಪನಂ ಸಮಾಲಂ ।
ಭ ವಿಪ್ಪ್ರಗಂಧಾಧಿವಾಸ ಮದು ಸಂಸ್ಕಾರಂ ॥ ೮ ॥

ತಿಳಕಂ ತವಮಾಲಪತ್ರಂ ।
ಲಲಾಟಿಕಾಖ್ಯಂ ಲಲಾಮಕಾದ್ಯಂ ಪತಾ್ರಂ ॥
ಗುಳಿ ಪತ್ರಲೇಖೆ ಚರ್ಚಾ ।
ನುಲೇಪನಂ ಸ್ಥಾಸಕಂ ಪ್ರಬೋಧನ ಮಕ್ಕುಂ ॥ ೯ ॥

ಘನಸಾರಂ ಪಾ್ರಲೇಯಮಾಂ ।
ಶುನಾಮಕಂ ಹಿಮು ಮೆನಿಪ್ಪುದದು ಕರ್ಪೂರಂ ॥
ಮನಮನೊಡಿಲ್ಲುವ ಕಸೂ ।
ರಿ ನಿಗಟ್ದಿ ಮೃಗನಾಭಿ ಮೃಗಮದಾಖ್ಯ ಮದಕ್ಕುಂ ॥ ೧೦ ॥

ಅಸೃಗಾಖ್ಯಂ ಕಾಶ್ಮೀರಂ ।
ಘುಸೃಣಂ ಕುಂಕುಮ ಮದೆಂಗೆ (ಜಾಪಕ) ಮಕ್ಕುಂ ॥
ಪೆಸರಿಂದ ಮಗುರು ಕಾಲಾ ।
ನುಸಾರ್ಯಕಂ ಜಾತಿಪತ್ರ ಮದು ಕಾಳೇಯಂ ॥ ೧೧ ॥

ಕಂ॥ ಅಗುರು ಹಿಮಂ ತಕ್ಕೋಲಂ ।
ಮೃಗಮದ ಮಿವು ಕೂಡೆ ಯಕ್ಷಕರ್ದಮ ಮಕ್ಕುಂ ॥
ಮಗಮಗಿಸುವ ಸಜ್ಜರಸಂ ।
ಪೊಗಟಿತ್ತಿವೆತ್ತಿರ್ದ ಯಕ್ಷಧೂಪ ಮದಕ್ಕುಂ ॥ ೧೦ ॥

ಅಲತಗೆ ಜತು ಲಾಕ್ಷಾದ್ರವ ।
ಮಲಕ್ತಕಂ ಯೂವ ಮಿವು ಸಮಾನಾರ್ಥಂ ಕ ॥
ಜ್ಜಲ ಮಂಜನಾಭಿಧಾನಂ ।
ಮಳೆಯರುಹಂ * ಚಂದನದ್ರುಮಂ ಶ್ರೀಖಂಡಂ ॥ ೧೩ ॥

ಅವತಂಸೋತ್ತಂಸಾಪೀ ।
ಡವಚನ ಮದು ಶೇಖರಂ ಸ್ರಜಂ ಮಾಲ್ಯಂ ವು ॥
ಪ್ಪವಿಶೇಷರಚನ ಮುತ್ತಂ ।
ಸ ವತಂಸಂ ಕರ್ಣಪೂರವಾಚಿಯು ಮಕ್ಕುಂ ॥ ೧೪ ॥

ಕ್ಷೋದಂ ಸ್ನಾನೀಯಂ ಕ್ಷಣ ।
ದಾದಿತನುತ್ವಕ್‌ಪ್ರಸಾಧಕದ್ರವ್ಯ ಸಮು ॥
ತ್ಸಾದಿತ ಮುದ್ವರ್ತನ ಮು ।
ತ್ಸಾದಂ ಪಿಷ್ಟಾತಚೂರ್ಣ ಮದು ಪಟವಾಸಂ ॥ ೧೫ ॥

ವಸನಾಂಶುಕ ವಾಸ ಶ್ಚೀ ।
ಲ ಸಿಚಯ ವಸ್ತ್ರಾಂಬರಾಖ್ಯ ಮಾಚ್ಛಾದನ ಮಾ ॥
ವಸನಾಂತ ಮುಂಚಳಂವ ।
ರ್ತಿ ಸಿಚಂ ದಶೆ ಯಂಚು ವಸ್ತ್ರ † ಯಕ್ಕುಂ ಕರಿಗಳ್ ॥ ೧೬ ॥

ನವವಸ್ತ್ರಂ ಪೊಸತದು ನಿ ।
ಷ್ಪ್ರವಾಣಿ ತಾಂತ್ರಿಕ ವೆನಿಕ್ಕು ಮುದ್ಗಮನೀಯಂ ॥
ಪ್ರವಿಮಳ ಜಲಧೌತಂ ಜೀ ।
ರ್ಣವಾದುದನ್ತದು ಪಟಚ್ಚರಂ ತಾನಕ್ಕುಂ ॥ ೧೭ ॥

* ರೋಹಿಣೀದ್ರುಮಂ (ಹಲಾ). † ವಸ್ತ್ರಂ.

ಕಂ॥ ಕ್ರಿಮಿ ಕಾರ್ಪಾಸ ತ್ವಗ್ಲೋ ।
ಮ ಮೆಂದು ವಸ್ತ್ರಕ್ಕೆ ಯೋನಿ ನಾಲ್ಕಂತವಱಿಂಗಳ್ ॥
ಕ್ರಿಮಿಜಂ ಕೌಶೇಯಂ ತ್ವ ।
ಕ್ಸಮುದ್ಭವಂ ತಾಮವುಂ ದುಕೂಲ ಮುಮಕ್ಕುಂ ॥ ೧೪ ॥

ತಂತುಚಿತಂ ಕಾರ್ಪಾಸಕ ।
ಮಂತದು ಮೃಗಲೋಮಯೋನಿ ಯದು ರಾಂಕವ ವ ॥
ತ್ಯಂತಘನಂ ರಲ್ಲಕ ನಾ ।
ಮಾಂತರ ಮೂರ್ಣಾಯು ಮೇಷಕಂಬಳ ಮಕ್ಕುಂ ॥ ೧೫ ॥

ಪರಿಧಾನಂ ನಿವಸನ ಮುಂ ।
ತರೀಯ ಮೆಂದಿಂತಿವುಟ್ಟುದಕ್ಕೆ ಪೆಸರ್ ಪೞ್ ॥
ವರಣಂ ಪ್ರಚ್ಛಾದನ ಮು ।
ತ್ತರೀಯ ಮೆನೆ ಮೇಲುದದುವೆ ದಲ್ ಸಂವ್ಯಾನಂ ॥ ೧೦ ॥

ಅಕ್ಕರ॥ ವಾರವಾಣಕಂ ಕಂಚುಕಂ ಕೂರ್ಪಾಸಕಂ ನಿಚೋಲಕ ವ ।
ಧೌರೇಯಕಂ ಚಂದಾತಕಂ ಬೂರವಟ್ಟಗೆ ಬೃಹತಿಕಾಸಂಜ್ಞಿಕಂ ॥
ಚೀರಂ ಚೇಳಂ ಕರ್ಪಟಂ ಕಿಱಿಗಿಂ ನಿಣಟಂಕಾಸಿಮು? ।
ನಾರಿಯರ್ಕಳ ಜಘನಾಂಶುಕಗ್ರಂಥಿ ಕಣಯ ಮುಂತದು ನೀವಿ
ಯೆಂಬುದಕ್ಕುಂ ॥ ೧೧ ॥

ಕಂ॥ ಹೇಳಾ ವಿಳಾಸ ವಿಭ್ರಮ ।
ಲೀಳಾ ಬಿಬ್ಬೋಕ ಲಲಿತ ಹಾವಾಖ್ಯಂಗಳ್ ॥
ಬಾಳೆ ವಜೆಳೆ ಪೇಶಲದೊಳ್ ।
ಶಾಳದೊಳೆ? ಶೃಂಗಾರಭಾವಸಂಭೂತಂಗಳ್ ॥ ೧೨ ॥

ಗೀತಂ ಗಾನಂ ವಾದ್ಯಮು ।
ದಾತೋದ್ಯಂ ಲಾಸ್ಯ ತಾಂಡವಾಖ್ಯಂ ನೃತ್ಯಂ ॥
ಗೀತಾದಿ ತ್ರಿತಯಂ ಸಂ ।
ಗೀತಂ ತಾಂ ನಾಟ್ಯಭೂಮಿಯಕ್ಕುಂ ರಂಗಂ ॥ ೧೩ ॥

ಕಂ। ವಾದಿತದೊಳ್ ತಾಳದ ಸಮ ।
ನಾದುದು ಲಯ ಮೆಂಬುದೊಂದು ಪೆಸರ್ವಡೆಗುಂ ತ ॥
ದ್ವಾದನ ಮುದು ಕೋಣಂ ಪರಿ ।
ವಾದಿನಿ ವಲ್ಲಕಿ ವಿಪಂಚಿ ವೀಣಾನಾಮಂ ॥ ೨೪ ॥

ತತ ಮೆಂಬುದು ತಂತ್ರಿಯೊಳ ।
ನ್ವಿತ ಮಾದುದು ಸುಷಿರ ಮೆಂಬುದದು ವಂಶಾದ್ಯಂ ॥
ವಿತತ ಮವನದ್ಧ ಚರ್ಮಾ ।
ವೃತಂ ಘನಂ ಕಾಂಸ್ಯ ವಿನಿತೆ ವಾದ್ಯ ವಿಭೇದಂ ॥ ೨೫ ॥

ಮುರಜಂ ಮೃದಂಗ ವಾನಕ ।
ಮುರುಪಟಹಂ ಡಿಂಡಿವಮಾಭಿಧಾನಂ ಪಟಿವಂ ॥
ಪಿರಿದಪ್ಪ ಭೇರಿ ದುಂದುಭಿ ।
ಪರಿಶೇಷಂ ವಾದ್ಯ ಮಿವಱಿಂಗೊಳೊಳಪೊಕ್ಕಿರ್ಪಂ ॥ ೨೬ ॥

ನಾದಂ ಶಬ್ದಂ ಧ್ವಾನಂ ।
ಹ್ರಾದಂ ನಿರ್ವಾನಂ ರವಂ ಸ್ವರಂ ಘೋಷಂ ತ ॥
ದ್ಭೇದಂ ವಚನಂ ವ್ಯಾಹಾ ।
ರೋದೀರಣ ಕಥನ [ಭಾಷ] ಣಾದಿಕ ಮುಕ್ಕುಂ ॥ ೨೭ ॥

ಕಳಕಳವುದು ತಾಂ ಕೋಳಾ ।
ಹಳ ನಿನದಂ ಗ್ರಾವ್ಯವಚನ ಮುಕ್ಲೀಲಾಖ್ಯಂ ॥
ಕಳ ಮವ್ಯಕ್ತಂ ಮಧುರಂ ।
ಪ್ರಳಾಪ ಮುಕ್ಕುಂ ನಿರರ್ಥಕಂ ವ್ಯಾಹಾರಂ ॥ ೨೮ ॥

ಪರಿದೇವನಂ ವಿಳಾಪಂ ।
ಪರಸ್ಪರಾಲಾಪ ಮುಕ್ಕುಮದು ಸಲ್ಲಾಪಂ ॥
ಪರಪರಿವಾದ ಪರವ್ಯಾ ।
ಹರಣ ಮುಪಾಲಂಭ ಮನುಚಿತಾರ್ಥ ವಬದ್ಧಂ ॥ ೨೯ ॥

ಕಂ॥ ತಾರ ಮದುಚ್ಚೈಃ ಧ್ವನಿ ಗಂ ।
ಭೀರಂ ಮಂದ್ರಂ (ಸು)ಸಂಗತಂ ಸ್ವಾದು ಮನೋ ॥
ಹಾರಿ ಪರುಷಂ ಕಠೋರ ಮ ।
ಹಾರುತ ಮುಚ್ಚಾವಚಾಖ್ಯ ಮನಿಬದ್ಧವಚಂ ॥ ೩೦ ॥

ತ್ವರಿತೋಚ್ಚಾರಿತ ವಕ್ಯುಂ ।
ನಿರಸ್ತ ವ [ದು] ಲುಪ್ತ ವರ್ಣ ವಾಕ್ಯಂ ಗ್ರಸ್ತಂ ॥
ದರಮುಸ್ಪಷ್ಟಂ ಕಂಠಾಂ ।
ತರ ವಿಕೃತಿ ವಿಭಿನ್ನರುತಿ [ಯ್ಕಿ]ಕಾಕು ವೆನಿಕ್ಕುಂ ॥ ೩೧ ॥

ಮನಮನೊಜಿಲ್ಲುವ ನುಡಿ ಬಾ ।
ಟು ನಿಯತ·ಮಂಬೂಕೃತಂ ಸನಿಷ್ಠೀವಂ ಪ ॥
ರ್ಯನುಯೋಗಂ ಪ್ರಶ್ನಂ ತಾಂ ।
ಜನವಾದಂ ಕಿಂತದಂತಿ ವಾರ್ತೆ ಯದಕ್ಕುಂ ॥ ೩೨ ॥

ಋತ ವೆಂಬುದದು ಸವಿಾಚೀ ।
ನ ತಥ್ಯೆ ಸತ್ಯೋಕ್ತಿ ಸೂನೃತಂ ಪ್ರಿಯಸತ್ಯಂ ॥
ವಿತಥ ಮಲೀಕಂ ಮಿಥ್ಯೋ ।
ಕ್ತಿ ತಾಂ ಮೃಷಾವಾದ ಮಧಿಕಮಧುರಂ ಸಾಂತ್ವಂ ॥ ೩೩ ॥

ಅಪವಾದಂ ಕ್ಷೇಪಂ ನಿಂ ।
ದೆ ಪರೀವಾದಂ ವಿಗರ್ಹಣಂ ಕುತ್ಸಾರ್ಥಂ ॥
ಶಪಥಂ ಸೂರುಳ್ ಬಯ್ಗುಳ್ ।
ಶಪನ ಮುದಾಕ್ರೋಶನಾವಮುಮುಂ ತಾನಕ್ಕುಂ ॥ ೩೪ ॥

ನುತಿ ಸಂಸ್ತವನಂ ಸ್ತೋತ್ರಂ ।
ಸ್ತುತಿ ವಂದನ ವಿಾಡೆ ಕೀರ್ತನಂ ಗುಣಕಥನಂ ॥
ಅತಿವಿತತ ಕೀರ್ತಿ ಗುಣವ ।
ತ್ಕೃತತಿ (ಯ) ವರ್ಣ ನೆಸತಂ ? ಜಿನೋದಾಹರಣಂ ॥ ೩೫ ॥

ಕಂ॥ ಆಖ್ಯಾಹ್ವ ನಾಮ ಗೋತ್ರಾ ।
ಖ್ಯಾಹ್ವಯ ಸಂಜ್ಞೆಗಳ್ ಸಮಾನಾರ್ಥಂಗಳ್ ॥
ಆಖ್ಯಾಯಿಕೆ ಕಥೆ ಯೆಂಬುವಿ ।
ವಾಖ್ಯಾನ ವೊಗಂಟಿ ತಾಂ ಪ್ರಹೇಳಿಕೆ ಯಕ್ಕುಂ ॥ ೭೬ ॥

ಕ್ವಣಿತಂ ವೀಣಾಧ್ವನಿ ಭೂ ।
ಷಣರಣಿತಂ ಕಿಂಜಿತಂ ರತಪ್ರಧ್ವಾನಂ ॥
ಮಣಿತಂ ಬೃಂಹಿತ ಮದು ವಾ ।
ರಣಶಬ್ದಿತ ಮಶ್ವವಿರುತಿ ಹೇಷಿತ ಮಕ್ಕುಂ ॥ ೭೭ ॥

ಪರಿಶುಷ್ಕಪರ್ಣವನೋ ।
ದಿರವಂ ಮರ್ಮರ ಮೆನಿಕ್ಕು ಮಸ್ಫುಟಸೂಕ್ಷ್ಮಂ ॥
ಸ್ವರ ಮದು ತಾಂ ಕಾಕಳಿ ವಿವಿ ।
ಧರೂಪಶಸ್ತ್ರಪ್ರಣಾದ ಮದು ಖಣಾಂಗಂ ? ॥ ೭೮ ॥

ಕ್ರೇಂಕಾರಂ ಶಕುನಿಗಳೊಳ್ ।
ಝಂಕಾರಂ ತುಂಬಿಯೊಳ್ ಧನುಜ್ಯಾರುತಿಯೊಳ್ ॥
ಟಂಕಾರಂ ವಿರಹೋತ್ಥಂ ।
ಭೇಂಕಾರಂ ವಿರಹ ಯೋಗದೊಳ್ ಹೂಂಕಾರಂ ॥ ೭೯ ॥

ಖಾತ್ಕಾರಂ ಸ್ಮೀವನದೊಳ್ ।
ಫೀತ್ಕಾರ ಮುದಾರಕಲಭಕೋಳಾಹಳೆದೊಳ್ ॥
ಝೂತ್ಕಾರಂ ಮಾರುತನೊಳ್ ।
ಚೀತ್ಕಾರಂ ಸ್ಯಂದನಂಗಳೊಳ್ ವರ್ತಿಸುಗುಂ ॥ ೮೦ ॥

ಇಂತು

—ಭೂಷಣಾದಿವರ್ಗಂ—

ಶ್ರೀ ವೀತರಾಗಾಯನಮಃ.

ನಮಸ್ಸಿದ್ಧೇಭ್ಯಃ

೧ ಅವಿಭಿನ್ನಾರ್ಥಕಾಂಡಂ. ೧೪ ಸಮರಾದಿಸಂಪ್ರಕೀರ್ಣವರ್ಗಂ.

ಕಂ॥ ಸಮರಂ ಸಂಗಾಮಮುಂ ಯು ।
ದ್ಧ ಮಾಜಿ ಯಾಯೋಧನಂ ಸಮಿತಾಕಂ ಕದನಂ ॥
ಸಮಿತಿ ರಣಂ ಪ್ರಧನಂ ಜ ।
ನ್ಯ ಮಾಹವಂ ಸಂಯುಗಂ ಪ್ರಘಾತಂ ಕಲಹಂ ॥ ೧ ॥

ಅಭಿಷೇಣನ ಮುಕ್ಕುಂ ರಿವು'।
ಗಭಿಮುಖದೊಳ್ [ಪಡೆವೆರಸಿ ನಡೆವುದದಕ್ಕುಂ] ॥
ಸುಭಟಪ್ರಮೋದಕರಯು ।
ದ್ಧಭೂಮಿ ವೀರಾಸನಂ ಮಹಾ ಪ್ರತಿಭಯದಂ ॥ ೨ ॥

ಸಮರಾಂಗಣದಿಂ ತೊಲಗದ ।
ಸಮು[ಯರ್ ಸಂ] ಸಪ್ತಕರ್ ಬಲಂಗಳ್ ತಾಮು ॥
ಕ್ರಮದಿಂ ತಳ್ತಿಱಿವುದು [ತಾಂ] ।
ತುಮುಳೆ ರಣಂ ಬಾಹುಯುದ್ಧ ಮಾರಣಯುದ್ಧಂ ॥ ೩ ॥

ವಿಶಸನ ಮಾರಣ ವಿಶರಣ ।
ನಿಶುಂಭನ ಕ್ಷಣನ ಸೂದನ ಪ್ರತಿಘಾತಂ ॥
ಪ್ರಶಮನ ವರ್ಜನ ಬರ್ಹಣ ।
ವಿಶರಣ ಹಿಂಸಾರ್ಥಕಂ ವಧಂ ತಾನಕ್ಕುಂ ॥ ೪ ॥

ಜಿತಕಾಶಿ ಜಿತಾಜಿ ಭಯ ।
ದ್ಭುತನಪ್ಪಂ ಕಾಂದಿಶೀಕ ನಾಹವಧರೆಯೊಳ್ ॥
ಪತಿತಂ ಪ್ರಸ್ಕನ್ನಂ ಕಾ ।
ದಿ ತಟ್ಟುಗಿದು (ರಣದೆ) ತೆಗೆದನಕ್ಕುಂ ನಿಷ್ಪಂ ॥ ೫ ॥

ಕಂ॥ ವಿಜಯ ಪತಾಕೆ ಯದಕ್ಕುಂ ।
ಧ್ವಜ ಕೇತನ (ಕೇತು) ವೈಜಯಂತೀ ನಾಮಂ ॥
ಗಜ ತುರಗ ರಥ ಪದಾತಿ ।
ವ್ರಜಂ ವರೂಥಿನಿಗೆ ನಾಲ್ಕು ಮುಂಗಮುದಕ್ಕುಂ ॥ ೬ ॥

ಪೃತನಾನೀಕ ಧ್ವಜಿನೀ ।
ಪತಾಕಿನೀ ಸೇನೆ ಬಳ ಚಮೂ ಚಕ್ರಾಖ್ಯಂ ॥
ಚತುರಂಗಂ ಸೇನೆ ಸಮು ।
ನ್ವಿತವಿವಿಧವ್ಯೂಹನಿವಹ ಮಕ್ಷೌಹಿಣಿ ತಾಂ ॥ ೭ ॥

ಅಕ್ಕರವೃತ್ತಂ॥
ಒಂದುಸಾಮಜ ವೊಂದುತೇರ್ ಮೂಱಿಶ್ವವೆಯ್ದು ಕಾಲಾಳ್ಗಳ್ ಪತ್ತಿಯಕ್ಕುಂ ।
ಸಂದ ಪತ್ತಿಮೂಱುಗೆ ಸೇನಾಮುಖ ಮಾಮೂಱು ಗುಲ್ಮಂ ಮೂಱು ಗುಲ್ಮ ॥
ಕ್ಕೊಂದು ಗಣ ಮವು ಮೂಱು ವಾಹಿನಿ ತತ್ತ್ರಯಂ ಪೃತನಾಖ್ಯೆ ಪೃತನೆಗಳ್ ಮೂ ।
ಱಿರೊಂದಿ ತೋಱಿರೆ ಚಮೂ (ವದು) ಮೂಱಿನೀಕಿನಿ ಪತ್ತನೀಕಿನಿಯಕ್ಷೌಹಿಣಿ ಯೆನಿಕ್ಕುಂ ॥ ೮ ॥

ಕಂ॥ ಅಗ್ರೇಸರಂ ಪುರಸ್ಸರ ।
ನಗ್ರಣಿ ಮುಖ್ಯಂ ಪುರೋಗಮಂ ಪ್ರಮುಖಂ ನಿ ॥
ರ್ವ್ಯಗ್ರತೆಯಿಂದಂ ಪಗೆವನ ।
ಮಾಗ್ರಹದಿಂ ನಡೆಯಿಪಂ ಚಮೂಪತಿಯಕ್ಕುಂ ॥ ೯ ॥

ಪದಿಕಂ ಪತ್ತಿ ಪದಾತಂ ।
ಪದಾತಿ ಪಾದಾತಿಕಂ ಪದಾಜಿಗೆ ನಾಮಂ ॥
ಕದನದೊಳದಿರದೆ ಪಗೆವಡೆ ।
ಗಿದಿರ್ಚಿ ನಡೆವಾತ ನಭ್ಯಮಿತ್ರೀಣ ನವಂ ॥ ೧೦ ॥

ಕಂ॥ ಅರದಾರೋಹಂ ತಾಂ ರಥಿ ।
ತುರಂಗವಾರೋಹ ನಟಿಗೆ ಸಾದಿ ಸವಾಖ್ಯಂ ॥
ದ್ವಿರದಾರೋಹಂ ಯುದ್ಧೋ ।
ದ್ಧುರಮನ ನಾಥೋರಣಂ ನಿಷಾದಿ ಯೆನಿಕ್ಕುಂ ॥ ೧೧ ॥

ಕವಚಂ ಜಗರಂ ಸನ್ನಾ ।
ಹ ವುರಚ್ಛದ ಮುಂಗರಕ್ಷೆ ಕಂಕಟಕಂ ವ ॥
ರ್ಮವಿನಿತ್ತುಂ [ಕವಚಾಖ್ಯಂ] ।
ಕವಚಿತ ನಾಮುಕ್ತ ನೆನಿಸುಗುಂ ಸನ್ನದ್ಧಂ ॥ ೧೦ ॥

ಶಸ್ತ್ರಂ ಪ್ರಹರಣ ಮಾಯುಧ ।
ಮುಸ್ತ್ರಂ ಹೇತಿಗೆ ಸವಾಖ್ಯೆ ಕೇವಳ ಮಕ್ಕುಂ ॥
ಶಸ್ತ್ರಿಕೆ ಯಪ್ಪಿ ಕಿಲೀಮುಖ ।
ನಿಸ್ತ್ರಿಂಶ ಪ್ರಭೃತಿ ತದ್ವಿಶೇಷಕ ಮಕ್ಕುಂ ॥ ೧೩ ॥

ಶಕ್ತಿ ವೊದಲಾಗೆ ಪಾಣಿ ವಿ ।
ಮುಕ್ತಂ ಛುರಿಕಾದಿ ತಾ ನಮುಕ್ತಂ ಯಂತೊಗೆ: ॥
ನ್ಮುಕ್ತಂ ಶರಾದಿ ಮುಕ್ತಾ ।
ಮುಕ್ತಂ ಯಷ್ಟ್ಯಾದಿಕಂ ತದಸ್ತ್ರಾಂತರದೊಳ್ ॥ ೧೪ ॥

ಪರಶು ಕುಠಾರಾಭಿಖ್ಯಂ ।
ಪರಶ್ವಧಂ ಸ್ವಧಿತಿ ಯೆಂಬುದಕ್ಕುಂ ಪತ್ರಂ ॥
ಕ್ಷುರಿಕಾಸಿಧೇನು ಸಂಜ್ಞಾಂ ।
ತರ ಮದು ತಾಂ ಸುರಿಗೆ ಕೊಂತ ವೆನಿಕುಂ ಪ್ರಾಸಂ ॥ ೧೫ ॥

ಅಸಿ ಖಡ್ಗಂ ಬಾಳ್ಹಾಸಂ ।
ಪೆಸರಿಂ ಕೌಕ್ಷೇಯಕಂ ಕೃಪಾಣಾಹ್ವಂ ಮ ॥
ತ್ತಸಿ ನಿಸ್ತ್ರಿಂಶಂ ಕರವಾ ।
ಲ ನಾಯಕಂ ರಿಷ್ಟಿ ಮಂಡಲಾಗ್ರಂ ಖಳ್ಗಂ ॥ ೧೬ ॥

ಕಂ॥ ಧನು ಕೋದಂಡಂ ಬಾಣಾ ।
ಸನ ಮಸ್ತ್ರಂ ಕಾರ್ಮುಕಾಖ್ಯ ಮದು ಚಾಪಂ ಸಿಂ ॥
ಜಿನಿ ಜೀವೆ ಮೌರ್ವಿ ಗುಣ ಮೆಂ ।
ಬಿನಿತುಂ ಜ್ಯಾನಾಮ ಮಟನಿ ಕೊಪ್ಪಟಿಗದಟಿಕೊಳ್ ॥ ೧೭ ॥

ವಿಶಿಖ ಪ್ರದರಾಶುಗ ಪ ।
ತ್ರ ಕಿಳೀಮುಖ ಕಂಕಪತ್ರ ಮಾರ್ಗಣ [ಖಗ ಬಾ ॥
ಣ] ಶರೇಷು ಸಂಜ್ಞೆ ಮಟಿಗಂ ।
ಖು ಶರವ್ಯ [ನಿಮಿತ್ತ] ವೇಧ್ಯ ಮುಂತದು ಲಕ್ಷ್ಯಂ ॥ ೧೮ ॥

ತೂಣೀರ ಮುಪಾಸಂಗಂ ।
ಬಾಣಧಿ ಬಾಣಾಶ್ರಯಂ ನಿಷಂಗಂ ಡೊಣೆಗಳ್ ॥
ಬಾಣದ ಪಿಟಿಕೆದು ವುಂಖಂ ।
ಬಾಣದ ಗಟಿಕೆ ಪತ್ರಪಾಳಿ ವಾಜ ಪೆನಿಕ್ಕುಂ ॥ ೧೯ ॥

ಗುಣ ನಿರ್ಘಾತ ಪ್ರತಿ ವಾ ॥
ರಣ ಮುಕ್ಕುಂ ಗೋಧ ಮದುವೆ ದಲ್ ಕೆಯ್ಪೊಡೆಯುಂ ॥
ಗುಣನಿಕೆ ತಾನಭ್ಯಾಸಂ ।
ಗುಣನಾಸ್ಥಾನಂ ಖಳೊರಿಕಾಭಿಖ್ಯಾನಂ ॥ ೨೦ ॥

ವಸುವಂದಂ ಬೇಟಕ ಮು ।
ಲ್ಲಸಿತ ತ್ಸರು ಖಡ್ಗಮುಷ್ಟಿ ಕೋಶಂ ಕಲಹಂ ॥
ಮಿಸುಗುತ್ತಿಪ್ಪರ್ಗ್ಗಂ ತಾ ।
ಮೆ ಶಾಣೆ (ನಿಕಷಂ ಕಷಾ) ಹ್ವಯಂ (ವೇಧನಿಕಂ) ॥ ೨೧ ॥

ತುರಗಂ ಯಯು ಸಪ್ತಿ ಹಯಂ ।
ತುರಂಗಮುಂ ವಾಜಿ ವಾಹ ಮುಶ್ವಂ ತಾರ್ಕ್ಷ್ಯಂ ॥
ಹರಿ ಘೋಟಕ ಮರ್ವಾಖ್ಯಂ ।
ತುರಂಗಮೆನೆ ಕುದಿರೆ ಬಡಬೆ ವಾಮಿ ಯೆನಿಕ್ಕುಂ ॥ ೨೨ ॥

ಕಂ॥ ಆಜಾನೇಯಂ ವಿನುತ ಕು ।
ಲೇಜಾತಂ ತುರಗ ಸಮಿತಿ ಬಾಹ್ಲೀಕಂ ಕಾಂ ॥
ಭೋಜ ಹಯಂ ವಾನಾಯುಜ ।
ವಾಜಿಕುಳಂ ಪಾರಸೀಕ ಮೆಂದಱಿಗವಱಿತೊಳ್ ॥ ೨೩ ॥

ಸಿತವರ್ಣಂ ಕರ್ಕಂ ಲೋ ।
ಹಿತ ಮಕ್ಕುಂ ಶೋಣ ಮುಸಿತವರ್ಣಂ ಹೇವುಂ ॥
ಸಿತ ಚಕ್ಷು [ಮುಳ್ಳಿ] ಕಾಖ್ಯಂ ।
ಸಿತೇತರಾಖ್ಯಂ ತುರಂಗ ಮಿಂದ್ರಾಯುಧನುಂ ॥ ೨೪ ॥

ಶಿಶು ಶಾಬಂ ಪೋತಂ ಮಱಿ ।
ಕಿಶೋರಕಂ ಸೂಕಳಾಹ್ವಯಂ ದುಷ್ಟಾಶ್ವಂ ॥
ಕು [ಶ] ರಶ್ಮಿ ಪ್ರಗ್ರಹ ಮದು ।
